Mr. SPEAKER.—Normally, I would not allow such questions because if I once allow it becomes a precedent and it becomes like an answer to a Starred Question and supplementaries. Rule 63 specifically says that a statement made by the concerned Minister shall not form the subject matter of any questions at the moment.

Sri S. M. KRISHNA.—Once I had drawn your attention to the practice in the Lok Sabha and the Rajya Sabha and you were convinced. Last time, I showed the relevant proceedings to you, Sir.

Mr. SPEAKER.—Why not the member suggest that the rule be amended?

Sri S. M. KRISHNA.—If need be, it will have to be done.

Sri S. NIJALINGAPPA (Cheif Minister).—Sir, I have already stated that the matter is under investigation by the police. I do not want to prejudice the investigation by making any statement at this stage. Everything will be done.

MYSORE CONTINGENCY FUND (AMENDMENT) BILL, 1965.

Introduction

Sri H. R. ABDUL GAFFAR (Deputy Minister for Finance).—Sir, I beg to introduce the Mysore Contingency Fund (Amendment) Bill, 1965.

Mr. SPEAKER.—The Bill is introduced. It has also been intimated that the recommendation of the Governor has been received.

MOTION *Re*: MEASURES TO STEP UP FOOD PRODUCTION AND TO PREVENT ANY SCARCITY IN THE STATE.

(Debate continued.)

Mr. SPEAKER.—There has been a number of requests from the members that they should be given a chance of five minutes each. Yesterday I studied the whole matter. Last night I spent an hour over this. There are 42 members whose names came to me of whom 8 or 9 are from the Opposition and the rest are from the Ruling Party. Repeated and sincere requests from the members have made me feel that I should try to give them a chance. On how best I can do that, I should like to have some guidance from the Chief Minister and members.

Sri S. NIJALINGAPPA.— You have been pleased to say that this is an important matter and that is the feeling of the House also. I do not want to do anything by way of putting any limitations. I leave it entirely to you. If you think it necessary the whole day may be given, I have no objection.

Mr. SPEAKER.—The difficulty comes in this way. One of the oldest and perhaps the seniormost member Sri Hulkoti made a request to me to give him a chance. There are 46 members who want to speak.

Sri S. M. KRISHNA.—In view of the fact that there are so many members who are anxious to participate in this Debate–and I take it that the Chief Minister and the Minister for Food are going to intervene in the Debate—I suggest that the whole of today may be taken up by Members. and on Monday the Ministers may reply.

Mr. SPEAKER.—How are we to adjust the other work ? Can I take it that I can count Monday also as a non-official day for this ? In that case I am prepared and I will give the whole of Monday against for this debate

Sri B. BHASKER SHETTY (Kaup).—Yes.

Mr. SPEAKER.—I will, however, try to adjust, but otherwise I will take it that 2 non-official days have been adjusted.

Sri M. V. RAMA RAO (Minister for Law).—May I submit that a large number of Hon'ble Members who have spoken already on this matter have said very important things concerning distribution of fertilzer, seed grains and the difficulties experienced in certain areas in regard to electrification of pumpsets already installed and the availability of pumpsets either from within or from other sources. If there are suggestions in regard to food production which relate to matters not so far touched, you may perhaps allow the Debate to take its own course in regard to this matter and I would suggest that you may consider the usefulness of allowing further Debate in regard to matters which have already been spoken about, on the Floor of this House for a considerable time and by a large number of Hon'ble Members.

Mr. SPEAKER.—With regard to that aspect, my own feeling is that I have held it too tight interfering with the Members even a little unkindly whenever they were repeating arguments and making generalisations, by asking them to come to the point.

Sri S. NIJALINGAPPA.—I submit that now that two non-official days have been adjusted for this Debate, on Monday we may sit at about 9 o 'clock and we may make our statements intervening in the Debate. All that can take place on Monday and let the Members have their full day today. We may meet on Monday at 9 o' clock in the morning and finish by about 11-30 A.M. or 12. NOON.

Mr. SPEAKER.—I have no objection. That means on Monday we shall sit in the morning from 9 A. M. to 12 NOON for the reply and in the afternoon we shall again meet at 3 P. M. and sit for some 3 hours for other work.

Sri S. SIVAPPA (Shravanabelagola).—I suggest that out of the 3 Ministers who are going to participate in this Debate, at least one of them may give a lead today saying what are the measures the Government are going to take so that it will help the other Members to suggest what other measures have to be taken.

Mr. SPEAKER.—Yes, the Minister for Agriculture will intervene now. I would appeal to all Hon'ble Members never to repeat what has already been said. I know Memebrs' anxiety to suggest what schemes should, be taken up in their individual constituencies and to some extent they are right. So after the Hon'ble Minister for Agriculture finishes,

(MR. SPEAKER)

the rest of the day may be taken up by members. I will try to accommodate as many members as possible, but on no account will I allow Members to carry the Debate for Monday. Let them adjust amongst themselves and they must not feel hurt when I call upon them to close.

ಶ್ರೀ ಜಿ. ನಾರಾಯಣ ಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಎರಡು ದಿವಸಗಳಿಂದ ನಮ್ಮ ರಾಜ್ಯದಲ್ಲಿ ಆಹಾರ ಉತ್ಪತ್ತಿಯ ವಿಷಯದಲ್ಲಿ ಚರ್ಚೆ ನಡೆಯುತ್ತಿದೆ. ಕೆಲವು ಮಾನ್ಯ ಸದಸ್ಯರುಗಳು ಈ ಸಂದರ್ಭದಲ್ಲಿ ಕೆಲವು ರಚನಾತ್ಮಕವಾದ ಸಲಹೆಗಳನ್ನೂ ಕೊಟ್ಟಿದ್ದಾರೆ. ಇನ್ನು ಕೆಲವರು ಕಟುವಾದ ಟೀಕೆಯನ್ನೂ ಮಾಡಿದ್ದಾರೆ. ಇವರೆಲ್ಲರ ಸಲಹೆಗಳನ್ನೂ ನಾನು ಗಮನದಲ್ಲಿಟ್ಟುಕೊಂಡು ಉತ್ಪತ್ತಿ ಎಷ್ಟು ಮಾತ್ರ ನಡೆದಿದೆ ಎನ್ನುವ ವಿಷಯದಲ್ಲಿ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ಇಡಲು ಬಯಸುತ್ತೇನೆ. ಕೆಲವು ಮಾನ್ಯ ಸದಸ್ಯರುಗಳು ಸ್ವಾತಂತ್ರ್ಯ ಬಂದು ಹದಿನೆಂಟು ವರ್ಷಗಳಾದರೂ ಪಂಚ ವಾರ್ಷಿಕ ಯೋಜನೆಗಳು ಪ್ರಾರಂಭವಾಗಿ 10-15 ವರ್ಷಗಳಾದರೂ ಆಹಾರದ ವಿಷಯದಲ್ಲಿ ನಮ್ಮ ರಾಜ್ಯ ಸ್ವಾವಲಂಬನೆಗೆ ಪ್ರಯತ್ನ ಪಟ್ಟಿಲ್ಲ ಎನ್ನುವ ವಿಷಯವನ್ನೂ ಹೇಳಿದ್ದಾರೆ. ಮಾನ್ಯ ಸಭೆಯ ಸದಸ್ಯರುಗಳೆಲ್ಲರಿಗೂ ತಿಳಿದಹಾಗೆ ಭಾರತದೇಶದಲ್ಲಿ ಅಹಾರದ ಕೊರತೆ ಇದೆ. ಎಲ್ಲ ರಾಜ್ಯಗಳೂ ಹೆಚ್ಚು ಅಹಾರವನ್ನು ಉತ್ಪತ್ತಿ ಮಾಡುತ್ತಿವೆ. ಕೆಲವು ರಾಜ್ಯಗಳು ಎಷ್ಟು ಬೇಕೋ ಅಷ್ಟು ಉತ್ಪತ್ತಿ ಮಾತ್ರ ಮಾಡುತ್ತಿವೆ. ಹಾಗೂ ಮೈಸೂರು ಸರಕಾರ ಸಹ ಅಹಾರದ ವಿಷಯದಲ್ಲಿ ನಮಗೆ ಎಷ್ಟು ಬೇಕಾಗಿತ್ತೊ ಅದಕ್ಕಿಂತ ಕಡಿಮೆಯಾಗಿ ಉತ್ಪತ್ತಿ ಮಾಡುತ್ತಿದೆ. ಮೊದಲನೇಯ ಪಾಂಚ ವಾರ್ಷಿಕ ಯೋಜನೆಯಲ್ಲಿ ನಾವು ಒಂದು ಏನು ಉತ್ಪತ್ತಿಯ ಗುರಿ ಇಟ್ಟುಕೊಂಡಿದ್ದೆವೋ ಅದಕ್ಕಿಂತ ಹೆಚ್ಚಾಗಿ ಸಾಧಿಸಿದ್ದೇವೆ ಎನ್ನುವುದೂ ತಮ್ಮ ಮುಂದೆ ಇದೆ. ಆದರೂ ಕೂಡ. . . .

ಶ್ರೀ ಬಿ. ಚನ್ನಬೈರೇ ಗೌಡ (ಹೊಸಕೋಟೆ).—ಹಣವನ್ನೆನೋ ಬೇಕಾದ ಹಾಗೆ ಖರ್ಚು ಮಾಡಿದ್ದೀರಿ.

ಶ್ರೀ ಜಿ. ನಾರಾಯಣಗೌಡ.—ಹಣ ಖರ್ಚು ಮಾಡಿದ್ದಷ್ಟಕ್ಕೂ ಉತ್ಪತ್ತಿಯೂ ಆಗಿದೆ. ಮೊದಲನೇ ಯೋಜನೆಯಲ್ಲಿ ನಮ್ಮ ಗುರಿ 97 ಸಾವಿರ ಟನ್ನುಗಳಷ್ಟು ಎಂದಿದ್ದರೂ ಅದಕ್ಕಿಂತಲೂ ಅಧಿಕ ಉತ್ಪತ್ತಿ ಮಾಡಬೇಕೆಂದಿತ್ತು. ಆದರಂತೆ ನಾವು 2,12,000 ಟನ್ನುಗಳಷ್ಟು ಉತ್ಪತ್ತಿ ಮಾಡಿದ್ದೇವೆ. ಹಾಗೆ ಎರಡನೇ ಯೋಜನೆಯಲ್ಲಿ 5,10,000 ಟನ್ನುಗಳಷ್ಟು ಉತ್ಪತ್ತಿ ಮಾಡಬೇಕೆಂದು ಗುರಿ ಇತ್ತು. 5,30,000ಟನ್ನುಗಳಷ್ಟು ನಾವು ಸಾಧಿಸಿದ್ದೇವೆ.

ಹೀಗೆ ನಾವು ನಮ್ಮ ಮೂರನೇ ಪಂಚ ವಾರ್ಷಿಕ ಯೋಜನೆಯಲ್ಲಿ ಆಹಾರದ ಅಧಿಕ ಉತ್ಪನ್ನವನ್ನು 10 ಲಕ್ಷ ಟನ್‌ಗಳಿಗೆ ನಿಗದಿ ಮಾಡಿಕೊಂಡಿದ್ದೆವು. ಈ 10 ಲಕ್ಷ ಟನ್‌ಗಳನ್ನು ನಾವು ಯಾವ ಆಧಾರದ ಮೇಲೆ ನಿಗದಿ ಮಾಡಿಕೊಂಡಿದ್ದೆವು ಎಂಬುದನ್ನಾಗಲೇ ತಿಳಿದುಕೊಂಡಿದ್ದ ಒಬ್ಬೊಬ್ಬ ಮಾನ್ಯ ಸದಸ್ಯರು ಅದನ್ನು ವ್ಯಕ್ತಪಡಿಸಿದ್ದಾರೆ. ಆದಾಗ್ಯೂ ಆ ವಿಚಾರವನ್ನು ನಾನೀಗ ಇಲ್ಲಿ ವಿಷದಪಡಿಸುವುದು ಸೂಕ್ತ ಎಂದು ಕಾಣುತ್ತದೆ. ಮೇಜರ್ ಮತ್ತು ಮೀಡಿಯಂ ಪ್ರಾಜೆಕ್ಟ್‌ಗಳಿಂದಲೂ ಮತ್ತು ರಾಸಾಯನಿಕ ಗೊಬ್ಬರದ ಉಪಯೋಗದಿಂದಲೂ ಈ ಹೆಚ್ಚು ಉತ್ಪನ್ನವನ್ನು ಮಾಡಬೇಕೆಂದು ಮಾಡಿದ್ದೆವು. ಆದರೆ ನಮಗ ಬೇಕಾಗಿರತಕ್ಕ ರಾಸಾಯನಿಕ ಗೊಬ್ಬರದ ವಿಚಾರ ಎಲ್ಲ ಮಾನ್ಯ ಸದಸ್ಯರಿಗೂ ಗೊತ್ತಿದೆ. ನಮಗೆ ಅಗತ್ಯವಾಗಿರತಕ್ಕ ರಾಸಾಯನಿಕ ಗೊಬ್ಬರದ ಪ್ರಮಾಣ 5 ಲಕ್ಷ 51 ಸಾವಿರ ಟನ್ ಉತ್ಪತ್ತಿಯಾಗತಕ್ಕ ಗೊಬ್ಬರದಲ್ಲಿ ನಮಗೆ ದೊರೆತಿರುವುದು ಎಷ್ಟು ಎಂಬುದನ್ನು ಹೇಳಿದರೆ ಆಗ ತಮಗೆ ಇದು ವಿಷದವಾಗಿ ಗೊತ್ತಾಗುವುದು. ನಾವು ರಾಸಾಯನಿಕ ಗೊಬ್ಬರವನ್ನು ಬಿಟ್ಟುಕೊಂಡು ಬರೀ ಮೇಜರ್ ಮತ್ತು ಮೀಡಿಯಂ ಪ್ರಾಜೆಕ್ಟ್‌ಗಳನ್ನೇ ನಂಬಿಕೊಂಡು 99 ಲಕ್ಷ ಟನ್ ಆಹಾರವನ್ನು ಹೆಚ್ಚಿಗೆ ಉತ್ಪನ್ನಮಾಡಬೇಕೆಂದು ಗುರಿಯಿಟ್ಟುಕೊಂಡಿದ್ದೆವು. ಆದರೆ, ತಮಗೆಲ್ಲರಿಗೂ ಗೊತ್ತಿರುವಂತೆ ನಾವೇನು ಈ ಉತ್ಪತ್ತಿಗೆ ಒಂದು ಸಂಪನ್ಮೂಲವನ್ನು ಇಟ್ಟುಕೊಂಡಿದ್ದೇವೋ ಅದರಿಂದ ಅದು ಸಾಕಷ್ಟು ದೊರೆಯದೆ ನಾವಿಟ್ಟುಕೊಂಡಿದ್ದ ಗುರಿಯನ್ನು ಮುಟ್ಟಲು ಸಾಧ್ಯವಾಗಲಿಲ್ಲ. ನಾವು ಗುರಿಯಿಟ್ಟುಕೊಂಡಿದ್ದ 11 ಲಕ್ಷ ಎಕರೆಗಳಲ್ಲಿ ಕೇವಲ ನಾಲ್ಕೂವರೆ ಲಕ್ಷ ಎಕರೆಗಳಲ್ಲಿ ಮಾತ್ರ ಹೆಚ್ಚು ಬೆಳೆ ತೆಗೆಯಲು ಸಾಧ್ಯವಾಗಿದೆ. ಇನ್ನು ಉಳಿದ ಆರೂವರೆ ಲಕ್ಷ ಎಕರೆಗಳಲ್ಲಿ ಹೆಚ್ಚು ಬೆಳೆ ತೆಗೆಯತಕ್ಕ ಸಾಧ್ಯತೆ ಇನ್ನೂ ಇರುತ್ತದೆ. ಮುಂದಿನ ವರ್ಷದ ಅಧಿಕ ಉತ್ಪತ್ತಿಗೆ ಇದು ಕಾರಣವಾಗಬಹುದು. ನಮಗೆ ಅಗತ್ಯ

†Indicates that the remarks or speeches have not been revised by the member concerned.

ವಿರತಕ್ಕ ರಾಸಾಯನಿಕ ಗೊಬ್ಬರ ಎಷ್ಟು ಮತ್ತು ನಮಗೆ ಸರಬರಾಯಿ ಆದುದೆಷ್ಟು ಎಂಬುದನ್ನು ತಮಗೆ ಅಂಕೀಅಂಶಗಳ ಮೂಲಕ ತಿಳಿಸಬೇಕೆಂದಿದ್ದೇನೆ. 1961 ರಲ್ಲಿ ನಮಗೆ ಅಗತ್ಯವಿದ್ದ ರಾಸಾಯನಿಕ ಗೊಬ್ಬರದ ಪ್ರಮಾಣ 1 ಲಕ್ಷ 46 ಸಾವಿರದ 390 ಟನ್. ನಮಗೆ ಸಪ್ಲೈಯಾಗಿರತಕ್ಕದ್ದು 62 ಸಾವಿರದ 498 ಟನ್. ಇನ್ನು 1962—63ಕ್ಕೆ ನಮಗೆ ಅಗತ್ಯವಿದ್ದುದು 1 ಲಕ್ಷ 35 ಸಾವಿರ ಟನ್, ದೊರೆತದ್ದು 1 ಲಕ್ಷ 8849 ಟನ್. ಇನ್ನು 1963—64 ರಲ್ಲಿ ನಮಗೆ ಅಗತ್ಯವಿದ್ದದು 1 ಲಕ್ಷ 44 ಸಾವಿರ ಟನ್ ನಮಗೆ ಅದರಲ್ಲಿ ಸರಬರಾಯಿ ಆದದ್ದು 1 ಲಕ್ಷ 16 ಸಾವಿರದ 27 ಟನ್ ಮಾತ್ರ. ಇನ್ನು 1964—65 ರಲ್ಲಿ ನಮಗೆ ಅಗತ್ಯವಿದ್ದ ರಾಸಾಯನಿಕ ಗೊಬ್ಬರದ ಪ್ರಮಾಣ 1 ಲಕ್ಷ 57 ಸಾವಿರ ಟನ್, ಅದರಲ್ಲಿ ನಮಗೆ ಸರಬರಾಯಿ ಆದದ್ದು 70 ಸಾವಿರದ 82 ಟನ್‌ಗಳು ಮಾತ್ರ. ಇನ್ನು ಈ ವರ್ಷಕ್ಕೆ ಅಂದರೆ 1965—66 ಕ್ಕೆ ಬೇಕಾಗಿರುವುದು ಅಗತ್ಯವಿರುವುದು 2 ಲಕ್ಷ 79 ಸಾವಿರದ 766 ಟನ್, ಈವರೆಗೆ ನಮಗೆ ಬಂದಿರತಕ್ಕದ್ದು 68 ಸಾವಿರದ 510 ಟನ್ ಮಾತ್ರ ಬಂದಿದೆ. ಇದರಿಂದ ಮಾನ್ಯ ಸದಸ್ಯರಿಗೆ ವ್ಯಕ್ತವಾಗುತ್ತದೆ ನಮಗೆ ಎಷ್ಟು ಅಗತ್ಯವಿತ್ತೋ ಅಷ್ಟು ಅಂದರೆ ನಮ್ಮ ಅಗತ್ಯದಲ್ಲಿ ಮೂರನೆ ಒಂದು ಭಾಗ ಕೂಡ ಸರಬರಾಯಿ ಆಗಲಿಲ್ಲವೆಂಬುದು ವೇದ್ಯವಾಗುತ್ತದೆ ಹೀಗಾಗಿ ನಾವಿಟ್ಟುಕೊಂಡಿದ್ದ ಗುರಿಯು ಕುಂಠಿತವಾಯಿತು. ಆದರೆ ನಮ್ಮ ನಾಲ್ಕನೆ ಪಂಚ ವಾರ್ಷಿಕ ಯೋಜನೆಯ 4 ನೇ ವರ್ಷದಲ್ಲಿ 8 ಲಕ್ಷ ಟನ್ನಗಳಷ್ಟು ಅಧಿಕ ಉತ್ಪನ್ನಮಾಡಬೇಕೆಂದು ನಾವು ಗುರಿಯನ್ನಿಟ್ಟುಕೊಂಡಿದ್ದೆವು. ಅದರಲ್ಲ 6 ಲಕ್ಷ ಟನ್ನಗಳನ್ನು ಹೆಚ್ಚಿಗೆ ಉತ್ಪನ್ನಮಾಡಿದ್ದೇವೆ. ಇನ್ನೂ ಒಂದು ವರ್ಷ ಉಳಿದಿದೆ. ನಮಗೆ ಆಹಾರದಲ್ಲಿ ಎಷ್ಟು ಕೊರೆತೆ ಉಂಟಾಗಿದೆ, ನಾವು ಎಷ್ಟನ್ನು ಹೆಚ್ಚಿಗೆ ಉತ್ಪನ್ನ ಮಾಡಬೇಕೆಂಬ ವಿಷಯ ತಮಗೆಲ್ಲರಿಗೂ ತಿಳಿದೇ ಇದೆ. ನಮಗೆ ಹೆಚ್ಚಿಗೆ ಉತ್ಪನ್ನಕ್ಕೆ ಮೂಲವಾದ ಮೇಜರ್ ಇರಿಗೇಷನ್ ಬಾಪಿನಲ್ಲ ಇನ್ನೂ 6 ಲಕ್ಷ ಎಕರೆಗಳು ಹಾಗೇ ಉಳಿದಿತ್ತು. ಅಲ್ಲಿ ಈ ವರ್ಷ ಹೆಚ್ಚು ಉತ್ಪನ್ನಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ತೀವ್ರತಮ ಬೇಸಾಯ ಪದ್ಧತಿಯನ್ನೂ ಅನೇಕ ಜಿಲ್ಲೆಗಳಲ್ಲಿ ಜಾರಿಗೆ ತರಲಾಗಿದೆ. ಆದಾಗ್ಗೂ ಇದರಿಂದ ಬೇಗ ಫಲ ಬರುವುದಿಲ್ಲ ಅನ್ನುವುದು ತಮಗೆಲ್ಲರಿಗೂ ಗೊತ್ತಿದೆ. ಮಂಗಳೂರಿನಲ್ಲಿ ತೀವ್ರತಮ ಬತ್ತದ ಬೇಸಾಯವನ್ನು ನಡೆಸಲಾಗುತ್ತಿದೆ. ಹಾಗೇ ರಾಗಿಯ ಬಗ್ಗೆಯೂ ತೀವ್ರತಮ ಬೇಸಾಯವನ್ನು ಬೆಂಗಳೂರು, ತುಮಕೂರು, ಕೋಲಾರ ಮತ್ತು ಹಾಸನ ಜಿಲ್ಲೆಗಳಲ್ಲ ಕೈಗೊಳ್ಳಲಾಗಿದೆ. ಇನ್ನು ಜೋಳ ಮತ್ತು ಬಾಜ್ರ ಬೆಳೆಗಳ ತೀವ್ರತಮ ಬೇಸಾಯದ ಬಗ್ಗೆ ಗುಲ್ಬರ್ಗ, ಧಾರ್ವಾಡ, ಬಿಜಾಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಯತ್ನ ಕೈಗೊಳ್ಳಲಾಗಿದೆ. ಹಾಗೇ ತ್ರಿವ್ರತಮ ಗೋಧಿ ಬೆಳೆಯ ಬಗ್ಗೆ ಬೀದರ್ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಪ್ರಯತ್ನ ಕೈಗೊಂಡಿದೆ. ಈ ಬಗ್ಗೆ ಸತತ ಪ್ರಯತ್ನಗಳು ನಡೆಯುತ್ತಿವೆ.

ನಾವು ಹೆಚ್ಚು ಉತ್ಪತ್ತಿಮಾಡಬೇಕಾದರೆ ರೈತರಿಗೆ ಒಳ್ಳೆಯ ಉತ್ತಮ ಬೀಜ ಮತ್ತು ಗೊಬ್ಬರ ಮತ್ತು ಇನ್ನಿತರೆ ಉಪಕರಣಗಳನ್ನು ಒದಗಿಸಬೇಕಾದ್ದು ಹಾಗೂ ಸಸ್ಯ ಸಂರಕ್ಷಣೆ ಕಡೆಗೆ ಹೆಚ್ಚು ಗಮನ ಕೊಡಬೇಕಾದ್ದು ಅತ್ಯಗತ್ಯ ಎಂಬುದು ತಮಗೆಲ್ಲರಿಗೂ ಗೊತ್ತಿದೆ. ಅನೇಕ ಮಾನ್ಯ ಸದಸ್ಯರು ಈ ವಿಚಾರವನ್ನು ಹೇಳಿದ್ದಾರೆ. ನಮಗೆ ಈಗ ಉತ್ತಮ ಬೀಜ ಸಿಗುತ್ತಿದೆ. ಅದನ್ನು ನಮ್ಮ ವ್ಯವಸಾಯದ ಇಲಾಖೆಯವರು ಖುದ್ದಾಗಿ ತಯಾರಿಸುತ್ತಿದ್ದಾರೆ. ಹಾಗೆ ಅವರು ಅಲ್ಲಿ ತಯಾರಿಸಿದ ಫೌಂಡೇಷನ್ ಸೀಡ್‌ಗಳನ್ನು ನಮ್ಮ ಫಾರಂಗಳಿಗೆ ಕೊಟ್ಟು ಅಲ್ಲಿ ಅವುಗಳನ್ನು ಮಲ್ಟಿಪ್ಲೈ ಮಾಡಲಾಗುತ್ತದೆ. ಅದನ್ನು ಬ್ಲಾಕ್‌ಮಟ್ಟದಲ್ಲಿ ಇನ್ನೂ ಹೆಚ್ಚುಮಾಡಲು ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಆ ಬಗ್ಗೆ ಕೆಲವು ಅಂಕೀ ಅಂಶಗಳನ್ನು ತಮ್ಮ ಮುಂದಿಟ್ಟರೆ ಸರಿಕಾಣಬಹುದು, 1963—64 ರಲ್ಲಿ ನಮಗೆ ಅಗುತ್ಯವಿದ್ದ ಬತ್ತದ ಬೀಜ 2,272 ಕ್ವಿಂಟಾಲುಗಳು, ಸಪ್ಲೈಯಾಗಿರತಕ್ಕದ್ದು 2596.83 ಕ್ವಿಂಟಾಲು. ಅದೇ ರೀತಿ ನಮಗೆ ಬೇಕಾಗಿದ್ದ ಉತ್ತಮ ರಾಗಿ ಬೀಜದ ಪ್ರಮಾಣ 346 ಕ್ವಿಂಟಾಲು, ಸಪ್ಲೈಯಾಗಿರತಕ್ಯದ್ದು 566.79 ಕ್ವಿಂಟಾಲು. ನಮಗೆ ಅಗತ್ಯವಿದ್ದ ಕಾರೀಫ್ ಜವಾರ್‌ಪ್ರಮಾಣ 380 ಕ್ವಿಂಟಾಲು, ನಾವು ಸಪ್ಲೈಮಾಡಿರುವುದು 390 ಕ್ವಿಂಟಾಲುಗಳು. ಇನ್ನು ರಬಿ ಜವಾರ್ ನಮಗೆ ಅಗತ್ಯವಿದ್ದುದು 601 ಕ್ವಿಂಟಾಲು, ಸಪ್ಲೈಯಾಗಿರತಕ್ಕದ್ದು 655 ಕ್ವಿಂಟಾಲುಗಳು. ಆದರೆ ನಮಗೆ ಗೋಧಿ ಎಷ್ಟು ಅಗತ್ಯವಿತ್ತೋ ಅದಕ್ಕಿಂತ ಕಡಮೆಯಾಗಿ ಸಪ್ಲೈ ಯಾಗಿದೆ. ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ. ನಾವು ಈ ಬಿತ್ತನೆ ಬೀಜವನ್ನು ಫೌಂಡೇಷನ್ ಸೀಡ್‌ಗಳನ್ನು ಬ್ಲಾಕ್‌ಮಟ್ಟದಲ್ಲಿ ಮಲ್ಟಿಪ್ಲೈ ಮಾಡಿಕೊಳ್ಳಬೇಕಾಗಿದೆ. ಆದರೆ ಈ ವಿಚಾರದಲ್ಲಿ ಬಹುಶಃ ತಮ್ಮನ್ನೂ ಪ್ರಾರ್ಥನೆ ಮಾಡಿಕೊಂಡರೆ ತಪ್ಪಾಗಲಾರದೆಂದು ನಾನು ಭಾವಿಸುತ್ತೇನೆ. ಬ್ಲಾಕ್ ಮಟ್ಟದಲ್ಲಿ ಫೌಂಡೇಷನ್ ಸೀಡ್‌ಗಳನ್ನು ಅವರು ಸರಿಯಾಗಿ ಮಲ್ಟಿಪ್ಲೈ ಮಾಡುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ತನಿಖೆ ನಡೆಸುವುದಕ್ಕೆ ತಮಗೆಲ್ಲರಿಗೂ ಕೂಡ ತಾಲ್ಲೂಕ್ ಬೋರ್ಡಿನ ಎಕ್ಸ್‌ಅಫಿಷಿಯೋ ಮೆಂಬರುಗಳಾಗಿರುವುದರಿಂದ ಅಧಿಕಾರವಿದೆ ಮತ್ತು ಅವಕಾಶ ಇದೆ. ತಮ್ಮನ್ನು ಈ ಸಭೆಯಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ತಾವು ಕಿಂಚಿತ್ತು ಒಂದಷ್ಟು ಪ್ರಯತ್ನ ಪಟ್ಟರೆ ಬಹುಶಃ ಈ ಬೀಜದ ಉತ್ಪಾದನೆ ಹೆಚ್ಚಾಗಿ ಎಲ್ಲರಿಗೂ ದೊರಕುವುದರಲ್ಲಿ ಏನೂ ಅನುಮಾನವಿಲ್ಲ.

(ಶ್ರೀ ಜಿ. ನಾರಾಯಣಗೌಡ)

9-00 A.M.

ಮಾನ್ಯ ಸದಸ್ಯರು ಕೆಲವರು ನಮಗೆ ಈಗ ತಕ್ಷಣ ಬೇಕಾದ ಹೈಬ್ರಿಡ್ ಜವಾರ್, ಮೇಜ್ ಸರಬರಾಯಿ ಮಾಡುವುದಕ್ಕೆ ಸಾಧ್ಯವೇ ಮತ್ತು ಅದನ್ನು ತಯಾರು ಮಾಡುವುದಕ್ಕೆ ಏನು ಮಾಡಿದ್ದೀರಿ ಎಂಬ ಒಂದು ಪ್ರಶ್ನೆಯನ್ನೂ ಕೂಡ ಸಭೆಯ ಮುಂದೆ ಇಟ್ಟಿದ್ದಾರೆ. ಅವುಗಳನ್ನು ನಾವು ನಮ್ಮ ಯೂನಿಟ್ಟುಗಳೊಳಗೆ ತಯಾರು ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ, ಹೈಬ್ರಿಡ್ ಮೇಜ್ ಈ ವರ್ಷ 400 ಎಕರೆ ಯಲ್ಲಿ ಬೀಜವನ್ನು ತಯಾರು ಮಾಡಿ ಸುಮಾರು 40 ಸಾವಿರ ಎಕರೆಗಳಿಗೆ ಒದಗಿಸುತ್ತೇವೆ, ಹಾಗೆಯೇ ಜವಾರ್ ಸಹಿತ 100 ಎಕರೆಗಳಲ್ಲಿ ತಯಾರು ಮಾಡಿ 10 ಸಾವಿರ ಎಕರೆಗಳಿಗೆ ಒದಗಿಸುತ್ತೇವೆ. ಅದೂ ಅಲ್ಲದೆ, ಭದ್ರಾ, ತುಂಗಭದ್ರಾ ಮತ್ತು ಬೇರೆ ಪ್ರದೇಶಗಳಲ್ಲಿ ಇದಕ್ಕೆ ಬೇರೆ ಬೇರೆ ಯೂನಿಟ್ಟುಗಳನ್ನು ಒದಗಿಸಿ ಅಲ್ಲಿ ಸಹಿತ ತಯಾರುಮಾಡಿ ಇನ್ನೂ ಹೆಚ್ಚಾಗಿ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಶ್ರೀಮಾನ್ ಘೋರ್‌ಪಡೆಯವರು ಮೆಕ್ಸಿಕನ್ ಗೋಧಿಯನ್ನು ನೀವೇನಾದರೂ ಉತ್ಪತ್ತಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ ಎಂದು ಕೇಳಿದರು. ಅಣ್ಣಿಗೆರೆ ರಿಸರ್ಚ್ ಸ್ಟೇಷನ್‌ನಲ್ಲಿ ಅದನ್ನು ಪ್ರಯೋಗಾರ್ಥವಾಗಿ ತೆಗೆದುಕೊಂಡಿದ್ದೇವೆ ಅದರ ಫಲಿತಾಂಶವನ್ನು ನೋಡಿ ಆಮೇಲೆ ರೈತರಿಗೆ ಕೊಡುವವರಾಗಿದ್ದೇವೆ. ಮತ್ತು ನಮಗೆ ಬೇಕಾದ ಟ್ರಾಕ್ಟರ್ ಮತ್ತು ಪವರ್ ಟಿಲ್ಲರ್ಸ್, ಮತ್ತು ಬೇರೆ ಉಪಕರಣಗಳನ್ನು ಒದಗಿಸುವ ವಿಷಯವನ್ನು ಅನೇಕರು ಹೇಳಿದರು, ಇಲಾಖೆಯಿಂದ ನಮಗೆ ಟ್ರಾಕ್ಟರುಗಳು ಒದಗುತ್ತಿಲ್ಲ ಎಂದು ಕೆಲವರು ಹೇಳಿದರು, ಅದಕ್ಕೆ ಕೆಲವು ಮಾನ್ಯ ಮಿತ್ರರು ಇರತಕ್ಕ ತೊಂದರೆಯನ್ನೂ ಸಹಿತ ಅವರೇ ಉತ್ತರ ರೂಪವಾಗಿ ಕೊಟ್ಟಿದ್ದಾರೆ. ಈಗ ನಾವು ಒಂದು ಯೋಚನೆ ಮಾಡಿದ್ದೇವೆ. ಅದೇನೆಂದರೆ ನಮ್ಮ ಇಲಾಖೆಯಲ್ಲಿ ಹೆಚ್ಚಾಗಿ ಟ್ರಾಕ್ಟರುಗಳನ್ನು ಕೊಳ್ಳುವುದಕ್ಕಿಂತಲೂ ಹೈರ್ ಪರ್ಚೇಸ್ ಸಿಸ್ಟಂ ಮೇಲೆ ರೈತರಿಗೆ ಅದನ್ನು ಒದಗಿಸಬೇಕೆಂದು ಇದ್ದೇವೆ ಅದಕ್ಕೆ ಏನು ನಿಬಂಧನೆ ಇತ್ತೋ—ಕಠಿಣವಾದ ನಿಬಂಧನೆ—ಅದನ್ನೂ ಸಹಿತ ಸಡಿಲ ಮಾಡಿದ್ದೇವೆ. ಅದನ್ನು ತೆಗೆದುಕೊಳ್ಳಬೇಕಾಗಿದ್ದರೆ ಸಾಲ್ವೆನ್ಸಿ ಸರ್ಟಿಫಿಕೇಟ್ ಕೊಡಬೇಕಾಗಿತ್ತು, ಒಂದಕ್ಕೆ ಎರಡರಷ್ಟು ಅಡಮಾನ ಆಸ್ತಿ ಕೊಡಬೇಕಾಗಿತ್ತು, ಅದರ ಜೊತೆಗೆ ಇಬ್ಬರು ಜಮೀನುದಾರರನ್ನು ಕೊಡಬೇಕಾಗಿತ್ತು. ಒಂದು ವರ್ಷದ ಮೇಲೆ ಕೊಡುವ ಪ್ರಥಮ ಕಂತನ್ನು ಮೊದಲೇ ಪಾವತಿ ಮಾಡಬೇಕಾಗಿತ್ತು. ಈಗ ಅದನ್ನೆಲ್ಲಾ ತೆಗೆದು ಬಿಟ್ಟು ಟ್ರಾಕ್ಟರ್‌ನ ಖರೀದಿ ಎಷ್ಟಿದೆಯೋ ಅಷ್ಟು ಮಾತ್ರ ಆಸ್ತಿ ಅಡಮಾನ ಮಾಡಬೇಕೆಂದು ಮಾಡಿದ್ದೇವೆ. ಹಾಗೆಯೇ ಈ ಪಂಚವಾರ್ಷಿಕ ಯೋಜನೆಯ 4 ವರ್ಷಗಳಲ್ಲಿ 238 ಟ್ರಾಕ್ಟರ್‌ಗಳನ್ನು ಕೊಟ್ಟಿದ್ದೇವೆ, ಅನೇಕ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಪವರ್ ಟಿಲ್ಲರ್ಸ್ ಇಂದ ನಮಗೆ ಬಹಳ ಪ್ರಯೋಜನ ಇದೆ, 25 ಪವರ್ ಟಿಲ್ಲರ್ಸ್‌ಗಳನ್ನು ತರಿಸಿ ಮಂಡ್ಯ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಕೊಟ್ಟಿದ್ದೇವೆ, ಇನ್ನು ಒಂದು ತಿಂಗಳಿನಲ್ಲಿ 176 ಟಿಲ್ಲರ್ಸ್ ಬರುತ್ತವೆ ಹಾಗೂ ಇದರ ಅಗತ್ಯತೆಯನ್ನು ತಿಳಿದುಕೊಂಡು ಇನ್ನೂ 100 ಪವರ್ ಟಿಲ್ಲರ್ಸ್‌ನ್ನು ತರಿಸುವುದಕ್ಕೆ ಪ್ರಯತ್ನ ನಡೆಸಿದ್ದೇವೆ.

ಕೆಲವು ಮಾನ್ಯ ಸದಸ್ಯರು ಬಿತ್ತನೆ ಆಗುತ್ತದೆ, ಮಳೆಯೂ ಬರುತ್ತದೆ, ಒಳ್ಳೆ ಬೆಳೆ ಬಂದ ಸಂದರ್ಭಗಳಲ್ಲಿ ರೋಗ ರುಜಿನಗಳು ಮತ್ತು ಚಿಟ್ಟೆ ಹಾವಳಿ ಇಂತಹ ಕಷ್ಟಗಳು ಇವೆ ಎಂದು ಹೇಳಿದರು. ಶ್ರೀಮಾನ್ ಸಿದ್ದಯ್ಯ ಕಾಶೀಮಠ್ ಅವರಿಗೆ ಗೊತ್ತಿದೆ 10—15 ವರ್ಷಗಳಿಂದ ಅವರ ತಾಲ್ಲೂಕಿನಲ್ಲಿ ಚಿಟ್ಟೆಗಳ ಹಾವಳಿ ಇದ್ದು ಏನೂ ಕಾರ್ಯಕ್ರಮ ತೆಗೆದುಕೊಳ್ಳದೆ ರೈತರೂ ಸಹಿತ ನಿರಾಶರಾಗಿದ್ದರು, 63—64 ರಲ್ಲಿ ಸುಮಾರು 36 ಸಾವಿರ ಎಕರೆ ನಾವು ಇಲಾಖೆಯವರೇ ತೆಗೆದುಕೊಂಡು ಕಾರ್ಯಕ್ರಮವನ್ನು ನಡೆಸಿದ್ದೇವೆ ಹಾಗೂ ಎರಡನೆಯ ವರ್ಷ ಸಹಿತ ನಾವೇ ಮಾಡಿದ್ದೇವೆ. ಮೂರನೆಯ ವರ್ಷ ಸಹಿತ ಇಲಾಖೆಯವರೇ, ಬೇರೆ ಕಡೆ ತಾಲ್ಲೂಕು ಮಂಡಲಿಯವರು ಈ ಕೆಲಸವನ್ನು ಮಾಡುತ್ತಾ ಇದ್ದಾರೆ, ನಿಮಗೆ ಸಹಾಯ ಏನು ಬೇಕೋ ಅದನ್ನು ತೆಗೆದುಕೊಳ್ಳಿ ಉಳಿದದ್ದು ತಾಲ್ಲೂಕು ಮಂಡಲಿ ಮಾಡಲಿ ಎಂದರೆ ಹಾವೇರಿ ತಾಲ್ಲೂಕಿನವರು ಒಪ್ಪಲಿಲ್ಲ. ಬೆಳಗಾಂ ನವರು ಉತ್ತಮವಾಗಿ ಕೆಲಸ ಮಾಡಿದ್ದಾರೆ, ಹಾಗೆಯೇ ಬಿಜಾಪುರ ಜಿಲ್ಲೆಯವರೂ ಸಹ ಅಲ್ಲಿನ ತಾಲ್ಲೂಕು ಬೋರ್ಡಿನವರು ಉತ್ತಮ ಕೆಲಸ ಮಾಡಿದ್ದಾರೆ. ಹಾವೇರಿಯನ್ನು ನಾವು ಒಂದು ಪಕ್ಷಪಾತ ದೃಷ್ಟಿಯಿಂದ ನೋಡಿಕೊಳ್ಳುವುದು ಸರಿಯಲ್ಲ ಎಂದು ಹೇಳಿ ಅವರ ಮೇಲೆ ಒತ್ತಾಯ ಹಾಕಿದೆವು. ಅವರೂ ಕೂಡ ಈ ಸಲ ಮಾಡಿದ್ದಾರೆ. ಸಸ್ಯ ಸಂರಕ್ಷಣೆ ಕಾರ್ಯಕ್ರಮಗಳಿಗೆ ಬೇಕಾದ ಉಪಕರಣಗಳು ಎಂದರೆ ಸ್ಪ್ರೇಯರ್ಸ್ ಮತ್ತು ಡಸ್ಟರ್ಸ್ 50 ರಷ್ಟು ಸಬ್ಸಿಡಿ ಕೊಟ್ಟು ಕೊಡುತ್ತಾ ಇದ್ದೇವೆ.

ಹಾಗೆಯೇ ಆಹಾರದ ಉತ್ಪತ್ತಿ ಹೆಚ್ಚಾಗಬೇಕಾದರೆ ಮೇಜರ್, ಮೀಡಿಯಂ ಮತ್ತು ಮೈನರ್ ಇರಿಗೇಷನ್ನಿಗೆ ಗಮನ ಕೊಡಬೇಕಾದ್ದು ಅವಶ್ಯಕ. ನಮ್ಮ ದೇಶದಲ್ಲಿ ಸುಮಾರು 43 ಸಾವಿರ

ಚಿಕ್ಕ ಕೆರೆಗಳಿವೆ, ಅನೇಕ ಸಂದರ್ಭಗಳಲ್ಲಿ 2-3 ಸಲ ತುಂಬಿದರೆ ಬೆಳೆಯಾಗುವುದು. ಏಕೆಂದರೆ ಅಚ್ಚುಕಟ್ಟನ್ನು ಹೆಚ್ಚಿಸಿದ್ದಾರೆ, ಎಕ್ಕರೆ ಬಂದಿವೆ. ಆದುದರಿಂದ ಅವುಗಳನ್ನು ದುರಸ್ತಿಮಾಡುವುದಕ್ಕೆ ಮತ್ತು ಕ್ಷಾಮ ಪೀಡಿತ ಪ್ರದೇಶಗಳೇನು ಕೆಲವು ಜಿಲ್ಲೆಗಳಲ್ಲಿವೆ ಅಲ್ಲಿ ಹೆಚ್ಚು ಬಾವಿಗಳನ್ನೊದಗಿಸುವುದಕ್ಕೂ ಪ್ರಯತ್ನ ಮಾಡಿದ್ದೇವೆ. ಲಿಬರಲೈಜ್ಡ್ ಸ್ಕೀಂ ಎಂದು ಮಾಡಿ ಆ ಮೂಲಕ ಅನೇಕರು ಬಾವಿಗಳನ್ನು ತೆಗೆದುಕೊಳ್ಳಲು ಅವಕಾಶಮಾಡಿದ್ದೇವೆ. ಬಹುಶಃ ಬಾವಿಗಳನ್ನು ತೆಗೆಸುವುದರಿಂದ ಹೆಚ್ಚು ಸಹಾಯವಾಗುವುದರಲ್ಲಿ ಕೆಲವರಿಗೆ ಅನುಮಾನವಿರಬಹುದು. ಆದರೆ ಈ ಸಲ ಬಾವಿ ಅಚ್ಚುಕಟ್ಟನ್ನು ನೋಡಿದರೆ ಪ್ರತಿಯೊಬ್ಬ ರೈತನೂ ರಾಗಿ, ಜೋಳ ಮತ್ತು ಮುಸುಕಿನ ಜೋಳವನ್ನು ಬೆಳೆದಿದ್ದಾನೆ, ಕೋಲಾರದ ಪಕ್ಕದಲ್ಲೇ ಒಂದೇ ಕಡೆ ಸ್ವಲ್ಪ ಹೆಚ್ಚು ಕಡಮೆ ನಾಲ್ಕೈದು ಮೈಲಿ ಪ್ರದೇಶದಲ್ಲಿ ಈ ಸಲ ಸುಮಾರು 600 ಖಂಡಗ ರಾಗಿಯಾಗುವ ನಿರೀಕ್ಷೆ ಇದೆ. ಆದುದರಿಂದ ಬಾವಿಗಳು ನಮ್ಮ ಆಹಾರದ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಮತ್ತು ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಮುಖ್ಯವಾದುದೆಂದು ತಿಳಿದು ಅದಕ್ಕೆ ಪ್ರೋತ್ಸಾಹ ಕೊಟ್ಟಿದ್ದೇವೆ. ಈಗ ಅನೇಕರು ಬಾವಿ ತೆಗೆಯಲು 3 ಸಾವಿರ ರೂಪಾಯಿ ಸಾಲದು, ಹೆಚ್ಚು ಕೊಡಬೇಕು ಎಂದು ಹೇಳಿದಮೇಲೆ ಆ ಕೆಲಸವನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ವಹಿಸಿ ಕೆಲವು ಸೌಲಭ್ಯ ಕೊಡಲಾಗಿದೆ, ಬಹುಶಃ ಆ ಬ್ಯಾಂಕಿನವರು ಇದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಸರಕಾರಿ ಆರ್ಡರನ್ನು ಸಹ ಈ ಸಂಭಂದದಲ್ಲಿ ನಿನ್ನೆ ಮೊನ್ನೆ ಅನೇಕರು ನೋಡಿರಬಹುದು.

ಆ ಮೇಲೆ ಬಾವಿಗಳಿಗೆ ಅನೇಕ ಸಂದರ್ಭಗಳಲ್ಲಿ ಅವಕಾಶ ಕೊಟ್ಟಾಗ ಪಂಪುಸೆಟ್ಟು ಕೊಡಬೇಕೆಂಬ ಕೂಗು ಹೆಚ್ಚಾಯಿತು. ಪಂಪುಸೆಟ್ಟುಗಳನ್ನು ತೆಗೆದುಕೊಳ್ಳಬೇಕಾದರೆ ಎಷ್ಟೋ ನಿಬಂಧನೆಗಳು ಕಠಿಣವಾಗಿದ್ದುವು. ಉತ್ಪತ್ತಿ ಹೆಚ್ಚಬೇಕೆಂಬ ದೃಷ್ಟಿಯಿಂದ ಸರಕಾರದವರು ಕಠಿಣವಾದ ನಿಬಂಧನೆ ಇರುವುದು ಅನಾವಶ್ಯಕವೆಂದು ಭಾವಿಸಿ ಅದನ್ನು ಸಡಿಲಮಾಡಿದ್ದಾರೆ. ಸಾಧಾರಣವಾಗಿ 23 ಸಾವಿರ ಪಂಪು ಸೆಟ್ಟುಗಳನ್ನು ಕೊಡುವ ಕಡೆ 24 ಸಾವಿರ ಕೊಟ್ಟಿದ್ದೇವೆ.

ನಿನ್ನೆ ನಮ್ಮ ಮಾನ್ಯ ಶಿವಪ್ಪನವರು ಮತ್ತು ಇನ್ನು ಒಬ್ಬಿಬ್ಬರು ಹೇಳಿದ ಹಾಗೆ ಆಹಾರ ಸೇವನೆಯ ವಿಧಾನದಲ್ಲಿ ಬದಲಾವಣೆಯಾಗಬೇಕು. ಆಗ ಮಾತ್ರ ನಾವು ಆಹಾರದ ವಿಚಾರದಲ್ಲಿ ಸ್ವಾವಲಂಬನೆಯನ್ನು ಹೊಂದಬಹುದು, ಇಲ್ಲದಿದ್ದರೆ ಸಾಧ್ಯವಿಲ್ಲ. ಅದಕ್ಕನುಸಾರವಾಗಿ ಈಗ ಹೆಚ್ಚು ತರಕಾರಿ ಮತ್ತು ಬೇಗ ಬೆಳೆಯುವ ಹಣ್ಣುಗಳು, ಪೈನ್ ಆಪಲ್, ಬನಾನಾ ಮುಂತಾದುವನ್ನು ಬೆಳೆಸುವುದಕ್ಕೆ ಎಲ್ಲಾ ಕಡೆಯೂ ಪ್ರಯತ್ನ ಮಾಡಿದ್ದೇವೆ, ಎಲ್ಲಾ ಜಿಲ್ಲೆಗಳಲ್ಲೂ ಇದಕ್ಕಾಗಿ ಒಂದು ಫಾರಂಮಾಡಿ ಬೆಳೆಸಲು ಪ್ರಯತ್ನಮಾಡಿದ್ದೇವೆ. ಹುಬ್ಬಳ್ಳಿ, ಬೆಂಗಳೂರು, ಮೈಸೂರು, ಬೆಳಗಾಂ, ಮಂಗಳೂರು, ಮಂಡ್ಯ, ಇಂಥ ನಗರಗಳಲ್ಲಿ ಮತ್ತು ಅವುಗಳ ಸುತ್ತಮುತ್ತ ಅವುಗಳನ್ನು ಬೆಳೆಸಲು ಪ್ರಾರಂಭಿಸಿದ್ದೇವೆ. ಇದರಿಂದ ನಮ್ಮ ಆಹಾರ ಸ್ವಾವಲಂಬನೆಗೆ ಸಹಾಯವಾಗುತ್ತದೆಂದು ಹೇಳಬಯಸುತ್ತೇನೆ.

ರಸಾಯನಿಕ ಗೊಬ್ಬರಗಳನ್ನು ಉಪಯೋಗಿಸುತ್ತಿದ್ದಾರೆ, ಅವನ್ನು ಯಾವ ಭೂಮಿಯಲ್ಲಿ ಹೇಗೆ ಉಪಯೋಗಿಸಬೇಕು ಎಂಬ ಭೂಮಿಯನ್ನು ಪರೀಕ್ಷೆ ಮಾಡಿ ತಿಳಿಸಿದರೆ ಉತ್ತಮ ಎಂದು ಮಾನ್ಯ ಸದಸ್ಯರು ಹೇಳಿದರು. ಅದಕ್ಕಾಗಿ ಸಾಯಿಲ್ ಟೆಸ್ಟಿಂಗ್ ಲ್ಯಾಬರೇಟರಿಯನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಸ್ಥಾಪಿಸಬೇಕೆಂದು ಸಲಹೆ ಮಾಡಿದ್ದಾರೆ. ಪ್ರತಿ ಜಿಲ್ಲೆಯಲ್ಲೂ ಸ್ಥಾಪಿಸಲು ಸಾಧ್ಯವಾಗದಿರಬಹುದು. ಅವರೂ ಸಹ ಅದರ ಅಗತ್ಯತೆ ತಿಳಿದು ಈಗ ಹುಬ್ಬಳ್ಳಿಯಲ್ಲಿ ಅತ್ಯುತ್ತಮವಾದ ಲ್ಯಾಬೊರೇಟರಿಯನ್ನು ಸ್ಥಾಪಿಸಲಾಗಿದೆ, ಅಲ್ಲಿ ಪ್ರತಿ ವರ್ಷ 30 ಸಾವಿರ ಸ್ಯಾಂಪಲ್ಲುಗಳನ್ನು ಪರೀಕ್ಷೆ ಮಾಡುತ್ತಿದ್ದಾರೆ. ಹಾವೇರಿಯಲ್ಲಿ ಅಗ್ರಿಕಲ್ಚರಲ್ ಪ್ರಾಡ್ಯೂಸ್ ಮಾರ್ಕೆಟಿಂಗ್ ಸೊಸೈಟಿ ಮುಂದೆ ಬಂದಿವೆ, ಅಲ್ಲಿ ಸಾಯಿಲ್ ಟೆಸ್ಟಿಂಗ್ ಲ್ಯಾಬರೆಟರಿಯನ್ನು ಮಾಡಬೇಕು, ಅದಕ್ಕೆ ಸರಕಾರ ಸಹಾಯ ಮಾಡಬೇಕು ಎಂಬ ಸೂಚನೆ ಇದೆ. ಹಾಗೆಯೇ ತುಂಗಭದ್ರ ಏರಿಯಾದಲ್ಲಿ ಒಂದು ಲ್ಯಾಬೊರೆಟರಿಯನ್ನು ಮಂಜೂರು ಮಾಡಿದ್ದೇವೆ. ಮಂಗಳೂರಿನಲ್ಲಿ ಸಹ ಒಂದು ಸಾಯಿಲ್ ಟೆಸ್ಟಿಂಗ್ ಲ್ಯಾಬರೆಟರಿಯನ್ನು ಸ್ಥಾಪಿಸಲು ಪ್ರಯತ್ನಪಡುತ್ತಿದ್ದೇವೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಶಿವಮೊಗ್ಗ, ಮೈಸೂರು, ಧಾರವಾಡ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಒಂದೊಂದು ಲ್ಯಾಬರೆಟರಿಯನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಂಡಿದ್ದೇವೆ. ಆದುದರಿಂದ ಸಲಹೆಯೇನಿತ್ತು ಅದು ಕಾರ್ಯಗತವಾಗಲಿರುವುದರಿಂದ ಬಹುಶಃ ಕೊರತೆ ನೀಗಬಹುದು ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಕೃಷ್ಣರವರು ಹೇಳಿದ ಹಾಗೆ ನಾವೆಲ್ಲರೂ ಪಕ್ಷಾತೀತವಾಗಿ ಚರ್ಚೆ ಮಾಡುತ್ತಿರುವುದನ್ನು ನೋಡಿ ಬಹಳ ಸಂತೋಷವಾಯಿತು. ಈ ಒಂದು ಸಂದಿಗ್ಧ ಸಮಯದಲ್ಲಿ ನಾವೆಲ್ಲಾ ಪಕ್ಷಾತೀತವಾಗಿ ಯೋಚನೆ ಮಾಡಿ ಎಲ್ಲಾ ಒಟ್ಟಿಗೆ ಸೇರಿ ನಮ್ಮ ಕರ್ತವ್ಯವನ್ನು ತಿಳಿದು ನಮ್ಮ ಜವಾಬ್ದಾರಿ

(ಶ್ರೀ ಪಿ. ನಾರಾಯಣಗೌಡ)

ಯನ್ನು ನಿರ್ವಹಿಸಿದರೆ ಬಹಳ ಸಹಾಯವಾಗುತ್ತದೆ. ಅದರಿಂದ ಆಹಾರದ ವಿಷಯದಲ್ಲಿ ಸ್ವಾವಲಂಬನೆ ಪಡೆಯಲು ಸಹಾಯವಾಗುತ್ತದೆ. ನಾವು ಈ ವಿಚಾರದಲ್ಲಿ ನಿಪುಣರಲ್ಲ ಎಂದು ನಿರಾಶರಾಗಬೇಕಾಗಿಲ್ಲ. ಸೈನಿಕರು ದೇಶ ರಕ್ಷಣೆ ಮಾಡುವ ಹಾಗೆ ರೈತರು ಹೆಚ್ಚು ಬೆಳೆದು ಜನರನ್ನು ರಕ್ಷಣೆ ಮಾಡಲು ಪ್ರೋತ್ಸಾಹ ಮಾಡೋಣ ಎಂದು ಹೇಳಿ ನನಗೆ ಅವಕಾಶಕೊಟ್ಟ ಸಭಾಪತಿಗಳಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಜೆ. ಲಿಂಗೇಗೌಡ (ಚನ್ನಪಟ್ಟಣ).—ಮಾನ್ಯ ಸಭಾಪತಿಗಳೇ, ನನಗೆ ಸಿಕ್ಕಿರುವ ಅವಕಾಶದಲ್ಲಿ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಮಾನ್ಯ ಸದಸ್ಯರುಗಳು ಬಹಳ ಅಮೋಘವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ನನಗೆ ಗೊತ್ತಿರುವಂತೆ ನಾವು ಏನು ಕಷ್ಟಗಳನ್ನು ಅನುಭವಿಸುತ್ತಿದ್ದೇವೆ ಎನ್ನುವುದನ್ನು ಮಾತ್ರ ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಣ್ಣ ನೀರಾವರಿ ಯೋಜನೆಗಳ ಕೆಲಸ ಬಹಳ ತ್ವರಿತವಾಗಿ ಆಗಬೇಕು ಎನ್ನುವುದನ್ನು ಎಲ್ಲರೂ ಹೇಳಿದ್ದಾರೆ. ಈ ವಿಷಯದಲ್ಲಿ ನಮ್ಮ ಮುಖ್ಯ ಮಂತ್ರಿಗಳಿಗೂ ಮತ್ತು ಮಾನ್ಯ ಉಪ ಮಂತ್ರಿಗಳಿಗೂ ಬಹಳ ಹೆಚ್ಚಿನ ಆಸಕ್ತಿ ಇದೆ. ಆದರೆ ಈ ಕೆಲಸ ಕಾರ್ಯಗಳನ್ನು ಎಷ್ಟರ ಮಟ್ಟಿಗೆ ಕಾರ್ಯಗತ ಮಾಡುತ್ತಿದ್ದಾರೆ ಎನ್ನುವುದನ್ನು ನೋಡಿದರೆ ಅಧಿಕಾರಿಗಳಲ್ಲಿ ಸರ್ಕಾರದ ಆರ್ಡರುಗಳನ್ನು ಒತ್ತಟ್ಟಿಗೆ ಇಡುವಂಥ ಮನೋಭಾವನೆ ದಿನೇ ದಿನೇ ಹೆಚ್ಚಾಗಿ ಬೆಳೆಯುತ್ತಿದೆ. ಇದಕ್ಕೆ ಒಂದೇ ಒಂದು ಉದಾಹರಣೆಯನ್ನು ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ನಮ್ಮ ತಾಲ್ಲೂಕಿನಲ್ಲಿ 25 ಸಾವಿರ ರೂಪಾಯಿನ ಒಂದು ಸಣ್ಣ ಕೆಲಸ, ''ಕೋಲೂರು ಪಿಕ್ ಅಪ್'' ಎಂದು ಸುಮಾರು ಮೂರೂವರೆ ವರ್ಷಗಳ ಹಿಂದೆ ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರು ಆ ಕೆಲಸವನ್ನು ಪ್ರಾರಂಭ ಮಾಡಿಸಿದ್ದರು. ಆದರೆ ಅವರ ನಂತರ ಬಂದ ಇನ್ನೊಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರು ಆ ಕೆಲಸವನ್ನು ನಿಲ್ಲಿಸಿ ಎಂದು ಕಂಟ್ರಾಕ್ಟರಿಗೆ ನೋಟೀಸ್ ಕೊಟ್ಟರು. ಅನಂತರ ಪದೇ ಪದೇ ಹತ್ತಾರು ಸಾರಿಯಾದರೂ ಪುನಃ ಈ ಕೆಲಸವನ್ನು ತೆಗೆದುಕೊಳ್ಳಲು ಸರ್ಕಾರದ ಗಮನಕ್ಕೆ ತೆಗೆದು ಕೊಂಡು ಬಂದೆ. ಅಷ್ಟೇ ಅಲ್ಲ, ನಮ್ಮ ಮಾನ್ಯ ಸಭೆಯ ಸದಸ್ಯರುಗಳು ಕೆಲವರು ಆ ಸ್ಥಳಕ್ಕೆ ನೀರಾವರಿ ಉಪಮಂತ್ರಿಗಳ ಜೊತೆಯಲ್ಲಿ ಭೇಟಿ ಕೊಟ್ಟಿದ್ದರು. ಆ ಸಂದರ್ಭದಲ್ಲಿ ಅವರು ಮಾಡಿದಂಥ ಸಿಫಾರಸು ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ಮಾಡಿದ ಸಿಫಾರಸಿನಿಂದ ಸರ್ಕಾರದವರು ಆ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಆರ್ಡರ್ ಮಾಡಿದರು. ಆದರೆ ನಾನು ಮೊದಲೇ ಹೇಳಿದ ಹಾಗೆ ಚೀಫ್ ಇಂಜಿನಿಯರ ಕರುಣೆ ಬರಲಿಲ್ಲ. ಅದನ್ನು ಹಾಗೆಯೇ ಒತ್ತಟಿಗೆ ಇಡಿ ಎಂದು ಹೇಳಿದರು. ಈ ರೀತಿ ಕೆಲಸವಾದರೆ ಮುಂದೆ ಯಾವ ವೇಗದಲ್ಲಿ ಸಣ್ಣ ನೀರಾವರಿ ಕಾರ್ಯಗಳನ್ನು ನಮ್ಮ ಸರ್ಕಾರದ ಅಧಿಕಾರಿಗಳು ಕಾರ್ಯಗತ ಮಾಡಿ ಕೊಡುತ್ತಾರೆ ಎಂದು ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸಣ್ಣ ನೀರಾವರಿ ಕಾರ್ಯಗಳು ನಿಧಾನವಾಗಿ ಆಗುವುದಕ್ಕೆ ಮತ್ತೊಂದು ಅಡ್ಡಿ ಆತಂಕ ಇರುವುದು ಏನೆಂದರೆ ನೀರಾವರಿ ಕಾಂಗಾರಿಗಳಿಗೆ ಸಂಬಂಧಪಟ್ಟ ಜಮೀನಿನ ಆಕ್ವಿಜಿಷನ್ ಪ್ರೊಸೀಡಿಂಗ್ಸ್. ನಮ್ಮ ತಾಲ್ಲೂಕಿನ ಎರಡು ಮೂರು ಕೆಲಸಗಳು ಉದಾಹರಿಸಬೇಕಾಗಿವೆ. ನೆರಳೂರು ಪ್ರಾಜೆಕ್ಟ್ ಕೆಲಸ ಪ್ರಾರಂಭ ಮಾಡಿ 5 ವರ್ಷವಾಯಿತು. ಅದಕ್ಕೆ ಮೂರೂವರೆ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಜಮೀನ್ದಾರರ ಅಡಚಣೆಯಿಂದ ಕೆಲಸ ಮುಂದುವರಿಯುತ್ತಿಲ್ಲಾ. ಹುಣಸನಹಳ್ಳಿ ಪ್ರಾಜೆಕ್ಟ್ ಎರಡು ವರ್ಷದಲ್ಲಿ ಪೂರ್ತಿಯಾಯಿತು. ಆದರೆ ಇದುವರೆಗೂ ಕೂಡ ನೀರನ್ನು ಉಪಯೋಗಿಸುವುದಕ್ಕೆ ಸಾಧ್ಯವಾಗುತ್ತ ಇಲ್ಲ. ಯಾರೋ ಒಬ್ಬರು ಒಂದೆರಡು ಕುಂಟೆ ಜಮೀನು ಕೊಡಲು ಅಡ್ಡಿ ಮಾಡುತ್ತಿರುತ್ತಾರೆ. ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಸಹ ಜಾಗ್ರತೆ ನಡೆಯುತ್ತಿಲ್ಲ. ಈ ಬಗ್ಗೆ ಅನೇಕ ವೇಳೆ ಅಧಿಕಾರಿಗಳಲ್ಲಿ, ಮಂತ್ರಿಗಳಲ್ಲಿ, ಎಲ್ಲರಲ್ಲಿಯೂ ಪ್ರಾರ್ಥನೆ ಮಾಡಿಕೊಂಡಿದ್ದೇನೆ. ಈ ಸಂಬಂಧದಲ್ಲಿ ಅವರದು ಯಾರದೂ ಅಲಕ್ಷ್ಯತೆ ಇಲ್ಲ. ಅವರು ಎಷ್ಟರಮಟ್ಟಿಗೆ ತ್ವರಿತವಾಗಿ ಕಾರ್ಯಕ್ರಮಗಳನ್ನು ತೆಗೆದುಕೊಂಡರೂ ಅದಕ್ಕೆ ಕಾನೂನು ಅಡ್ಡಿಯಾಗಿ ತಡವಾಗುತ್ತಿದೆ. ಸಣ್ಣ ನೀರಾವರಿ ಅಥವಾ ಭಾರೀ ನೀರಾವರಿ ಯೋಜನೆಗಳಿಗೆ ಬೇಕಾಗುವ ಜಮೀನನ್ನು ಆದಷ್ಟು ಜಾಗ್ರತೆ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಕಾನೂನಿನ ಅಡ್ಡಿ ಏನಾದರೂ ಇದ್ದರೆ ಆ ಅಡ್ಡಿಯನ್ನು ತೆಗೆದುಹಾಕುವುದಕ್ಕೆ ಪ್ರಯತ್ನ ಪಡಬೇಕು ಎಂದು ಮಾನ್ಯ ಮುಖ್ಯ ಮಂತ್ರಿಯವರನ್ನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಈಗಿರುವ ಕಾನೂನು ಪ್ರಕಾರ ನಾವು ಹೆಚ್ಚಿನ ಕಾರ್ಯಕ್ರಮವನ್ನು ತಗೆದುಕೊಳ್ಳುವುದಕ್ಕೆ ಪ್ರಯತ್ನಿಸಿದರೆ ಸಂಬಂಧಪಟ್ಟವರು ಕೋರ್ಟಿಗೆ ಹೋಗು ತ್ತಾರೆ. ಆಗ ನಾವು ಏನೂ ಮಾಡುವುಕ್ಕಾಗುವುದಿಲ್ಲ. ಆದ್ದರಿಂದ ಕಾನೂನಿನಲ್ಲಿ ಇರಬಹುದಾದ ಅಡ್ಡಿ ಆತಂಕಗಳನ್ನು ತೆಗೆದು ಹಾಕಲು ಪ್ರಯತ್ನ ಮಾಡಬೇಕೆಂದು ಮಂತ್ರಿಮಂಡಲದವರನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ವ್ಯವಸಾಯ ಇಲಾಖೆಯವರಲ್ಲಿರುವ ಅಧಿಕಾರಿಗಳು ಅವರ ಕರ್ತವ್ಯವನ್ನು ನಿಷ್ಠೆಯಿಂದ ಮಾಡುತ್ತಿಲ್ಲ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಎಲ್ಲ ಅಧಿಕಾರಿಗಳೂ ಆ ರೀತಿ ಇಲ್ಲ, ದೇಶಪ್ರೇಮದಿಂದ ಕೆಲಸ ಮಾಡತಕ್ಕ ಅನೇಕ ಅಧಿಕಾರಿಗಳೂ ಇದ್ದಾರೆ ಎಂದು ಕೂಡ ಅನೇಕರು ಹೇಳಿದ್ದಾರೆ. ಕೆಲವು ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೆ ಹೋದರೆ ಅಂಥವರನ್ನು ಶಿಕ್ಷೆ ಮಾಡುವುದಕ್ಕೆ ಸರ್ಕಾರಕ್ಕೆ ಅಸಹಾಯಕತೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ಸಂದರ್ಭಗಳಲ್ಲಿ ಅಧಿಕಾರಿಗಳನ್ನು ಭೇಟಿ ಮಾಡಿ ಪ್ರಶ್ನಿಸಿದಾಗ ಅವರು ಹೇಳುತ್ತಾರೆ. ನಮ್ಮ ಜವಾನರನ್ನೂ ಸಹ ಶಿಕ್ಷೆ ಮಾಡುವುದಕ್ಕೆ ಸಾಧ್ಯವಿಲ್ಲ, ಏನ ಮಾಡೋಣ ಎಂದು. ಈ ತರಹ ನಿಸ್ಸಹಾಯಕತೆ ಮನೋಭಾವನೆ ದಿನೇ ದಿನೇ ಅಧಿಕಾರಿಗಳಲ್ಲಿ ಬೆಳೆಯುತ್ತಿರುವುದರಿಂದ ನಮ್ಮ ದೇಶದ ಆಹಾರೋತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೆ ಅಧಿಕಾರಿಗಳ ಸಹಕಾರ ಹೆಚ್ಚಿನ ಉಪಕಾರ ಮಾಡಲು ಸಾಧ್ಯವಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ವಿರೋಧಪಕ್ಷ ಮತ್ತು ಎಲ್ಲ ಪಕ್ಷಗಳವರೂ ಒಗ್ಗಟ್ಟಿನಿಂದ ಹೇಳುತ್ತಿದ್ದಾರೆ, ನಮ್ಮ ದೇಶದ ಮೇಲೆ ಪಾಕಿಸ್ಥಾನದವರ ಅತಿಕ್ರಮಣ ನಡೆಯುತ್ತಿರುವ ಕಾಲದಲ್ಲಿ ಅದನ್ನು ಎದುರಿಸಲು ಎಷ್ಟು ಪ್ರಯತ್ನ ಮಾಡಲು ಸಾಧ್ಯವೋ ಅಷ್ಟನ್ನೂ ಮಾಡಬೇಕು ಎಂದು ಹೇಳುತ್ತಾರೆ. ಸರ್ಕಾರದವರು ಮಾತೆತ್ತಿದರೆ ಆಹಾರದ ಉತ್ಪಾದನೆಯನ್ನು ವಾರ್‌ಫುಟಿಂಗ್ ಮೇಲೆ ಹೆಚ್ಚಿಗೆ ಮಾಡಬೇಕು ಎಂದು ಹೇಳುತ್ತಾರೆ. ಹಾಗೆ ಮಾಡಲು ಇರುವ ಅಡ್ಡಿ ಆತಂಕಗಳೇನು ಎನ್ನುವುದನ್ನೂ ಯೋಚನೆ ಮಾಡಬೇಕು. ವಾರ್‌ಫುಟಿಂಗ್ ಮೇಲೆ ಆಹಾರದ ಉತ್ಪತ್ತಿಯನ್ನು ಮಾಡಬೇಕಾದರೆ, ಮಿಲಿಟರಿಯನ್ನು ಹೇಗೆ ಎಸೆನ್ಸಿಯಲ್ ಸರ್ವಿಸ್ ಎಂದು ಪರಿಗಣಿಸುತ್ತಾರೆಯೋ ಅದೇ ರೀತಿ ಸಂಬಂಧಪಟ್ಟ ಇಲಾಖೆಗಳ ಅಧಿಕಾರ ವರ್ಗವನ್ನೂ ಎಸೆನ್ಸಿಯಲ್ ಸರ್ವಿಸ್ ಎಂದು ಪರಿಗಣಿಸಿ ಅವರು ಒಂದು ವೇಳೆ ಏನಾದರೂ ತಪ್ಪು ಮಾಡಿದರೆ ಉಗ್ರ ಶಿಕ್ಷೆಯನ್ನು ವಿಧಿಸಬೇಕು ಮತ್ತು ಆ ಅಧಿಕಾರಿಗಳು ಕೋರ್ಟು ಕಚೇರಿಗಳಿಗೆ ಸಿ.ಸಿ.ಎ. ರೂಲ್ಸ್ ಪ್ರಕಾರ ಹೋಗಲು ಅವಕಾಶವಿಲ್ಲದಿರುವ ಹಾಗೆ ಭಾರತ ರಕ್ಷಣಾ ಕಾನೂನು ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಸರ್ಕಾರದವರು ಆಹಾರ ಧಾನ್ಯವನ್ನು ವಸೂಲು ಮಾಡಲು 'ಲೆವಿ ಆರ್ಡರ್' ಜಾರಿ ಮಾಡಿದ್ದಾರೆ. ಸರ್ಕಾರದವರು ಕೊಳ್ಳುವ ಆಹಾರ ಧಾನ್ಯಗಳಿಗೆ ಒಂದು ದರವವನ್ನು ನಿಷ್ಕರ್ಷೆ ಮಾಡಿದ್ದಾರೆ. ಮತ್ತು ರೈತರುಗಳು ಹೆಚ್ಚಿಗೆ ಖರೀದಿಗೆ ಮಾರಿಕೊಳ್ಳುವುದಕ್ಕೂ ಸಹ ಅದರಲ್ಲಿ ಅವಕಾಶವನ್ನು ಕೊಟ್ಟಿದ್ದಾರೆ. ಆದರೆ ಲೆವಿ ಆರ್ಡರ್‌ನಲ್ಲಿ ವಸೂಲು ಮಾಡತಕ್ಕ ದಿನಸಿಗಳಿಗೇ ಇನ್ನೂ ಹೆಚ್ಚಿನ ಬೆಲೆಯನ್ನು ಗೊತ್ತುಮಾಡಿ ಅಲ್ಲಿ ಏನೊಂದು ಬೆಲೆ ಇದೆಯೋ ಓಪನ್ ಮಾರ್ಕೆಟ್ಟಿನೊಳಗೆ ಕೊಂಡುಕೊಳ್ಳುವುದನ್ನು ಬಹುಶಃ ಈ ಸರ್ಕಾರದವರು ತಪ್ಪಿಸಿದರೆ ಬಡವರಿಗೆ ಹೆಚ್ಚಿನ ಮಟ್ಟದಲ್ಲಿ ಅನುಕೂಲವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

9-30 A.M.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧಯ್ಯನವರು ಈ ಕೋ-ಆಪರೇಟಿವ್ ಫೀಲ್ಡ್‌ನಲ್ಲಿ ಕೆಲಸಮಾಡತಕ್ಕವರು ಎಂತಹವರು ಇರಬೇಕು, ಅದರ ತತ್ವದಲ್ಲಿ ನಂಬಿಕೆ ಇರುವವರು ಮಾತ್ರ ಆ ಫೀಲ್ಡ್‌ನಲ್ಲಿ ಮಹತ್ವದ ಒಳ್ಳೆಯ ಸಾಧನೆಮಾಡಬಹುದು ಎಂಬುದಾಗಿ ಹೇಳಿದ್ದಾರೆ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಇವತ್ತಿನ ದಿವಸ ಕೋ-ಆಪರೇಟಿವ್ ಫೀಲ್ಡ್‌ನಲ್ಲಿರುವವರು ಅನೇಕರು ಸತ್ಯಸಂಧತೆಯನ್ನು ಬಿಟ್ಟು ನಡೆದುಕೊಳ್ಳುತ್ತಿದ್ದಾರೆ. ನಮ್ಮ ಸರ್ಕಾರದವರು ಅಂತಹವರ ಮೇಲೆ ಶಿಕ್ಷೆ ವಿಧಿಸಲು ಹಿಂಜರಿಯುತ್ತಿದ್ದಾರೆ.

Mr. SPEAKER.—Are we concerned now with the administration of the Co-operative Department ?

ಶ್ರೀ ಬಿ. ಜೆ. ಲಿಂಗೇಗೌಡ.—ನಾನು ಆಹಾರದ ಬೆಲೆಯನ್ನು ಯಾವ ರೀತಿಯಲ್ಲಿ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಿನವರು ಹೆಚ್ಚಿಸುತ್ತಿದ್ದಾರೆಂದು ನಾನು ಹೇಳುತ್ತೇನೆ. ಇತ್ತೀಚೆಗೆ ಸರ್ಕಾರದವರು ಜೋಳವನ್ನು ಬಿಜಾಪುರದಿಂದ ನಮ್ಮ ಜಿಲ್ಲೆಯ ಕೆಲವು ಭಾಗಗಳಿಗೆ ಸಹಕಾರ ಸಂಘಗಳ ಮುಖಾಂತರ ಸರಬರಾಜು ಮಾಡುತ್ತಿದ್ದಾರೆ. ಸಾಗಾಣಿಕೆಯ ಖರ್ಚಿಗಾಗಿ ಒಂದು ಕ್ವಿಂಟಾಲಿಗೆ ಹನ್ನೊಂದೂವರೆ ರೂಪಾಯಿಗಳನ್ನು ಚಾರ್ಜು ಮಾಡಿದ್ದಾರೆ. ಈ ವಿಚಾರವನ್ನು ನಾನು ಅಧಿಕಾರಿಗಳ ಗಮನಕ್ಕೆ ತಂದಾಗ ಸರ್ಕಾರದವರು ಹನ್ನೊಂದೂ ಮುಕ್ಕಾಲು ರೂಪಾಯಿಗಳವರೆಗೆ ಕೊಡಬಹುದೆಂದು ತಿಳಿಸಿದ್ದಾರೆಂದು ಹೇಳಿದರು. ನಂತರ ನಾನೇ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿದೆ. ಅವರೂ ಕೂಡ ನಾವು ಏನು ಮಾಡುವುದಕ್ಕಾಗುತ್ತದೆ, ಸ್ವಲ್ಪ ಮಾತ್ರ ಹೆಚ್ಚಾಗಿದೆ ಎಂದು ಹೇಳಿ ನಾವು ಸರ್ಕಾರದ ಆಜ್ಞೆ ಪ್ರಕಾರ ನಡೆಯುತ್ತಿದ್ದೇವೆಂದು ಹೇಳಿದರು. ಆಗ ನಾನೇ ಕೊನೆಗೆ

(ಶ್ರೀ ಬಿ. ಜೆ. ಲಿಂಗೇಗೌಡ)

ಲಾರಿ ಓನರುಗಳನ್ನು ಭೇಟಿ ಮಾಡಿ ಕ್ವಿಂಟಾಲಿನ ಮೂಟೆಯೊಂದಕ್ಕೆ ಏಳುವರೆ ರೂಪಾಯಿಗಳ ಸಾಗಾಣಿಕೆಯ ರೀಟಿನಿಂದ ಸರಬರಾಜು ಮಾಡಲು ಒಪ್ಪಿಕೊಂಡಂಥ ಕಾಗದವನ್ನು ಜಿಲ್ಲಾಧಿಕಾರಿಗಳಿಗೆ ತಂದುಕೊಟ್ಟೆ. ಆ ಪ್ರಕಾರ ಜಿಲ್ಲಾಧಿಕಾರಿಗಳು ತಕ್ಷಣ ತಕ್ಕ ಕ್ರಮವನ್ನು ತೆಗೆದುಕೊಂಡರು. ಆದ್ದರಿಂದ ಸೊಸೈಟಿಯವರೇ ಬಡವರಿಂದ ಒಂದು ಕೆ.ಜಿ.ಗೆ. 4 ನಯೇಪೈಸೆಯಂತೆ ಹೆಚ್ಚಿಗೆ ವಸೂಲು ಮಾಡಿದರೆ ಹೇಗೆ ? ಸರ್ಕಾರದವರು ಆಹಾರದ ಬೆಲೆಯನ್ನು ಹಿಡಿತದಲ್ಲಿಟ್ಟುಕೊಳ್ಳಬೇಕಾಗುತ್ತದೆ ? ಆದ್ದರಿಂದ ಸಹಕಾರ ಸಂಘಗಳಲ್ಲಿರುವ ಯಾರೇ ಆಗಲಿ ತಪ್ಪು ಮಾಡುತ್ತಿದ್ದರೆ ಅಂತಹವರ ಮೇಲೆ ತಕ್ಕ ಶಿಕ್ಷೆ ಮಾಡಬೇಕೆಂದು ನಾನು ಹೇಳುತ್ತೇನೆ. ನಾನು ಇನ್ನೂ ಅನೇಕ ವಿಷಯಗಳನ್ನು ಹೇಳಬೇಕಾಗಿತ್ತು. ಆದರೆ ನನಗೆ ಕಾಲಾವಕಾಶವಿಲ್ಲ. ಇವತ್ತು ಸಭಾಪತಿಗಳು ನನಗೆ ಅಪೂರ್ವ ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ನಾನು ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Sri Andaniah. Not present. Sri K. P. Gadag. Not present. Sri Sunthankar.

Hon'ble Members should be present in their seats when they are called upon to participate.

Sri B. R. SUNTHANKAR (Belgaum City).—Sir, I would like to touch on only three or four points. Before that I would like to ask one question. This subject of food production is being discussed in the country for the last so many years. But, unfortunately, the outcome has been very poor almost nil, if I may say so. So the question that arises is whether our rulers are really very serious about this problem, and whether we are really very serious about this problem. And, the answer to the question is given by Dr. Elsminger with his remark that "there seems to be almost total absence of any sense of urgency in increasing food production." This is not far from truth. The fact is that we are not really very serious about increasing our food production.

Mr. SPEAKER.—Then this Resolution would not have been here. Are we talking about the past ? Is this a Debate on a no-confidence motion ? Are we censuring the Government ? That is why I appeal to the member to come to the point and suggest what should be done. Why should we waste time in preliminaries ?

Sri B. R. SUNTHANKAR.—Sir, as I said, I will touch only three or four points. My first point is we must utilise our resources of land and water to the maximum which we are not doing at present. Our methods should be extensive as well as intensive. All the available land should be brought under the plough. In our State about ten per cent of land is lying cultivable fallow. Every attempt should be made to bring that land into cultivation. Similarly, intensive methods of increasing agricultural production should be utilised. The yield per acre in our country of all crops is very low as compared with other countries. We must put maximum efforts to increase our yield per acre. I am an agricultural graduate. In our college course, we were given small plots of land to raise two crops. We used to get bumper crops. The growth of plants was vigorous and we got bumper yield in our pieces of land. On the college farm also we observed bumper crops. In U. P., four Japanese farmers have settled and they have raised a farm and they have shown that they can get four times the yield on their farms. Why should it not

be possible for the common cultivators ? Why should not similar conditions be created for common cultivators in their own land as well ? We should consider in that way the cultivator should be assisted in all directions and in all ways to increase his yield in every inch of his land.

Similarly, Sir, our State is not exploiting the irrigation potentialities to the fullest. Our State is one of the States in India which has been utilising the irrigation potential less than 80 per cent. So, maximum efforts should be made to fully utilise our irrigation potential. In Hyderabad Karnataka under Thungabhadra Canal, there are immense possibilities for starting mechanised farms. In the Second Five-Year Plan, there was one scheme allotted for the Mysore State to start a mechanised seed farm on the lines of Suratgarh farm. That scheme was dropped and we did not find a mention of it in the Third Five-Year Plan In Hyderabad Karnatak under Thungabhadra Canals in Gulbarga District particularly ideal conditions exist for starting a mechanised farm. There, there is dearth of human labour and death of cattle. But there is immense land which is available for cultivation. Government should start a mechanised farm in that area.

Similarly, about boring wells, some Hon'bel Members remarked yesterday that we are not exploiting this resource. Wherever possible, boring wells should be dug up. At the Ugar Sugar Factory, they have constructed ordinary tanks in the black-soil on the bank of Krishna river. Black-soil is impervious. So, ordinary tanks could be constructed. They pump out water form Krishna river in the tanks and from these tanks they irrigate their cane crop. These are ordinary soil tanks. Government and the Agriculture Department should think over this and this possibility of constructing soil tanks on the rivers should be exploited

Coming to research, our Agriculture Department has signally failed in this respect and have not done any valuable work in this field. Improved varieties will have to be found out. Jawar is one of the most important crop in our State. 65 lakhs acres of land are under cultivation for jawar. But if we consider the coverage of improved seeds in respect of jawar, it is very poor ; it is about 30 per cent. By the end of the Second plan only 25 per cent of the area was brought under improved seeds. I do not know the latest position and I request the Agriculture Minister to supply the latest statistics. Draught Resistant varieties of jawar should be found out for dry districts like Bellary and Dharwar districts.

Then, Sir, cotton is a very important crop in the State. Mysore stands third in area under cotton is the whole of Inda. Black gram and wilt diseases are causing heavy damages to the crop. Disease Resistant varieties will have to be found out. Similarly Tikka is causing heavy damage to groundnut. Tikka Resistant variety must be found out. That is very important. Regarding improved varieties, no work has been done by the department in respect of oil seeds, pulses, tur and bajra. The department must make serious efforts to find out new varieties. Along with finding out new varieties of seeds, new types of implements

(SRI B. R. SUNTHANKAR)

also should be devised. Methods of more fficient and labour saving devices must also be found out by the department. The Nalgar Committee has remarked that the crisis of agriculture is the crisis of administration. That is quite true. Sir, our Agriculture Department will have to be reorganised. The present state of the department is incompetent for imporving agriculture in our State. The whole bureaucratic set up will have to be reorganised.

The last point is. education and extension. All the improvements that have been carried on do not reach the common cultivator in spite of the loud talks from house-tops and our cultivator remains at the same level. All these researches, all these improved methods and scientific knowledge must reach the common cultivator so that he can add to his agricultural activities. For that this education and extension services should be extended. With these words I conclude.

ಶ್ರೀಮತಿ ಚಂಪಾಬಾಯಿ ಭೋಗಲೆ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಈ ಸಭೆಯ ಮುಂದೆ ತಂದಿರತಕ್ಕ ಠರಾವನ್ನು ಮನಃಪೂರ್ವಕವಾಗಿ ಸ್ವಾಗತಿಸುತ್ತಾ ನಾನು ಒಂದೆರಡು ಸಲಹೆಗಳನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಈಗ ಪಾಕೀಸ್ಥಾನದವರು ನಮ್ಮ ದೇಶದ ಮೇಲೆ ಧಾಳಿಯನ್ನು ಎಬ್ಬಿಸಿದ್ದಾರೆ. ಈ ಸಂದರ್ಭದಲ್ಲಿ ಆಹಾರದ ಕೊರತೆಯನ್ನು ನೀಗುವ ಸಲುವಾಗಿ ಅಹಾರೋತ್ಪಾದನೆಯನ್ನು ಹೆಚ್ಚಿಸಲು ಸರ್ಕಾರದವರು ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಸಭೆಯಲ್ಲಿ ಒಂದು ಠರಾವನ್ನು ತಂದಿದ್ದಾರೆ. ನಮ್ಮ ಎಲ್ಲಾ ಯೋಜನೆಗಳಲ್ಲೂ ಕೂಡ ಆಹಾರದ ಕೊರತೆಯನ್ನು ನೀಗುವ ಸಲುವಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಆದರೆ ನಮ್ಮ ಸರ್ಕಾರದವರು ಯಾವು ಯಾವುದೋ ಕಾರಣಗಳನ್ನು ಹೇಳಿಕೊಂಡು ರೈತರಿಗೆ ಸರಿಯಾಗಿ ಗೊಬ್ಬರ, ಬೀಜ ಮುಂತಾದ ವ್ಯವಸಾಯದ ಸಲಕರಣೆಗಳನ್ನು ಒದಗಿಸುತ್ತಿಲ್ಲ. ಮತ್ತು ನೀರಾವರಿ ಯೋಜನೆಗಳ ಸಂಬಂಧದಲ್ಲಿ ಪ್ಲಾನು ಮತ್ತು ಎಸ್ಟಿಮೇಟುಗಳನ್ನು ತಯಾರು ಮಾಡುವುದರಲ್ಲೇ ವೇಳೆಯನ್ನು ಕಳೆದಿದ್ದಾರೆಂದು ನನಗೆ ಅನಿಸುತ್ತದೆ. ಏತಕ್ಕೆಂದರೆ ಈಗ ಯಾವುದಾದರೂ ಒಂದು ನೀರಾವರಿ ಯೋಜನೆಯ ಪ್ಲಾನು ಮತ್ತು ಎಸ್ಟಿಮೇಟು ಮಾಡಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟರೆ ಅದು ಒಂದು ವರ್ಷ, ಎರಡು ವರ್ಷ, ಮೂರು ವರ್ಷಗಳಾದರೂ ಅದು ಕಾರ್ಯ ರೂಪಕ್ಕೆ ಬರುವುದಿಲ್ಲ ಎಂದು ಅನಿಸುತ್ತದೆ. ರೈತರು ಆಹಾರ ಧಾನ್ಯವನ್ನು ಬೆಳೆಯಲು ಅವರಿಗೆ ಬೇಕಾಗಿರತಕ್ಕ ಗೊಬ್ಬರ, ಪಂಪುಸೆಟ್ಟುಗಳನ್ನು ಕೊಡುವುದಾಗಲೀ, ಬಾವಿಯನ್ನು ತೆಗೆಯುವುದಕ್ಕೆ ಸಾಲವನ್ನು ಕೊಡುವುದಾಗಲೀ ಸರಿಯಾಗಿ ನಡೆಯುತ್ತಾ ಇಲ್ಲ. ಷಹರುಗಳಲ್ಲಿರತಕ್ಕವರು ಸರ್ಕಾರದವರನ್ನು ಕೇಳಿದರೆ ಅವರಿಗೆ ಪಂಪುಸೆಟ್ಟುಗಳು ಸಿಕ್ಕುತ್ತದೆ, ಮತ್ತು ನೀರಾವರಿ ಬಾವಿಗಳಿಗೆ ಸಾಲವೂ ಸಿಕ್ಕುತ್ತದೆ. ಆದರೆ ರೈತರಿಗೆ ಮಾತ್ರ ಅವು ಸಿಕ್ಕುವುದಿಲ್ಲ. ಈ ಎಲ್ಲಾ ಕಾರಣಗಳ ದೆಸೆಯಿಂದ ಆಹಾರೋತ್ಪಾದನೆಯನ್ನು ಮಾಡತಕ್ಕ ಯೋಜನೆಗಳು ಹಿಂದೆ ಬಿದ್ದಿವೆ. ಈಗ ಒಬ್ಬ ರೈತನಿಗೆ 5 ಎಕರೆ ಜಮೀನು ಇದ್ದರೆ ಅವನು ಎರಡು ಎಕರೆಗೆ ಕಬ್ಬು ಹಚ್ಚುತ್ತಾನೆ. ಎರಡು ಎಕರೆಗೆ ಹತ್ತಿ ಹಚ್ಚುತ್ತಾನೆ. ಒಂದು ಎಕರೆಗೆ ಜೋಳ ಬಿತ್ತುತ್ತಾನೆ. ಹೀಗೆ ಅವನಿಗೆ ಯಾವು ಯಾವುದು ಎಷ್ಟೆಷ್ಟು ಬೇಕೋ ಅಷ್ಟಷ್ಟನ್ನು ಸಾಗು ಮಾಡುತ್ತಾನೆ. ಆದ್ದರಿಂದ ಸರ್ಕಾರದವರು ಕಡ್ಡಾಯವಾಗಿ ರೈತ ಇಷ್ಟು ಎಕರೆಗಳಲ್ಲಿ ಜೋಳವನ್ನು ಬಿತ್ತಬೇಕೆಂದು ಒಂದು ಕಾನೂನನ್ನು ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಾರಿಗೆ ರೊಕ್ಕ ಬೇಕೋ ಅಂಥವರು ಆಹಾರವನ್ನು ಉತ್ಪತ್ತಿ ಮಾಡತಕ್ಕ ಬೆಳೆಯನ್ನು ಬಿತ್ತುವುದನ್ನು ಬಿಟ್ಟು ರೊಕ್ಕವನ್ನು ಕೊಡತಕ್ಕ ಬೆಳೆಯನ್ನು ಬಿತ್ತುತ್ತಾರೆ. ಆದ್ದರಿಂದ ರೊಕ್ಕವನ್ನು ಕೊಡತಕ್ಕ ಬೆಳೆಯನ್ನು ಬೆಳೆಯುವುದನ್ನು ಕಡಿಮೆ ಮಾಡಬೇಕು. ಈಗ ಒಬ್ಬ ರೈತನಿಗೆ 10 ಎಕರೆ ಜಮೀನು ಇದ್ದರೆ ಆದರಲ್ಲಿ ಅವನು 5 ಎಕರೆಗೆ ಕಡ್ಡಾಯವಾಗಿ ಜೋಳವನ್ನು ಬಿತ್ತುವಂತೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿ ಚಿಕ್ಕೋಡಿ ಮತ್ತು ಹುಕ್ಕೇರಿ ಈ ಪ್ರದೇಶದಲ್ಲಿ ಕಬ್ಬು ಮತ್ತು ತಂಬಾಕನ್ನು ಹೆಚ್ಚು ಬೆಳೆಯುತ್ತಾರೆ. ಆ ಪ್ರದೇಶವಲ್ಲಿಯೂ ಕೂಡ ಕಡ್ಡಾಯವಾಗಿ ಇಷ್ಟು ಎಕರೆಯಲ್ಲಿ ಜೋಳವನ್ನು ಬೆಳೆಯುವಂತೆ ಒಂದು ಕಾನೂನನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿ ನಾನು ಒಂದು ಜಾಯಿಂಟ್ ಕೋಆಪರೇಟೀವ್ ಫಾರ್ಮಿಂಗ್ ಸೊಸೈಟಿ ಎಂದು ಮಾಡಿ

ಸಿದ್ದೇನೆ. ಅದರಲ್ಲಿಯೂ ಕೂಡ ಇಷ್ಟು ಎಕರೆಯಲ್ಲಿ ಕಡ್ಡಾಯವಾಗಿ ಜೋಳವನ್ನು ಬೆಳೆಯಬೇಕೆಂದು ಮಾಡಿದ್ದೇವೆ. ಮತ್ತು ಈಗಾಗಲೇ ಕಾರತಗ ಎನ್ನುವ ಕಡೆ ಕೂಡ ಮಹಾರತೀ ವತನಿ ಭೂಮಿಗಳು ಕೋಆಪರೇಟೀವ್ ಸೊಸೈಟಿ ಮಾಡಿದ್ದು ಇನ್ನುಳಿದ ಗ್ರಾಮಗಳಲ್ಲಿದ್ದ ಮಹಾರತೀ ವತನಿ ಜಮೀನುಗಳ ಬಗ್ಗೆ ಕೂಡ ಇಂತ ಸೊಸೈಟಿ ಮಾಡುವ ಬಗ್ಗೆ ಕಾನೂನು ಮಾಡಬೇಕೆಂದು ವಿನಂತಿಸುತ್ತೇನೆ. ಅದಕ್ಕೆ ಕಲೆಕ್ಟರಿಂದ ಪರ್ಮಿಷನ್ ಬೇಕಾಗುತ್ತದೆ. ವತನಿಲ್ಯಾಂಡ್ ವಿಷಯದಲ್ಲಿ ಒಂದು ಕಾನೂನು ಮಾಡಿ ಅದನ್ನು joint farming society ಅಂತ ಮಾಡಿ ಕಾರ್ಯ ರೂಪಕ್ಕೆ ತರುವಂತೆ ಸರಕಾರ ಅನುಕೂಲ ಮಾಡಿಕೊಡಬೇಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಸಹಕಾರ ಸಂಘಗಳ ವಿಷಯದಲ್ಲಿ ಹೇಳುವುದಾದರೆ ಸಾಮಾನ್ಯ ರೈತರಿಗೆ ಸಹಕಾರ ಸಂಘಗಳಲ್ಲಿ ಸಾಕಷ್ಟು ಸಾಲ ಕೊಡುವುದಿಲ್ಲ. ನೀರಾವರಿ ಬಾವಿಗಳಿಗೆ ಸರಿಯಾಗಿ ಸಾಲವನ್ನು ಕೊಡುವುದಿಲ್ಲ. ಸರಿಯಾಗಿ ಅವರಿಗೆ ಗೊಬ್ಬರವನ್ನು ಕೊಡುತ್ತಿಲ್ಲ. ಸರ್ಕಾರದವರು ರೈತರಿಗೆ ಕೊಡತಕ್ಕ ಹೈಬ್ರೀಡ್ ಜೋಳ ಏನಿದೆ ಅದಕ್ಕೆ ಒಂದು ಕಿಲೋಕ್ಕೆ 8 ರೂಪಾಯಿಗಳಂತೆ ಚಾರ್ಜ್ ಮಾಡುತ್ತಾರೆ. ಆದ್ದರಿಂದ ಸರ್ಕಾರದವರು ಒಂದು ಕಮಿಟಿ ಮಾಡಿ ಅದರೊಳಗೆ ಸರ್ಕಾರದವರು ರೈತರಿಗೆ ಕೊಡತಕ್ಕ ಸುಧಾರಿಸಿದ ಈ ಬಿತ್ತನೆ ಬೀಜಕ್ಕೆ ಏನು ಧಾರಣೆಯನ್ನು ಗೊತ್ತು ಮಾಡಬೇಕೆಂಬುದನ್ನು ವಿಚಾರ ಮಾಡಬೇಕು. ಪ್ರತಿಯೊಂದು ಅಗ್ರಿಕಲ್‌ಚರಲ್ ಯೋಜನೆಯಲ್ಲಿಯೂ ವ್ಯವಸಾಯದ ವಿಷಯದಲ್ಲಿ ರೈತರಿಗೆ ತರಪೇತಿಯನ್ನು ಕೊಡುವುದಕ್ಕೋಸ್ಕರ ತರಪೇತಿ ಕೇಂದ್ರಗಳನ್ನು ತೆಗೆಯಬೇಕು. ನಮಗೆ ಸ್ವಾತಂತ್ರ್ಯ ಬಂದು 18 ವರ್ಷಗಳಾಗಿದ್ದಾಗ್ಯೂ ನೀರಾವರಿ ಸೌಲಭ್ಯಗಳನ್ನು ರೈತರಿಗೆ ಸಾಕಷ್ಟು ಒದಗಿಸಿ ಕೊಟ್ಟಿಲ್ಲ. ಆದ್ದರಿಂದ ಸರ್ಕಾರದವರು ದಯವಿಟ್ಟು ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಕಮಿಟಿಯನ್ನು ಮಾಡಿ ರೈತರಿಗೆ ಒದಗಿಸಬೇಕಾದ ಸೌಲಭ್ಯಗಳ ವಿಚಾರದಲ್ಲಿ ಅವರ ಸಲಹೆಯನ್ನು ಪಡೆದು ಅದರಂತೆ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಸಹಕಾರ ಸಂಘಗಳ ಮೂಲಕ ಬಾವಿಗಾಗಿ ರೈತರಿಗೆ ಸಾಲ ಕೊಡುವಾಗ ಸಹಕಾರ ಸಂಘಗಳು ರಿಜಿಸ್ಟರು ಆಗದೇ ಇದ್ದರೆ ಸಾಲ ಕೊಡುತ್ತಿಲ್ಲ. ಸಹಕಾರ ಸಂಘಕ್ಕೆ ಮಾಲ್ಕಿ ಜಮೀನು ಇಲ್ಲದ್ದರಿಂದ ಸಾಲ ದೊರೆಯುತ್ತಿಲ್ಲ. ಆದುದರಿಂದ ಸಹಕಾರ ಸಂಘಗಳನ್ನು ಅವು ಚೆನ್ನಾಗಿ 5-6 ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದರೆ ಅಂತಹವುಗಳಿಗೆ ಕೊಟ್ಟು ಜಮೀನ್ ಖಾಯಂ ಮಾಡಬೇಕು ಮತ್ತು ಅದರ ಮೂಲಕ ರೈತರಿಗೆ ಬೇಗ ಸಾಲ ಸಿಗುವಂತೆ ಏರ್ಪಾಡು ಮಾಡಬೇಕು.

ಇನ್ನು ಪಂಪುಸೆಟ್ಟುಗಳ ವಿಚಾರ ಹೇಳುವಾಗ ಮೂರು ನಾಲ್ಕು ವರ್ಷಗಳಿಂದಲೂ ಪಂಪುಸೆಟ್ಟುಗಳಿಗಾಗಿ ಅರ್ಜಿಗಳನ್ನು ಹಾಕಿದ್ದರೂ ಕೂಡ ಅದರ ಬಗ್ಗೆ ನಾಲ್ಕಾರು ಸಾರಿ ಎನ್‌ಕ್ವೈರಿಗೆಂದು ಹೋಗಿ ವಾಪಸು ಬರುತ್ತಲಿವೆ. ಇಷ್ಟರೊಳಗೆ ಐದು ವರ್ಷದಷ್ಟು ಕಾಲ ಪರಿಮಿತಿಯೂ ಮುಗಿದು ಹೋಗುತ್ತದೆ. ಹೀಗಾದರೆ ರೈತರಿಗೆ ಪಂಪುಸೆಟ್ಟು ಯಾವಾಗ ಸಿಗುತ್ತದೋ ಹೇಳುವುದಕ್ಕಾಗುವುದಿಲ್ಲ. ಅದಕ್ಕಾಗಿ ಸಕಾಲದಲ್ಲಿ ರೈತರಿಗೆ ಪಂಪುಸೆಟ್ಟುಗಳು ದೊರಕುವ ಹಾಗೆ ಏರ್ಪಾಡು ಮಾಡಬೇಕು. ಯಾರು ಹೆಚ್ಚು ಪ್ರಯತ್ನ ಮಾಡದೇ ಇರುತ್ತಾರೋ ಅಂತಹವರಿಗೆ ಪಂಪುಸೆಟ್ಟುಗಳನ್ನು ಕೊಡುತ್ತಾರೆ. ಬೇಕಾದವರಿಗೆ ಸಿಗುತ್ತಿಲ್ಲ. ಇದರ ಕಡೆಗೆ ಸರಕಾರ ಲಕ್ಷ ಕೊಡಬೇಕು.

ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಟ್ರ್ಯಾಕ್ಟರು (Tractor)ಗಳನ್ನು ಪಡೆಯಬೇಕೆಂದು ಇಲ್ಲಿನ ರೈತರು ಸುಮಾರು ಏಳು ವರ್ಷಗಳಿಂದಲೂ ಪ್ರಯತ್ನ ಮಾಡುತ್ತಿದ್ದರು. ಆದರೆ ಈಗ್ಗೆ ಮೂರು ತಿಂಗಳ ಹಿಂದೆ ನಮಗೆ ಒಂದು ಟ್ರ್ಯಾಕ್ಟರು ಸಿಕ್ಕಿದೆ. ಹೀಗಾದರೆ ರೈತರಿಗೆ ಸಾಗುವಳಿ ಮಾಡಲು ಸರಕಾರ ಏನು ಅನುಕೂಲ ಮಾಡಿಕೊಟ್ಟಂತಾಯಿತು ? ಇದನ್ನು ಸರಕಾರ ಯೋಚನೆ ಮಾಡಬೇಕು. ಅಲ್ಲದೆ ಆಹಾರದ ಪರಿಸ್ಥಿತಿ ಸುಧಾರಿಸಬೇಕಾದ ಈ ಕಾಲದಲ್ಲಿ ರೈತನಿಗೆ ಒಂದು ರೂಪಾಯಿನಷ್ಟು ಕೂಲಿ ಕೊಡುತ್ತಿದ್ದಾರೆ. ಅದರಲ್ಲೂ ನಮ್ಮ ಷೆಡ್ಯೂಲು ಕ್ಯಾಸ್ಟಿನವರನ್ನು ಯಾರೂ ಕೇಳುತ್ತಿಲ್ಲ. ಅಲ್ಲದೆ ಬೀಜದ ಜೋಳವನ್ನು ಹಂಚುವಾಗ ಐದು ಕಿಲೋಕ್ಕೆ 45 ರೂಪಾಯಿ ತೆಗೆದುಕೊಳ್ಳಬೇಕೆಂದು ನಿಗದಿಮಾಡಿದ್ದಾರೆ. ಅದನ್ನು ಕಡಿಮೆ ಮಾಡಬೇಕು ಮತ್ತು ಈಗಿನ ಪರಿಸ್ಥಿತಿಗೆ ತಕ್ಕಂತೆ ಕೂಲಿ ದರವನ್ನು ನಿರ್ದಿಷ್ಟಪಡಿಸಬೇಕೆಂದು ವಿನಂತಿ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, ಆಹಾರದ ಕೊರತೆಯನ್ನು ಕಡಿಮೆ ಮಾಡಿ ಸ್ವಾವಲಂಬನೆ ಮಾಡುವ ಈ ಕಾಲದಲ್ಲಿ ನಾವು ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಕ್ಷೇತ್ರದಲ್ಲಿ ಏನು ಕಾರ್ಯಕ್ರಮವನ್ನು ಮಾಡಬೇಕು ಎನ್ನುವುದರ ಬಗ್ಗೆ ಈಗಾಗಲೇ ನಮ್ಮ ಮಾನ್ಯ ಸ್ನೇಹಿತರೆಲ್ಲರೂ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇನ್ನೂ ಹೊಸ ಸಲಹೆಗಳನ್ನೇನೂ ನಾವು ಮಾಡದೇ ಇದ್ದರೂ ಅವರು

(ಶ್ರೀ ಬಿ. ಬೈರಪ್ಪಾಜಿ)

ಹೇಳತಕ್ಕ ಸಲಹೆಗಳನ್ನೇ ಸರಕಾರಕ್ಕೆ ಇನ್ನೂ ಒತ್ತಿ ಹೇಳತಕ್ಕದ್ದು ನಮ್ಮ ಕರ್ತವ್ಯವಾಗಿದೆ. ಶ್ರೀಮಾನ್ ನಾರಾಯಣ ಗೌಡರು ಆಹಾರದ ವಿಚಾರದಲ್ಲಿ ಪರಿಪೂರ್ಣತೆಯನ್ನು ಹೊಂದಲು ಸರಕಾರ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ಈಗಾಗಲೇ ಇಲ್ಲಿ ತಿಳಿಸಿದ್ದಾರೆ. ಇನ್ನೂ ಅನೇಕ ಕಾರ್ಯಕ್ರಮಗಳನ್ನು ನಡೆಸತಕ್ಕ ಬಗ್ಗೆ ಅವರು ಮುಂದೆ ಹೇಳಬಹುದು ಎಂದು ನನಗನಿಸುತ್ತದೆ. ರೈತರು ಕಷ್ಟಪಟ್ಟು ದುಡಿದು ಆಹಾರವನ್ನು ಬೆಳೆದು ತಾವೂ ಸುಖವಾಗಿದ್ದು ದೇಶಕ್ಕೂ ಒದಗಿಸುವುದಕ್ಕೆ ತಯಾರಾಗಿದ್ದಾರೆ. ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುತ್ತಿಲ್ಲ. ಪ್ರಥಮವಾಗಿ ನೀರು ಮತ್ತು ಅದಕ್ಕೆ ಬೇಕಾದ ಗೊಬ್ಬರ ಬಹು ಮುಖ್ಯ. ಬೀಜ ಇರಲಿ; ರೈತ ತಾನು ಮುಂದಿನ ವರ್ಷಕ್ಕೆ ಬೇಕಾಗುವ ಬೀಜವನ್ನು ಹೇಗಾದರೂ ಶೇಖರಿಸಿಕೊಂಡೇ ಇರುತ್ತಾನೆ. ಪ್ರೈಮರಿ ನೀಡ್ಸ್ ಏನಿದೆ ಎಂದರೆ ನೀರು ಹಾಗೂ ಕೃತಕ ಗೊಬ್ಬರ, ಇವೆರಡನ್ನೂ ಸರಿಯಾದ ರೀತಿಯಲ್ಲಿ ಒದಗಿಸಿದರೆ ರೈತರು ಆಹಾರವನ್ನು ಬೆಳೆಯುವುದಕ್ಕೆ ಸದಾ ಸಿದ್ಧರಾಗಿರುತ್ತಾರೆ. ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಾದರೆ ಎಂದರೆ ನಮ್ಮ ಪಾವಗಡ ಹಾಗೂ ತುರುವೇಕೆರೆ ತಾಲ್ಲೂಕುಗಳಲ್ಲಿ ಬಾವಿಗಳಿಂದ ವ್ಯವಸಾಯ ಮಾಡುವ ಪದ್ಧತಿ ಇದೆ. ಈ ತಾಲ್ಲೂಕುಗಳಿಂದ ಬೆಳೆದ ಆಹಾರದ ದವಸಗಳು ಬೇರೆ ಜಿಲ್ಲೆಗಳಿಗೂ ಕೂಡ ಹೋಗುತ್ತವೆ ಮತ್ತು ಅಲ್ಲಿನ ಜನಕ್ಕೆ ಆಹಾರ ಒದಗಿಸುತ್ತಿದ್ದಾರೆ. ಇದಕ್ಕೆ ಕಾರಣ ನಮ್ಮಲ್ಲಿರತಕ್ಕ ನೀರಿನ ಆಸರೆ. ನೀರು ಬಹು ಮುಖ್ಯವಾದುದು. ಇದನ್ನು ಸರಕಾರ ಉಪಯೋಗಿಸಿಕೊಳ್ಳಲು ಸರಿಯಾದ ಪ್ರಯತ್ನ ಮಾಡುತ್ತಿಲ್ಲ. ಅಲ್ಲಲ್ಲಿ ಬೋರ್‌ವೆಲ್ಸ್‌ಗಳನ್ನು ತೆಗೆಸಿ ನೀರನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿದೆ. ಕೆಲವು ಕಡೆ ಬೋರ್‌ವೆಲ್ಸ್‌ಗಳೆಂದು ಸುಮಾರು 30-40 ಅಡಿಗಳಷ್ಟು ತೆಗೆಸಿ ಅಲ್ಲಿ ನೀರು ಬರಲಿಲ್ಲ ಎಂದು ಅದನ್ನು ಹಾಗೇ ಬಿಟ್ಟು ಬಿಟ್ಟಿದ್ದಾರೆ. ಅದರ ಬಗ್ಗೆ ಗಮನ ಕೊಡಬೇಕೆಂದು ಮಾನ್ಯ ವ್ಯವಸಾಯ ಮಂತ್ರಿಗಳಾದ ಶ್ರೀಮಾನ್ ನಾರಾಯಣಗೌಡರಲ್ಲಿ ಪ್ರಾರ್ಥನೆ ಕೂಡ ಮಾಡಿಕೊಂಡೆ. ಅಂತಹ ಬೋರ್‌ವೆಲ್‌ಗಳನ್ನು ತೋಡಿಸಲು ಪ್ರತಿ ಒಂದು ತಾಲ್ಲೂಕಿಗೂ ಒಂದೊಂದು ಬೋರ್‌ವೆಲ್ ಮಿಷಿನ್ನುಗಳನ್ನು ಇಲಾಖೆಯವರೇ ಒದಗಿಸಬೇಕು. ಹಾಗೆ ಮಾಡಿಕೊಟ್ಟರೆ ಅಲ್ಲಲ್ಲಿ ಬೋರ್‌ವೆಲ್ಸ್‌ಗಳಂತಹ ಬಾವಿಗಳನ್ನು ತೆಗೆಸಿ ಅದರ ನೀರನ್ನುಪಯೋಗಿಸಿಕೊಳ್ಳಲು ಸಾಧ್ಯ. ಇದೂ ಅಲ್ಲದೆ ಎಲ್ಲೆಲ್ಲಿ ನೀರು ಸಿಗುತ್ತದೆ ಎನ್ನುವುದಕ್ಕೆ ಜಿಯಾಲಾಜಿಕಲ್ ಇಲಾಖೆಯವರ ಸಹಾಯವನ್ನು ವ್ಯವಸಾಯ ಇಲಾಖೆಯವರು ಪಡೆದುಕೊಂಡು ಎಲ್ಲೆಲ್ಲಿ ನೀರು ಸಿಗುತ್ತದೆ ಎಂದು ಕಂಡು ಬರುತ್ತದೆಯೋ ಅಲ್ಲೆಲ್ಲಾ ಬಾವಿಗಳನ್ನು ತೋಡಿಸಿ ರೈತರಿಗೆ ಸಹಾಯಮಾಡಬೇಕು. ಇದರ ಕಡೆಗೆ ಮಾನ್ಯ ಮಂತ್ರಿಗಳು ಗಮನಕೊಡಬೇಕೆಂದು ಹೇಳುತ್ತೇನೆ. ಅಲ್ಲದೆ ಈ ಬಗ್ಗೆ ಮಾನ್ಯ ಮಂತ್ರಿಗಳೂ ಕೂಡ ಕೆಲವು ಸ್ಕೀಮುಗಳನ್ನು ತಂದಿದ್ದಾರೆ. ಆದರೆ ಅದರ ರೂಲ್ಸುಗಳನ್ನು ನಾವು ಓದಿ ನೋಡಿದ ಮೇಲೆ ರೈತರು ಅದನ್ನು ತೆಗೆದುಕೊಳ್ಳುವುದು ಬಹಳ ಕಷ್ಟ ಎಂದು ತೋರುತ್ತೆ. ಆ ರೂಲ್ಸುಗಳು ಬಹಳ ಕಂಬರ್‌ಸಂ ಆಗಿವೆ. ಹೀಗಾದರೆ ರೈತ ಬೋರ್‌ವೆಲ್ಸ್‌ಗಾಗಿ ಸಾಲ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಪರಿಶೀಲನೆಮಾಡಿ ಸರಿಪಡಿಸಬೇಕು ಎನ್ನುವುದರ ಬಗ್ಗೆ ಆಮೇಲೆ ಮಂತ್ರಿಗಳೊಡನೆ ಮಾತನಾಡೋಣ. ಬೋರ್‌ವೆಲ್ಸ್ ಮಿಷಿನುಗಳನ್ನು ಪ್ರತಿ ತಾಲ್ಲೂಕಿನಲ್ಲೂ ಮಾಡಿಕೊಡತಕ್ಕದ್ದು ಬಹಳ ಮುಖ್ಯ ವಿಷಯ. ಹಾಗೇ ಕಮ್ಯೂನಿಟಿ ವೆಲ್ಸ್ ಎಂದು ಕೆಲವು ಕಡೆ ಮಾಡಬೇಕು. ಅದಕ್ಕೆ ಬೇಕಾಗುವ ಪಂಪುಸೆಟ್ಟುಗಳನ್ನು ಕೊಟ್ಟು ಒಂದೊಂದು ಬಾವಿ ತೋಡಿಸಿ ನಾಲ್ಕಾರು ರೈತರಿಗೆ ಒಂದು ಬಾವಿ ಎಂದು ಅದರ ಮೂಲಕ ಅವರಿಗೆ ನೀರನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇದಕ್ಕೆ ಬೇಕಾಗುವ ವಿದ್ಯುಚ್ಛಕ್ತಿಯನ್ನು ಸರಕಾರದವರೇ ಕೊಟ್ಟು ಇಂತಹ ಕಮ್ಯೂನಿಟಿ ವೆಲ್ಸ್‌ಗಳನ್ನು ಮಾಡಲು ಪ್ರಯತ್ನ ಮಾಡಬೇಕು. ನಮ್ಮಲ್ಲಿ ಟ್ಯೂಬ್ ವೆಲ್ಸ್‌ಗಳಿಲ್ಲ ಇಂತಹ ಬಾವಿಗಳು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಮಾಡಲು ಪ್ರಯತ್ನ ಮಾಡಬೇಕು. ಈ ರೀತಿ ಬೋರ್‌ವೆಲ್ಸ್, ಟ್ಯೂಬ್ ವೆಲ್ಸ್ ಹಾಗೂ ಕಮ್ಯೂನಿಟಿ ವೆಲ್ಸ್‌ಗಳನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ತೆಗೆಸಲು ಏರ್ಪಾಡುಮಾಡಿ ಅದರ ಮೂಲಕ ನೀರನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡಬೇಕು ಎಂದ ನಾನು ಸರಕಾರದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇನ್ನು ಮೈನರ್ ಇರಿಗೇಷನ್ನು ಬಗ್ಗೆ ಹೇಳುತ್ತಾ ನಮ್ಮ ಮಾನ್ಯ ನೀರಾವರಿ ಶಾಖೆಯ ಉಪಮಂತ್ರಿಗಳು ಕೆಲವಾರ ದೊಡ್ಡ ಪ್ರಾಜೆಕ್ಟುಗಳನ್ನೇ ತಯಾರು ಮಾಡುವುದರಲ್ಲಿದ್ದಾರೆ ಎಂದು ಹೇಳಿದರು. ಕೇಂದ್ರ ಸರ್ಕಾರದಲ್ಲಿ ಒತ್ತಾಯಮಾಡಿ ಈ ಸರ್ಕಾರದವರು ಮೈನರ್ ಇರಿಗೇಷನ್ನು ಕೆಲಸಗಳನ್ನು ಆದಷ್ಟು ಬೇಗ ಪ್ರಾರಂಭ ಮಾಡಿಸುವುದಕ್ಕೆ ಪ್ರಯತ್ನಪಡಬೇಕಾಗಿದೆ. ಬರೀ ಕಾಗದದ ಪ್ಲಾನು ಎಂದು ಮಾಡುತ್ತಾ ಹೋದರೆ ಅದರಿಂದ ಆಹಾರ ಬೆಳೆಯಲು ಸಾಧ್ಯವಾಗಲಾರದು ಎಂದು ನಾನು ಸರ್ಕಾರಕ್ಕೆ ಇಲ್ಲಿ ಹೇಳುತ್ತಿದ್ದೇನೆ.

ವಿದ್ಯುಚ್ಛಕ್ತಿಯ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಇಲ್ಲಿ ಆಗಲೇ ಹೇಳಿದ್ದಾರೆ. ಕ್ರಾಷ್ ಪ್ರೊಗ್ರಾಂ, ನಾರ್ಮಲ್ ಪ್ರೊಗ್ರಾಂ ಎಂದಾಗಲಿ ಅಥವಾ ಬೇರೆ ಯಾವ ಪ್ರೊಗ್ರಾಂನಿಂದಾಗಲೀ ಬಾವಿಗಳನ್ನು ತೆಗೆದು ರೈತರಿಗೆ ನೀರನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ ಅದಕ್ಕೆ ಬೇಕಾಗುವ ವಿದ್ಯುಚ್ಛಕ್ತಿ ಒದಗಿಸುವುದು ಸರ್ಕಾರದ ಕರ್ತವ್ಯ. ಇದರಲ್ಲಿ ಸರಕಾರ ಕೋಮಟಿ ಶೆಟ್ಟಿಗಳ ವ್ಯಾಪಾರ ಮಾಡಬಾರದು. ಹಾಗೆ ಇಷ್ಟು ಪರ್ಸೆಂಟಿನಷ್ಟು ಬಡ್ಡಿ ಕೊಡಬೇಕೆಂದು ಮಾಡಿದರೆ ವ್ಯವಸಾಯಗಾರರು ಉತ್ಪತ್ತಿ ಮಾಡುವುದರಲ್ಲಿ ಕುಂಠಿತವಾಗುತ್ತದೆ. ಸರಕಾರದವರು ಈ ದಿಸೆಯಲ್ಲಿ ಯೋಚನೆ ಮಾಡಿ ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಸೂಕ್ತ ಸಲಹೆಗಳನ್ನು ಕೊಡುವುದು ಬಹಳ ಮುಖ್ಯವಾದುದು ಎಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಸೂಚನೆ ಕೊಡಬಯಸುತ್ತೇನೆ.

ಆಹಾರ ಪರಿಪೂರ್ಣತೆಯಲ್ಲಿ ನಾನು ಮಾನ್ಯ ನೀರಾವರಿ ಉಪಮಂತ್ರಿಗಳಲ್ಲಿ ಹೇಳುವುದು ಸಣ್ಣ ಯೋಜನೆಗಳನ್ನು ಯಾವುದು ಮಾಡಿದ್ದಾರೆ ಅದನ್ನು ಕಾರ್ಯಗತ ಮಾಡುವುದಕ್ಕೆ ಹೆಚ್ಚು ಗಮನ ಕೊಡಬೇಕಾದುದು ಅಗತ್ಯ ಮತ್ತು ಅದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕಾದುದು ಅವಶ್ಯಕ. ಇದು ಬಹಳ ಪ್ರಾಮುಖ್ಯವಾದ ವಿಚಾರ. ನಾನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡುವುದು ಬರೀ ಭಾಷಣಗಳನ್ನು ಇಲ್ಲಿ ನಾಲ್ಕಾರು ದಿನಗಳು ಮಾಡಿದರೂ ಅದರಿಂದ ಹೆಚ್ಚು ಆಹಾರ ಉತ್ಪತ್ತಿಯಾಗಲಾರದು. ನಾನು ಅವರಲ್ಲಿ ಸಲಹೆ ಮಾಡುವುದು ಪ್ರತಿಯೊಬ್ಬ ಮಂತ್ರಿಗಳಿಗೂ ಒಂದೊಂದು ಜಿಲ್ಲೆ ಎಂದು ಗೊತ್ತುಮಾಡಿ ಆಯಾ ಜಿಲ್ಲೆಯಲ್ಲಿರುವ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿರುವ ಕೆಲಸಗಳೇನಾದರೂ ಇದ್ದರೆ ಅವನ್ನು ಪೂರ್ತಿ ಮಾಡುವುದರ ಕಡೆಗೆ ಲಕ್ಷ್ಯ ಕೊಟ್ಟರೆ ಅದರಿಂದ ಸ್ವಲ್ಪ ಮಟ್ಟಿಗೆ ರೈತರಿಗೆ ಅನುಕೂಲವಾಗಬಹುದು. ಮತ್ತು ರೈತರ ಕಷ್ಟಸುಖಗಳನ್ನು ನೇರವಾಗಿ ಪಡೆಯಲು ಅನುಕೂಲವಾಗುತ್ತದೆ. ಇದರಂತೆ ಮಾಡಲು ಸರಕಾರ ತಕ್ಕಕ್ರಮ ತೆಗೆದುಕೊಂಡರೆ ಆಹಾರದ ಪರಿಪೂರ್ಣತೆ ಸಾಧಿಸಬಹುದು. ಇಲ್ಲದೇ ಇದ್ದರೆ ಆಹಾರದ ವಿಚಾರದಲ್ಲಿ ಸ್ವಾವಲಂಬನೆ ಮಾಡಲು ಸಾಧ್ಯವಿಲ್ಲ ಎಂದು ವಿಷಾದದಿಂದ ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

10-00 A.M.

ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿ ಮಳೆಬಾರದೆ ರೈತರೆಲ್ಲಾ ಬಹಳ ಕಂಗೆಟ್ಟು ಹೋಗಿದ್ದಾರೆ. ಆದುದರಿಂದ ಅಲ್ಲಿ ಕಂದಾಯವನ್ನು ಮಾಫಿಮಾಡತಕ್ಕದ್ದು ಸರ್ಕಾರದವರ ಮುಖ್ಯ ಕರ್ತವ್ಯವಾಗಿದೆ. ನಾವು ಈಗ ಬಂದಿರತಕ್ಕ ತುರ್ತುಪರಿಸ್ಥಿತಿಯಲ್ಲಿ ಎಲ್ಲಾ ವಿಚಾರದಲ್ಲಿಯೂ ಸರ್ಕಾರದೊಂದಿಗೆ ಸಹಕರಿಸುವುದು ನಮ್ಮೆಲ್ಲರ ಪ್ರಥಮ ಕರ್ತವ್ಯವಾಗಿದೆ. ಜನರು ಕಷ್ಟದಲ್ಲಿರುವಾಗ ಅದನ್ನು ನಿವಾರಣೆಮಾಡಬೇಕಾದ್ದು ಸರ್ಕಾರದವರ ಕರ್ತವ್ಯ. ಆದುದರಿಂದ ಸರ್ಕಾರದವರು ಯಾವ ಯಾವ ಸ್ಥಳಕ್ಕೆ ಏನೇನು ಅಗತ್ಯವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಬೇಗ ಕೈಗೊಂಡು ಅವರಿಗೆಲ್ಲಾ ಸೂಕ್ತ ಪರಿಹಾರ ನೀಡುವುದು ಅತ್ಯಗತ್ಯ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri M. SRINIVASA NAYAK (Mangalore-1).—Sir, I want to confine myself to the district of South Kanara from which I hail. The district has nearly 6 lakhs acres under cultivation. It has got four times more land under cultivation than in Chickmagalore, Mysore and Hassan and it has got 2 lakh acres more of land than what is being cultivated in Shimoga. Sir, I wish to focuss the attention of the House and the Government on the problems facing my district regarding intensive rice cultivation. In my district there are 5,000 pumpsets that are being used by the farmers and there is scope to increase them to 40,000. There are 21 perennial rivers from which water flows to the sea and the water is wasted. I request the Government to give more pumpsets to this district so that more rice could be grown. In the first crop, traditionally crops are grown by rain water. But even for the first crop there is need for pumpsets. If the farmer is

(SRI M. SRINIVASA NAYAK)

given a pumpset, he can irrigate 1½ acres for 1 HP. He can have additional crop of 15 muras of rice. Per year he can rise with one pumset 3 crops raising 45 muras of rice. With one mura you can feed 100 people and so with 45 muras you can feed 4,500 persons. As regards electric power, I am told that all the other equipment is ready and that only poles are not availale. When the Forest Department was asked, they say that the poles are laying idle without being lifted by the Electricity Department. The reason is that payment has not been made for the poles already taken delivery of. Government should see that they are immediately taken delivery of and supplied to this district so that lines could be laid for with. The Chief Minister has been saying all along that electricity is available in abundance, but it has to be used. The days of slogan are over; we are facing a crisis and unless we grow more food, it is impossible to fight the Chinese and the Pakistanis as well as keep peace within the country. It is all the more necessary in view of the Prime Minister's broadcast to the nation that top priority should be given to the grow more food campaign. As I said earlier here, in my district if we concentrate our attention and give the required electricity to the farmers, I think we can solve the food problem not only of my district but also of the whole State. The Hon'ble Food Minister and the Hon'ble Agriculture Minister have been kind enough to visit my district and they have made a proper study of the district and its potential. The Agriculture Minister has already made avilable to my district 25 power tillers but that is not sufficent. He has made an announcement that he has got 170 power tillers and I would request him to supply another 100 power tillers to our district to help the grow more food campaign.

Another thing is that our farmers have not got proper facilities for soil testing. The Hon'ble Minister was pleased to say that there is a provision to test 30,000 samples per year at Hebbal. If a sample is sent to Hebbal, it takes more than a year for the farmer to get the result. That is why he is unable to use the proper dosage of fertilizer to the field. It is a heartening announcement made by the Hon'ble Minister a soil testing laboratory would be established at Mangalore. But he did not say when it will be set up. Land is already available and if only he makes up his mind to send a portion of the equipment lying idle at Hebbal, the laboratory at Mangalore could be made to work immediately so that people could take advantage of it forthwith.

There is a proposal to have a fertilizer factory at Mangalore. We have been hearing about it for more than a year, but no tangible action in this direction has been taken either by the Central Government or by the State Government. It is quite essential for increased food production as it could be made possible by giving adequate supply of fertilizer. This matter should not be delayed any further. Even the loss of a single day in setting up this factory means loss of

valuable foodcrops. People in this district have taken to progressive farming and a new method of growing paddy has been evolved. It is known as *charkal* method. Under this method, food is grown on hill tops, barren land and in compounds where formerly vegetables were grown. By this method, in one acre of land the farmer could raise 90 muras of paddy in a period of 3 months. So, Government should give more encouragement for taking up this method. It does not require tractors or any other equipment; only one mummati and pick axe is required. Government should give more aid by way of fertilizers. If necessary, Government should give subsidy so that fertilizers can be made available cheaply to them. It used to be said that Mangalore is not a place where fertilizers can be used because it will be washed away by the excessive rain that falls there; but it is now found that it can be used there and by utilising it people have been able to raise more crops. I wish to pointedly bring to the notice of Government that action should be taken immediately to make ample power available to our district. Ten pumpsets per block as sanctioned are insufficient and it should be raised. People are willing to take to pumpsets and so they should be provided with pumpsets to that they can grow food sufficient not only for their purpose but also to meet the entire deficit in the State.

† ಶ್ರೀ ಬಿ. ಭಾಸ್ಕರ ಶೆಟ್ಟಿ (ಕೌಪು).—ಸ್ವಾಮಿ, ಭಾರತದಲ್ಲಿ ಸುಮಾರು 30 ಕೋಟಿ ಜನ ಆಹಾರ ಉತ್ಪಾದನೆ ಮಾಡುವವರಿದ್ದಾರೆ. ಇಲ್ಲಿ ಅತಿ ದೊಡ್ಡ ಕೈಗಾರಿಕೆ ಎಂದರೆ ವ್ಯವಸಾಯ. 18 ವರ್ಷದ ಸ್ವತಂತ್ರ ಭಾರತದಲ್ಲಿ ನಾವು ಈ ವ್ಯವಸಾಯ ರಂಗದಲ್ಲಿ ಪ್ರಗತಿಯನ್ನು ಸಾಧಿಸುವ ಬದಲಾಗಿ ಅಧೋಗತಿಯನ್ನು ಸಾಧಿಸಿದ್ದೇವೆ ಎಂದರೆ ಇದು ಒಂದು ದೊಡ್ಡ ನಾಚಿಗೆ ಗೇಡಿನ ವಿಷಯ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಂತಹ ಒಂದು ಪರಿಸ್ಥಿತಿಯಲ್ಲಿ ನಾವು ನಮ್ಮ ಭಿಕ್ಷಾ ಪಾತ್ರೆಯನ್ನು ಪರದೇಶದಲ್ಲಿ ಕೊಂಡು ಹೋದ ದೆಶೆಯಿಂದಲೇ ಯೂರೋಪಿನ ಅತಿ ಪ್ರಾಮುಖ್ಯ ರಾಷ್ಟ್ರಗಳು ನಮ್ಮನ್ನು ಭಿಕ್ಷುಕರೆಂಬ ಮನೋವೃತ್ತಿಯಿಂದ ಕಂಡು ದೇಶಕ್ಕೆ ಬಂದ ಈ ಗಂಡಾಂತರ ಸಂದರ್ಭದಲ್ಲಿ ನಮ್ಮನ್ನು ಅಸೂಯಾ ದೃಷ್ಟಿಯಿಂದ ಕಾಣುತ್ತಾ ಇರುವುದಕ್ಕೆ ಕಾರಣವಾಗಿದೆ. ನಮ್ಮ ವ್ಯವಸಾಯ ಮಂತ್ರಿಗಳು ಈಗ ಉತ್ತರ ಕೊಡಿಸುತ್ತಾ ಗೊಬ್ಬರದಿಂದಾಗಿ ನಮ್ಮ ದೇಶದಲ್ಲಿ ಬಹಳ ಅನಾನುಕೂಲತೆ ಇದ್ದು ಆಹಾರದ ಸ್ವಾವಲಂಬಿಗಳಾಗಲಿಕ್ಕೆ ತಡೆ ಉಂಟು ಮಾಡಿದೆ ಎಂದು ಹೇಳಿದರು. ಗೊಬ್ಬರದ ಕಥೆ ಹೇಳುವುದು ಇದ್ದರೆ ಈ ಗೊಬ್ಬರದ ವಿಷಯದಲ್ಲಿ ಕೂಡ ದುಷ್ಟ ಶಕ್ತಿಗಳ ಕೈವಾಡ ಇದ್ದು ನಮ್ಮ ದೇಶದಲ್ಲಿ ಗೊಬ್ಬರದ ಕಾರ್ಖಾನೆಗಳು ಬೆಳವಣಿಗೆ ಯಾಗಲಿಕ್ಕೆ ಆಸ್ಪದವಾಗಲಿಲ್ಲ ಎಂದು ಹೇಳುತ್ತೇನೆ. 3 ಲಕ್ಷ ಟನ್ ನೈಟ್ರೋಜನ್ ಗೊಬ್ಬರವನ್ನು ಪರದೇಶದಿಂದ ಆಮದು ಮಾಡಿಕೊಳ್ಳಲಿಕ್ಕೆ ವರ್ಷಕ್ಕೆ 39 ಕೋಟಿ ರೂಪಾಯಿಗಳ ವಿದೇಶೀ ವಿನಿಮಯ ಖರ್ಚು ಮಾಡಬೇಕಾಗುತ್ತದೆ. ಎಂದರೆ 75 ಮಿಲಿಯನ್ ಡಾಲರ್ ಖರ್ಚು ಮಾಡ ಬೇಕಾಗುತ್ತದೆ ಎಂದಂತೆ ಆಯಿತು. ಅದೇ 39 ಕೋಟಿ ರೂಪಾಯಿಗಳ ಗೊಬ್ಬರದ ಯಂತ್ರೋಪ ಕರಣಗಳನ್ನು ತರಿಸಿ ಗೊಬ್ಬರದ ಕಾರ್ಖಾನೆಗಳನ್ನು ಹಿಂದೂಸ್ಥಾನದಲ್ಲಿ ಮಾಡುವುದು ಇದ್ದರೆ ಆದರಿಂದ ವರ್ಷಕ್ಕೆ 6 ಲಕ್ಷ ಟನ್ ನೈಟ್ರೋಜನ್ ಗೊಬ್ಬರವನ್ನು ಉತ್ಪಾದನೆ ಮಾಡಬಹುದು. ಆದರೆ ನಮ್ಮ ಕೇಂದ್ರ ಸರ್ಕಾರದ ಆರ್ಥಿಕ ಖಾತೆಯಲ್ಲಿ ಕೆಲವು ದುಷ್ಟ ವ್ಯಕ್ತಿಗಳ ಕೈವಾಡದಿಂದ ಕೆಲವು ವ್ಯಾಪಾರಿಗಳ ಪ್ರೇರಣೆಯ ಮೇರೆಗೆ ಈ ಗೊಬ್ಬರದ ಯಂತ್ರೋಪಕರಣಗಳನ್ನು ಆಮದು ಮಾಡದೇ ಇದ್ದುದಕ್ಕೆ ಈಗಲೂ ಕೂಡ ಗೊಬ್ಬರವನ್ನು ಪರದೇಶಗಳಿಂದ ಪಡೆಯುವಂತಾಗಿದೆ. ಇನ್ನು ಮೈಸೂರು ರಾಜ್ಯದ ಪರಿಸ್ಥಿತಿಯನ್ನು ನೋಡಿದರೆ ನಾವು ಗೊಬ್ಬರದ ಮಟ್ಟಿಗೆ ತಬ್ಬಲಿ ಆಗಿದ್ದೇವೆ. ಮದರಾಸಿನ ನೈವೇಲಿಯಲ್ಲಿ ಕೊಚ್ಚಿನ್‌ನ ಟ್ರಿವ್ಯಾಂಡ್ರಂನಲ್ಲಿ ಮತ್ತು ಆಂಧ್ರದ ವಿಶಾಖಪಟ್ಟಣದಲ್ಲಿ ವರ್ಷ ಒಂದಕ್ಕೆ ಎರಡು ಲಕ್ಷ ಟನ್ ಉತ್ಪಾದನಾ ಶಕ್ತಿ ಇರುವ ಗೊಬ್ಬರದ ಕಾರ್ಖಾನೆಗಳು ಮೇಲೆ ಬಂದಿರುವಾಗ ಈ ಒಂದು ಸಭೆಯ ಸದಸ್ಯನಾಗಿ ಪ್ರತಿವರ್ಷ ಗವರ್ನರ್ ಅಡ್ರೆಸ್‌ನಲ್ಲೂ ಮತ್ತು ಬಡ್ಜೆಟ್ ಅಧಿವೇಶನದಲ್ಲಿ ಮಂತ್ರಿಗಳ ಉತ್ತರದಲ್ಲೂ ಈ ವರ್ಷದಲ್ಲಿ ಆಗುತ್ತದೆ ಎಂದು ಹೇಳುತ್ತಾ ಇರುವುದನ್ನು ಕೇಳುತ್ತಾ ಇದ್ದೇನೆಯೇ ಹೊರತಾಗಿ ಗೊಬ್ಬರದ ಕಾರ್ಖಾನೆ ಈ ತನಕ ಕಾರ್ಯ ರೂಪಕ್ಕೆ ಬರದೇ ಇದ್ದುದನ್ನು ನೋಡಿದರೆ ನನಗಾದರೂ ವಿಷಾದವೆನಿಸುತ್ತದೆ. ಮಾತ್ರವಲ್ಲದೆ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಮೈಸೂರು ಸರ್ಕಾರ ಈ ಗೊಬ್ಬರದ ಕಾರ್ಖಾನೆಯ ವಿಷಯದಲ್ಲಿ ಅಷ್ಟು ಮುತವರ್ಜಿ ವಹಿಸಿ ಕೆಲಸ ಮಾಡಿಲ್ಲಎಂದು ಹೇಳುತ್ತೇನೆ. ಈ ತನಕ ಮಂಗಳೂರಿನಲ್ಲಿ ಗೊಬ್ಬರದ ಕಾರ್ಖಾನೆಯಾಗುತ್ತದೆ ಎಂದು ನಂಬಿದ್ದೆವು, ಅಲ್ಲಿ ಸ್ಥಳ ಪರೀಕ್ಷೆ ಕೂಡ ನಡೆದಿಲ್ಲ ಎಂದು ನನ್ನ ಗಮನಕ್ಕೆ ಬಂದಿದೆ. ಈ ವಿಷಯ ದಲ್ಲಿ ತೀವ್ರವಾಗಿ ಆಲೋಚನೆ ಮಾಡಬೇಕು. ಈ ಹಿಂದೆ ಈ ವಿಷಯದಲ್ಲಿ ಏನು ಹೇಳಿದ್ದರು ಎಂಬ ಅಂಕಿ ಅಂಶಗಳನ್ನು ಈ ಸಭೆಯ ಮುಂದೆ ಹೇಳಿದ್ದೇನೆ ಆದ ಪಕ್ಷದಲ್ಲಿ ನಾವು ಆಹಾರದಲ್ಲಿ ಸಾಧಿಸಿದಷ್ಟು ಭೂಲೋಕದ ಇನ್ನಾವ ರಾಷ್ಟ್ರಗಳೂ ಸಾಧಿಸಲಿಕ್ಕೆ ಸಾಧ್ಯವಿಲ್ಲ ಎಂದು ಭಾಸವಾಗುತ್ತದೆ. ಆದರೆ ಕಾರ್ಯತಃ ಆಹಾರದ ಮಟ್ಟಿಗೆ ಪರಾವಲಂಬಿಗಳಾಗಿಯೇ ಇದ್ದೇವೆ, ಎಂದರೆ ಇದು ನಾಚಿಕೆ ಗೇಡಿನ ವಿಷಯ. ಈ ವಿಷಯದಲ್ಲಿ ತೀವ್ರವಾಗಿ ಆಲೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ಇನ್ನು ಆಹಾರದ ಪರಿಸ್ಥಿತಿ ತೀವ್ರತಮವಾದದ್ದು, ದೇಶಕ್ಕೆ ಗಂಡಾಂತರ ಬಂದು ಒದಗಿದೆ ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಮಾತ್ರವಲ್ಲದೆ ಆರ್ಥಿಕ ಮಂತ್ರಿಗಳೂ ಕೂಡ ಪ್ರೊಹಿಬಿಷನ್ ವಿಷಯದಲ್ಲಿ ತೀವ್ರವಾಗಿ ಆಲೋಚನೆ ಮಾಡುತ್ತಾ ಇದ್ದೇವೆ ಎಂದು ಅನೇಕ ಸಲ ಈ ಹಿಂದೆ ಹೊರ ಗಡೆಯೂ ಮತ್ತು ಈ ಸಭೆಯಲ್ಲೂ ಕೂಡ ಹೇಳಿದ್ದಾರೆ. ಇಂದು ನಾನಾದರೂ ಹೇಳಬಯಸುತ್ತೇನೆ ಹೆಂಡ ಎಂದರೆ ಅದು ಉತ್ತಮವಾದ ಆಹಾರ ಶಕ್ತಿಯನ್ನು ಒಳಗೊಂಡಿರುವ ಒಂದು ಪಾನೀಯ. ಈ ಹೆಂಡವನ್ನು ತಾವು ಆಹಾರದ ಸಮಸ್ಯೆಯ ನಿವಾರಣೋಪಾಯವನ್ನಾಗಿ ಇಟ್ಟುಕೊಂಡು ಜಾರಿಗೆ ತರಬೇಕು. ಸಾಧಾರಣವಾಗಿ ಒಂದು ಬಾಟ್ಲ್ ಹೆಂಡ ಕುಡಿಯುವವನು 250 ಕಿಲೋಗ್ರಾಂ ಅಕ್ಕಿಯ ಆಹಾರದ ಶಕ್ತಿಯನ್ನು ಹೊಂದುತ್ತಾನೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾತ್ರ ವಲ್ಲದೆ ಶ್ರಮಜೀವಿಗಳು ರಾತ್ರಿ ಹೊತ್ತು ಒಂದು ಬಾಟಲ್ ಹೆಂಡವನ್ನು ಕುಡಿದರೆ ರಾತ್ರಿ ಹೊತ್ತು ಊಟವನ್ನು ಮಾಡದೇ ಮಲಗುತ್ತಾರೆ. ಮಾತ್ರವಲ್ಲದೆ ಬೆಳಗ್ಗೆ ಎದ್ದು ತಮ್ಮ ನಿತ್ಯದ ಕಸುಬಿಗೆ ಹೋಗುತ್ತಾರೆ. ಆದ್ದರಿಂದ ಈ ಹೆಂಡದಿಂದ ಹೆಚ್ಚು ಪ್ರತಿಫಲ ಉಂಟು, ದಿಟ್ಟತನದಿಂದ ಹೆಜ್ಜೆ ಇಟ್ಟು ಇದನ್ನು ಜಾರಿಗೆ ತರಬೇಕು. ಈಗಾಗಲೇ ಆಂಧ್ರ ಮತ್ತು ಮದ್ರಾಸ್ ರಾಜ್ಯಗಳಲ್ಲಿ ಹೆಂಡದ ಕುಡಿಯುವಿಕೆಯನ್ನು ಜಾರಿಗೆ ತಂದಿದ್ದಾರೆ. ಇವನ್ನು ಜಾರಿಗೆ ತರುವ ವಿಚಾರದಲ್ಲಿ ಕೇಂದ್ರ ಸರ್ಕಾರದ ಕಡೆಗೆ ನೋಡಬೇಕಾಗಿಲ್ಲ, ಮಾನ್ಯ ಮುಖ್ಯ ಮಂತ್ರಿಗಳು ದಿಟ್ಟತನದಿಂದ ಆಂಧ್ರ ಮತ್ತು ಇತರ ಸರ್ಕಾರಗಳು ಯಾವ ರೀತಿ ಮುಂದೆ ಹೆಜ್ಜೆಯನ್ನು ಇಟ್ಟಿವೆ ಅದೇ ರೀತಿ ಮುಂದೆ ಹೆಜ್ಜೆ ಯನ್ನಿಟ್ಟು ಈಗಿನ ತುರ್ತು ಪರಿಸ್ಥಿತಿಯಲ್ಲಿ ಈ ಪಾನವನ್ನು ಜಾರಿಗೆ ತರುವ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ಇನ್ನು ಆಹಾರ ಧಾನ್ಯಗಳನ್ನು ಬೆಳೆಸುವ ವಿಷಯದಲ್ಲಿ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಅನೇಕ ಫಲವತ್ತಾದ ಭೂಮಿ ಹಾಗೆಯೇ ಬಂಜರು ಬಿದ್ದಿದೆ, ರಸ್ತೆಗಳಿಗೆ 500 ಎಕರೆಗಳಿಗಿಂತಲೂ ಹೆಚ್ಚು ಜಮೀನು ಸ್ವಾಧೀನಕ್ಕೆ ತೆಗೆದುಕೊಂಡು ಅವು ಹಾಗೆಯೇ ಬಿದ್ದಿವೆ. ಆ ಕೆಲಸಕಾರ್ಯಗಳು ಕಾರ್ಯಗತವಾಗುವುದು ಇನ್ನೂ ತಡ ಇದ್ದರೆ ಯಾರಿಗಾದರೂ ಹಂಗಾಮಿಯಾಗಿ ಆ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಜಿ. ನಾರಾಯಣ ಗೌಡ.—ಅದನ್ನು ಯೋಚನೆ ಮಾಡುತ್ತಾ ಇದ್ದೇವೆ, ಮುಂದೆ ಸಾಗು ವಳಿಗೆ ಕೊಡಬಹುದು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮತ್ತೊಂದು ವಿಷಯವೇನೆಂದರೆ, ಕಪ್ಪು ಹಣವನ್ನು ಸಂಪಾದನೆ ಮಾಡಿದವರು ನಮ್ಮ ಊರಿಗೆ ಬಂದು ಕೆಲವು ಫಲವತ್ತಾದ ಸ್ಥಳಗಳನ್ನು ಕ್ರಯಕ್ಕೆ ತೆಗೆದುಕೊಂಡು ಮನೆ, ಮಠ, ಕಾರ್ಖಾನೆಗಳನ್ನು ಅಲ್ಲಿ ಕಟ್ಟುತ್ತಾ ಇದ್ದಾರೆ. ಆಹಾರ ಧಾನ್ಯಗಳನ್ನು ಬೆಳೆಸತಕ್ಕ ಅಂತಹ ಫಲವತ್ತಾದ ಸ್ಥಳದಲ್ಲಿ ಈ ರೀತಿ ಮನೆ, ಮಠ, ಕಾರ್ಖಾನೆಗಳನ್ನು ಕಟ್ಟದ ಹಾಗೆ ಒಂದು ತುರ್ತು ಕಾನೂನನ್ನು ಈ ಮಾನ್ಯ ಸಭೆಯಲ್ಲಿ ತರಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾತ್ರವಲ್ಲದೆ ಹಣದ ಬೆಳೆ ಏನಿದೆ ಅದನ್ನು ಹೆಚ್ಚಾಗಿ ಬೆಳೆಸುತ್ತಾ ಇದ್ದಾರೆ. ಅಡಿಕೆಯು ನಮಗೆ ಡಾಲರ್ ಸಂಪಾದನೆ ಮಾಡತಕ್ಕ ಬೆಳೆ ಆದರೂ ಕೂಡ ಅದಕ್ಕೆ ಹೆಚ್ಚು ಜನರು ಫಲವತ್ತಾದ ಭೂಮಿ ಯನ್ನು ಇಡುತ್ತಾ ಇರುವುದರಿಂದ ಮುಂದಾದರೂ ಈ ಹಣದ ಬೆಳೆಗಳನ್ನು ಇಡದ ಹಾಗೆ—ನಾವು ಸ್ವಾವಲಂಬಿಗಳಾಗುವವರೆಗೂ—ತುರ್ತು ಒಂದು ಕಾನೂನನ್ನು ತರಬೇಕೆಂದು ಹೇಳುತ್ತೇನೆ.

ನಮ್ಮ ರಾಜ್ಯ ವಿದ್ಯುತ್ ಪಂಪುಗಳಿಂದ ನೀರನ್ನು ಒದಗಿಸಿ ವ್ಯವಸಾಯ ಮಾಡುವುದರಲ್ಲಿ ಬಹಳ ಹಿಂದೆ ಬಿದ್ದಿದೆ. ಮದರಾಸಿನಲ್ಲಿ 3 ಲಕ್ಷ ಪಂಪ್ ಸೆಟ್ಟುಗಳು ಕೆಲಸ ಮಾಡುತ್ತಾ ಇವೆ. ಆಂಧ್ರ ದಲ್ಲಿ 2 ಲಕ್ಷ 27 ಸಾವಿರ ಪಂಪ್ ಸೆಟ್ಟುಗಳು ಕೆಲಸ ಮಾಡುತ್ತಾ ಇವೆ, ಮೈಸೂರು ರಾಜ್ಯದಲ್ಲಿ 38 ಸಾವಿರ ಪಂಪ್ ಸೆಟ್ಟುಗಳು ಮಾತ್ರ ಕೆಲಸ ಮಾಡುತ್ತಾ ಇವೆ. ಆದ್ದರಿಂದಲೇ ನಮ್ಮಲ್ಲಿ ಆಹಾರದ

ಬೆಳೆ ಕುಂಠಿತವಾಗಲು ಅದೂ ಒಂದು ಮುಖ್ಯ ಕಾರಣವಾಗಿದೆ ಎಂದು ನಾನು ಹೇಳಬಯಸುತ್ತೇನೆ. ಸಾರ್ವಜನಿಕರು 3—4 ವರ್ಷಗಳಿಂದ ಪಂಪುಸೆಟ್ಟುಗಳನ್ನು ತೆಗೆದುಕೊಂಡು ಅದಕ್ಕೆ ಬೇಕಾದ ಷೆಡ್ಡುಗಳನ್ನು ಕಟ್ಟಿದ್ದಾರೆ. ಆದರೆ ಅವಕ್ಕೆ ವಿದ್ಯುಚ್ಛಕ್ತಿಯನ್ನು ಕೊಡದೇ ಇರತಕ್ಕ ಅನೇಕ ಸಂದರ್ಭಗಳು ಇವೆ. ಈ ವಿಷಯದಲ್ಲಿ ತುರ್ತಾಗಿ ಆಲೋಚನೆ ಮಾಡಿ ತಮಗೆ ಯಾವ ಸಲಕರಣೆ ಸಿಕ್ಕುವುದಿಲ್ಲ ಅದನ್ನು ಪರದೇಶದಿಂದ ಆಗಲಿ ಇಲ್ಲವೇ ನಮ್ಮ ದೇಶದಲ್ಲಿ ಸಿಕ್ಕುವುದಿದ್ದರೆ ನಮ್ಮ ದೇಶದಿಂದಲೇ ಆಗಲಿ ತರಿಸಿ ಆದಷ್ಟು ತುರ್ತಾಗಿ ವ್ಯವಸ್ಥೆ ಮಾಡಿ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ (ತುಮಕೂರು).—ಮಾನ್ಯ ಸಭಾಪತಿಯವರೆ, ಈ ಸಭೆಯ ಮುಂದಿರುವ ನಿರ್ಣಯವನ್ನು ಪುಷ್ಟೀಕರಿಸುತ್ತಾ ಕೆಲವು ಸಲಹೆಗಳನ್ನು ಸೂಚಿಸಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಅದರಲ್ಲೂ ಬಹಳ ಮುಖ್ಯವಾಗಿ ಮಳೆಯನ್ನೇ ಆಶ್ರಯಿಸಿಕೊಂಡಿರುವ ಕೆಲವು ಜಿಲ್ಲೆಗಳಲ್ಲಿ ಆಗಾಗ್ಗೆ ತಲೆದೋರುವ ಅಭಾವ ಪರಿಸ್ಥಿತಿಯನ್ನು ತಡೆಗಟ್ಟಲು ಮತ್ತು ಆಹಾರದ ಉತ್ಪತ್ತಿಯನ್ನು ಹೆಚ್ಚಿಸಲು ಸರಕಾರದವರು ಇದುವರೆಗೇನು ಕಾರ್ಯಕ್ರಮ ಕೈಗೊಂಡಿದ್ದಾರೆ, ಅದರ ಪ್ರತಿಫಲ ಏನು ಎಂಬುದನ್ನು ನೋಟ ಮುಂದೇನು ಕಾರ್ಯಕ್ರಮ ಕೈಗೊಳ್ಳಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ. ವ್ಯವಸಾಯವೇ ಮುಖ್ಯ ಕಸಬಾಗಿರುವ ನಮ್ಮ ರಾಜ್ಯದಲ್ಲಿ ಆಹಾರದ ಅಭಾವವಿರುವುದಕ್ಕೆ ಕಾರಣವೇನು, ಬೇರೆ ರಾಜ್ಯಗಳನ್ನು ಮತ್ತು ರಾಷ್ಟ್ರಗಳನ್ನು ಆಹಾರಕ್ಕಾಗಿ ಎದುರು ನೋಡಬೇಕಾಗಿದೆ. ನಮ್ಮಲ್ಲಿ ಸಾಕಾದಷ್ಟು ವ್ಯವಸಾಯದ ಭೂಮಿ ಇಲ್ಲವೆ, ರೈತರಿಲ್ಲವೇ, ಅಥವಾ ಸಾಕಾದಷ್ಟು ನೀರಿನ ಸೌಲಭ್ಯವಿಲ್ಲವೆ ಅಥವಾ ತಜ್ಞರ ಅಭಾವವಿದೆಯೇ ಎಂದು ಯೋಚನೆ ಮಾಡಬೇಕಾಗಿದೆ. ರೈತರಲ್ಲಿ ಸಾಕಾದಷ್ಟು ಶಕ್ತಿ ಮತ್ತು ಉತ್ಸಾಹವಿದೆ. ಇದಕ್ಕೆ ಒಂದೇ ಒಂದು ಉದಾಹರಣೆ ಸರಕಾರದವರು ನೀರಾವರಿ ಬಾವಿಗಳಿಗೆ ಸಾಲ ಸೋಲ ಕೊಡುವಾಗ ರೈತರಿಂದ ಬಾವಿಗಳಿಗಾಗಿ ಸಾಲಕ್ಕೆ ಅನೇಕ ಅರ್ಜಿಗಳು ಬಂದಿವೆ. ಇಂಥ ರೈತರಿಗೆ ಹೆಚ್ಚು ಹೆಚ್ಚಾಗಿ ಬೆಳೆಯಲು ಸರಕಾರದವರು ಸಕಾಲದಲ್ಲಿ ಸಹಾಯ ನೀಡಬೇಕು, ನೀರನ್ನೊದಗಿಸಬೇಕು, ಅದಾದಮೇಲೆ ಒಳ್ಳೆಯ ತಳಿ, ಬೀಜ, ಗೊಬ್ಬರ, ವ್ಯವಸಾಯದ ಉಪಕರಣಗಳು, ಸ್ಪ್ರೇಯರ್ ಮತ್ತು ಡಸ್ಟರ್ ಮುಂತಾದುವನ್ನು ಸೇಕಡ 50 ರಷ್ಟು ಸಬ್ಸಿಡಿ ಮೇಲೆ ಕೊಡುತ್ತಿದ್ದರು, ಈಗ ಅದನ್ನು ಸರಕಾರ ಸೇಕಡ 25 ಭಾಗ ಮತ್ತು ರೈತ ಸೇಕಡ 75 ಭಾಗ ವಹಿಸಿಕೊಂಡು ಪಡೆಯಬೇಕೆಂದು ಹೇಳುವುದು ಸರಿಯಲ್ಲ. ಹಿಂದಿದ್ದಂತೆ ಸೇಕಡ 50ರಷ್ಟು ಸಬ್ಸಿಡಿ ಪ್ರಕಾರ ರೈತರಿಗೆ ಒದಗಿಸಬೇಕು.

ಇನ್ನು ವಿದ್ಯುಚ್ಛಕ್ತಿ. ಅನೇಕ ರೈತರು ಪಂಪುಸೆಟ್ಟು ತೆಗೆದುಕೊಂಡು ಒಂದೆರಡು ಮೈಲಿ ದೂರದಲ್ಲಿ ವಿದ್ಯುಚ್ಛಕ್ತಿ ಇರುವಾಗ ಅದನ್ನು ಕೊಡದಿದ್ದರೆ ರೈತರ ಕಷ್ಟವೆಷ್ಟೆಂಬುದನ್ನು ಯೋಚನೆ ಮಾಡಬೇಕು. ಹಾಗೆ ಹತ್ತಿರದಲ್ಲಿ ವಿದ್ಯುಚ್ಛಕ್ತಿ ಇರುವ ಸಂಧರ್ಭದಲ್ಲಿ ಅದನ್ನು ಒದಗಿಸಬೇಕು.

ಬಾವಿ ತೆಗೆಯಲು ಮೊದಲನೆಯ ಕಂತನ್ನು ಕೊಟ್ಟು ಈಗ ಎರಡನೆಯ ಕಂತನ್ನು ಕೊಡಬಾರದೆಂದು ಆದೇಶ ಕೊಟ್ಟಿರುವುದಾಗಿ ತಿಳಿದು ಬಂದಿದೆ. ಯಾವ ಕೆಲಸವನ್ನೇ ಆಗಲಿ ನಾಳೆ ಮಾಡೋಣ ಎಂದು ಹೇಳಬಹುದು, ಆದರೆ ಬಾವಿ ಕೆಲಸ ಹಾಗಲ್ಲ. ಅರ್ಧ ಕೆಲಸ ಮಾಡಿ ಹಾಗೆಯೇ ಬಿಟ್ಟರೆ ದಡ ಕುಸಿಯುತ್ತದೆ. ಒಟ್ಟು 3 ಸಾವಿರ ರೂಪಾಯಿ ಸಾಲದಲ್ಲಿ ಮೊದಲು ಒಂದೂವರೆ ಸಾವಿರ ಕೊಡುತ್ತಾರೆ, ಕೊಡುವುದು ಸಾಲದೆ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಆದುದರಿಂದ ಅರ್ಧ ಕೆಲಸ ಮಾಡಿರುವವರಿಗೆ ಎರಡನೆಯ ಕಂತನ್ನು ಸರಕಾರ ಅವಶ್ಯಕವಾಗಿ ಕೊಡಲೇಬೇಕು.

ಸಣ್ಣ ನೀರಾವರಿ ವಿಚಾರ ಹೇಳಬೇಕೆಂದರೆ ಬರೀ ಪ್ಲಾನು ಮತ್ತು ಅಂದಾಜು ಮಾಡುವುದರಲ್ಲೇ ಬಹಳ ಕಾಲ ಕಳೆದು ಹಣ ಸಹ ಖರ್ಚಾಗುತ್ತದೆ. ಮೂರು ವರ್ಷದ ಮಾಸ್ಟರ್ ಪ್ಲಾನ್ ಮಾಡಿ ಹೀಗಾಗಿದೆ. ಸಣ್ಣ ನೀರಾವರಿ ಕೆಲಸಗಳು ಬಹಳ ಅವಶ್ಯಕವಾಗಿರುವುದರಿಂದ ಹಿಂದಿನಂತೆ ಹೆಚ್ಚು ಕಾಲ ಮತ್ತು ಹಣವನ್ನು ಮೊದಲೇ ವ್ಯಯಮಾಡದೆ ಜಾಗ್ರತೆ ಕೆಲಸ ನಡೆಯುವ ಹಾಗೆ ಸರಕಾರ ಹೆಚ್ಚಿನ ಉತ್ತೇಜನ ಕೊಡಬೇಕು. ಹೊಸ ಕೆರೆ ಅಥವ ಅಣೆ ಕಟ್ಟಿದಾಗ ನೀರು ಜಾಗ್ರತೆ ಸಲೀಸಾಗ ದೊರೆಯುತ್ತಿಲ್ಲ, ಅದನ್ನು ಗಮನಿಸಿ ನಾಲೆ, ತೂಬು ಮುಂತಾದ್ದನ್ನು ಮಾಡಿ ಬೇಗ ಸಾಕಾದಷ್ಟು ನೀರು ದೊರಕುವಂತೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಜೋಳ ಬೆಳೆಯುವ ಜಮೀನಿಗೆ ಲೆವಿ ಹಾಕಿದ್ದಾರೆ. ಆದರೆ ಅಲ್ಲಿ ತಿನ್ನುವ ಜೋಳ ಬೆಳೆಯುವುದಿಲ್ಲ, ದನದ ಮೇವಿಗೆ ಬೇಕಾದ ಜೋಳ ಬೆಳೆಯುತ್ತಾರೆ. ಆದುದರಿಂದ ಅಂಥ ಕಡೆ ಕೆಲವು ಭಾಗದಲ್ಲಿ ಹಾಕಿರುವ ಲೆವಿ ವಿಚಾರವನ್ನು ಪರಿಶೀಲಿಸಿ ದನದ ಮೇವಿಗೆ ಹಾಕಿರುವ ಜೋಳಕ್ಕೆ ಲೆವಿ ಹಾಕಬಾರದೆಂದು ಸಲಹೆ ಮಾಡುತ್ತೇನೆ.

(ಶ್ರೀಮತಿ ಜಿ. ಸಿ. ಭಾಗೀರಥಮ್ಮ)

ತುಮಕೂರು ಜಿಲ್ಲೆಯಲ್ಲಿ ಎರಡು ಮೂರು ತಿಂಗಳಿಂದ ಮಳೆ ಇಲ್ಲದೆ ಪೈರು ಒಣಗಿಹೋಗಿದೆ. ರೈತರಿಗೆ ಕಂದಾಯ ಕೊಡಲು ಶಕ್ತಿಯಿಲ್ಲ. ಆದುದರಿಂದ ಸರಕಾರದವರು ಪರಿಹಾರ ಕಾಮಗಾರಿಗಳನ್ನು ಅಲ್ಲಿ ಕೈಗೊಳ್ಳಬೇಕು ಮತ್ತು ಕಂದಾಯ ಮಾಫಿ ಮಾಡಬೇಕೆಂದು ಹೇಳಿ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂ: ಸುತ್ತೇನೆ.

ಶ್ರೀ ಎಸ್. ನಂಜೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ, ಸಭಾಧ್ಯಕ್ಷರೇ, ಆಹಾರ ಹೆಚ್ಚುವರಿಗೆ ಸಂಬಂಧಪಟ್ಟ ನಿರ್ಣಯವನ್ನು ಮಳೆಯ ಅಭಾವವಿರುವ ಇಂಥ ಕಾಲದಲ್ಲಿ ಮಂಡಿಸಿ, ಅದರ ವಿಚಾರದಲ್ಲಿ ಮಾತನಾಡಿ ದೇಶದ ವಿದ್ಯಮಾನವನ್ನು ಸರಕಾರಕ್ಕೆ ತಿಳಿಸಲು ನಮಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಶ್ರೀಮಾನ್ ಸಿದ್ದಯ್ಯನವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ.

ಸ್ವಾಮಿ, ಈಗ ನಮ್ಮಲ್ಲಿ ಆಹಾರ ಕಡಮೆ ಇದೆ, ಹೆಚ್ಚಾಗಿ ಬೆಳೆಯಬೇಕು, ಇರುವ ಆಹಾರವನ್ನು ಸರಿಯಾಗಿ ಉಪಯೋಗಿಸಬೇಕು ಎಂಬ ವಿಷಯದಲ್ಲಿ ಒಂದೆರಡು ಸಲಹೆಗಳನ್ನು ಸರಕಾರದ ಮುಂದೆ ಇಡಲಿಚ್ಛಿಸುತ್ತೇನೆ. ಆಹಾರದ ಇಲಾಖೆ ಶೇಕಡ 50ರಷ್ಟು ಪಾಲಿಷ್ ಕೊಟ್ಟರೆ ಅದರಿಂದ ಬಹಳ ವೇಸ್ಟ್ ಆಗುತ್ತದೆ, ಅನ್‌ಪಾಲಿಷ್ಡ್ ಅಕ್ಕಿಯನ್ನೊದಗಿಸಿದರೆ ಕ್ವಿಂಟಾಲಿಗೆ 7-8 ಕೆ.ಜಿ. ಹೆಚ್ಚಾಗಿ ಅಕ್ಕಿ ದೊರೆಯುತ್ತದೆ. ಆದುದರಿಂದ ಆಹಾರದ ಅಭಾವ ಕಳೆಯುವವರೆಗೆ ಪಾಲಿಷ್ ಇಲ್ಲದ ಅಕ್ಕಿಯನ್ನೇ ಒದಗಿಸಿದರೆ ಸಾವಿರಾರು ಕ್ವಿಂಟಾಲ್ ದಾಸ್ತಾನನ್ನು ಹೆಚ್ಚಿಸಲು ಸಾಧ್ಯವಿದೆ.

ಹಲ್ಲರ್‌ಗಳಿಗೆ ಭತ್ತ ಬಿಡುವುದನ್ನು ಆದಷ್ಟು ನಿರ್ಬಂಧ ಮಾಡಿ ಹಲ್ಲರ್‌ನಿಂದ ಅಕ್ಕಿ ಮಾಡಿಸುವುದನ್ನು ನಿಷೇಧಿಸಬೇಕು. ಅಲ್ಲದೆ ಈಗ ರೈತನು ಕೊಡಬೇಕಾದ ಬತ್ತಕ್ಕೆ ದರ ನಿಗದಿಮಾಡಲಾಗಿದೆ. ಬತ್ತ ಓಪನ್ ಮಾರ್ಕೆಟ್ಟಿನಲ್ಲೂ ಮತ್ತು ಕಂಟ್ರೋಲ್ ರೇಟಿನಲ್ಲೂ ದೊರೆಯುತ್ತದೆ, ಆದರೆ ಆ ಎರಡು ಸಂದರ್ಭಗಳಲ್ಲೂ ದರದಲ್ಲಿ ವ್ಯತ್ಯಾಸವಿದೆ. ಕಂಟ್ರೋಲಿನಲ್ಲಿ ದೊರೆಯುವುದಕ್ಕಿಂತ ಹೊರಗೆ ದೊರೆಯುವುದರ ಬೆಲೆ ಶೇಕಡ 50ರಷ್ಟು ಜಾಸ್ತಿ ಇದೆ. ಇದು ಸರಿಯಲ್ಲ. ಆದುದರಿಂದ ಓಪನ್ ಮಾರ್ಕೆಟ್ಟಿನಲ್ಲಿ ದೊರೆಯುವುದಕ್ಕೂ ದರ ನಿಗದಿ ಮಾಡಿ ರೈತರಿಗೆ ಸರಿಯಾದ ಬೆಲೆ ದೊರೆಯುವ ಹಾಗೆ ಮಾಡಿ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಒಂದು ಎಕರೆ ಕಬ್ಬು ಬೆಳೆದರೆ 1,500 ರೂಪಾಯಿನಿಂದ 2,000 ರೂಪಾಯಿಗಳವರೆಗೆ ಉತ್ಪತ್ತಿ ಇದೆ. ಅದೇ ಭೂಮಿಯಲ್ಲಿ ಬತ್ತ ಬೆಳೆದರೆ 400 ರೂಪಾಯಿನಿಂದ 500 ರೂಪಾಯಿಗಳವರೆಗೆ ಮಾತ್ರ ಉತ್ಪತ್ತಿ ಇದೆ. ಆದುದರಿಂದ ರೈತರು ವಾಣಿಜ್ಯ ಬೆಳೆ ತೆಗೆಯಲು ಮನಸ್ಸು ಮಾಡುತ್ತಾರೆ, ಆಹಾರ ಪದಾರ್ಥಗಳನ್ನು ಬೆಳೆಯಲು ಗಮನ ಕೊಡುವುದಿಲ್ಲ. ಇದನ್ನು ತಪ್ಪಿಸಲು ರೈತರಿಗೆ ಸಾಕಾದಷ್ಟು ಬೆಲೆ ಕೊಟ್ಟು ಅವರು ಖರ್ಚು ಮಾಡಿದ್ದಕ್ಕೆ ತಕ್ಕ ಉತ್ಪತ್ತಿ ಬರುವಂತೆ ಮಾಡಿ ತನ್ಮೂಲಕ ಹೆಚ್ಚು ಆಹಾರ ಬೆಳೆಯಲು ಅವಕಾಶ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಅಲ್ಲದೆ ಈಗ ನಮ್ಮಲ್ಲಿ ತುರ್ತು ಪರಿಸ್ಥಿತಿ ಇದೆ. ಹಣದ ಅಭಾವವಿದೆ, ಇದನ್ನು ಒಪ್ಪುತ್ತೇನೆ. ಆದರೆ ಈ ಅಭಾವ ನೀಗಬೇಕಾದರೆ ಎನ್.ಇ.ಎಸ್. ಮತ್ತು ಸಾಕಷ್ಟು ಕೆಲಸವಿಲ್ಲದ ಇಲಾಖೆಗಳವರಿಗೆ ಸೋಮಾರಿಗಳಿಗೆ ಅವಕಾಶ ಕೊಡದೆ ಅವುಗಳಿಗಾಗಿ ಉಪಯೋಗಿಸುವ ಹಣವನ್ನೆಲ್ಲಾ ಪಬ್ಲಿಕ್ ವರ್ಕ್ಸ್ ಇಲಾಖೆಯ ಬಿಲ್ಡಿಂಗ್ ವಗೈರೆ ಕೆಲಸ ನಿಲ್ಲಿಸಿ ನೀರಾವರಿ ಕೆಲಸಗಳಿಗೆ ಉಪಯೋಗಿಸಿ ತಾತ್ಕಾಲಿಕವಾಗಿ ಸಣ್ಣ ನೀರಾವರಿ ಕೆಲಸಗಳಿಗೆ ಹಣವನ್ನು ಒದಗಿಸಿ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ. ಮಳೆ ಇಲ್ಲದೆ ಕೆಲವು ಕಡೆ ಜನ ತೊಂದರೆಯಲ್ಲಿದ್ದಾರೆ. ಅಲ್ಲಲ್ಲಿ ರಿಲೀಫ್ ಕಾಮಗಾರಿಗಳನ್ನು ಷುರು ಮಾಡಿದ್ದಾರೆ. ರಸ್ತೆ ಕೆಲಸಕ್ಕೆ ಸ್ವಲ್ಪ ದುಡ್ಡು ಒಂದು ಸಾವಿರ ರೂಪಾಯಿ, ಗೋಕಟ್ಟೆಯ ಕೆಲಸಕ್ಕೆ ಹೀಗೆಲ್ಲ ಹಣವನ್ನು ವ್ಯಯ ಮಾಡದೆ ಆ ಹಣವನ್ನೆಲ್ಲ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಕೊಟ್ಟು ಖಾಯಂ ನೀರಾವರಿಯಾಗತಕ್ಕ ಕೆಲಸಗಳನ್ನು ತೆಗೆದುಕೊಳ್ಳಬೇಕು. ಆರು ಸಾವಿರ, ಎಂಟು ಸಾವಿರ, ಹತ್ತು ಸಾವಿರ ರೂಪಾಯಿಗಳ ಅಂದಾಜಿನ ಕೆಲಸಗಳು ಬೇಕಾದಷ್ಟು ಇಲಾಖೆಯವರ ಹತ್ತಿರ ಇವೆ. ಆ ಕೆಲಸಗಳನ್ನು ಇಲಾಖೆಯ ಮುಖಾಂತರ ಪೀಸ್‌ವರ್ಕ್ ಮೇಲೆ ಮಾಡಿಸಿ ಜನರಿಗೆ ಕೂಲಿ ಒದಗಿಸುವುದಕ್ಕೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

10-30 A.M.

ನೀರಾವರಿ ವಿಷಯದಲ್ಲಿ ಕೆಲವು ಮುಖ್ಯವಾದ ಸಲಹೆಗಳಿವೆ. ನಾನು ಕೇಳಿದ್ದ ಒಂದು ಪ್ರಶ್ನೆಗೆ 11-10-65ರಲ್ಲಿ ಉತ್ತರ ಕೊಡುತ್ತ ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಒಂದು ಕ್ಯೂಸೆಕ್ ನೀರಿನಿಂದ 50 ಎಕರೆಗೆ ನೀರಾವರಿಯಾಗುತ್ತದೆ ಅಹೇ ಮಂದಗೆರೆ, ಹೇಮಗಿರಿ ಮತ್ತು ಶ್ರೀರಾಮ

ದೇವರ ನಾಲೆಗಳಲ್ಲಿ ಬರುವ ನೀರಿನಿಂದ ಒಂದು ಕ್ಯೂಸೆಕ್‌ಗೆ 20-22 ಎಕರೆ ನೀರಾವರಿಯಾಗುತ್ತದೆ ಎಂದು ಹೇಳಿದರು. ಅಣೆಕಟ್ಟುಗಳಿಗೆ ಹೆಚ್ಚು ದುಡ್ಡು ಖರ್ಚು ಮಾಡದೆ ಮಣ್ಣು ಕೆಲಸ ಅಂದರೆ ನಾಲೆಗಳ ಕೆಲಸ ಮಾತ್ರ ಮಾಡುವುದರಿಂದ ಇನ್ನೂ ಶೇಕಡ 50 ತರಿ ಭಾಗ ಜಾಸ್ತಿ ಮಾಡುವುದಕ್ಕೆ ಅವಕಾಶವಿದೆ. ಇತ್ತ ಕಡೆ ಹೆಚ್ಚಿನ ನಿಗಾ ತೆಗೆದುಕೊಂಡು ರಿಲೀಫ್ ವರ್ಕ್‌ನಲ್ಲಿ ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖಾಂತರ ಶಾಶ್ವತವಾದ ಪರಿಹಾರ ಕ್ರಮಗಳನ್ನು ಕಲ್ಪಿಸುವುದಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಲಿಫ್ಟ್ ಇರಿಗೇಷನ್ ಸ್ಕೀಂ ವಿಚಾರ ಹೇಳುವುದಾದರೆ ಒಂದು ಎಚ್.ಪಿ. ವಿದ್ಯುತ್ತಿಗೆ 600 ರೂಪಾಯಿ ಮಾತ್ರ ಖರ್ಚಾಗಬೇಕು ಎಂದು ಮಾಡಿದ್ದಾರೆ. ಐದು ಅಶ್ವ ಶಕ್ತಿಯ ಒಂದು ಪಂಪ್‌ಸೆಟ್ ಹಾಕಬೇಕಾದರೆ ಮೂರು ಸಾವಿರ ರೂಪಾಯಿ ಖರ್ಚಾದರೆ ಅದು ವರ್ಕಬಲ್ ಎಂದು ಅಂಥವರಿಗೆ ಮಾತ್ರ ವಿದ್ಯುತ್ತನ್ನು ಕೊಡುತ್ತಾರೆ. ಡೆವಲಪ್‌ಮೆಂಟ್ ಲೈನ್‌ನಿಂದ ಬೇರೆ ಲೈನ್ ಹಾಕಲು ಟ್ರಾನ್ಸ್‌ಫಾರ್ಮರ್ ಹಾಕಬೇಕು. ಅದರ ಬೆಲೆ 3,600 ರೂಪಾಯಿ ಇದೆ. ಅಲ್ಲದೆ ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಡೆವಲಪ್‌ಮೆಂಟ್ ಲೈನ್ ಇಲ್ಲ. ಇದರಿಂದ ಇಲಾಖೆಯವರು ಗೊತ್ತು ಮಾಡಿರುವ 3,000 ರೂಪಾಯಿಗಳಲ್ಲಿ ಒಂದು ಪಂಪ್‌ಸೆಟ್ಟಿಗೆ ವಿದ್ಯುತ್ತನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಡೆವಲಪ್‌ಮೆಂಟ್ ಲೈನ್ ಹಾಕುವುದು, ಟ್ರಾನ್ಸ್‌ಫಾರ್ಮರ್ ಮತ್ತು ಡಿಸ್ಟ್ರಿಬ್ಯೂಷನ್ ಲೈನ್ ಹಾಕುವುದು ಎಲ್ಲವನ್ನೂ ಸೇರಿಸಿದರೆ ಹೇಗೆ ಮೂರು ಸಾವಿರ ರೂಪಾಯಿನಲ್ಲಿ ಲೈನ್ ಹಾಕುವುದಕ್ಕೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕು. ಇದರಿಂದ ಡೆವಲಪ್‌ಮೆಂಟ್ ಲೈನ್ ಇಲ್ಲದೆ ಇರುವ ಕಡೆ ಪಂಪ್‌ಸೆಟ್‌ಗಳನ್ನು ಹಾಕುವುದಕ್ಕಾಗುವುದಿಲ್ಲ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಇದರ ಕಡೆ ಹೆಚ್ಚಿನ ಗಮನ ತೆಗೆದುಕೊಂಡು ಹಿಂದುಳಿದ ಪ್ರದೇಶಗಳಲ್ಲಿ ಡೆವಲಪ್‌ಮೆಂಟ್ ಲೈನನ್ನು ಸರ್ಕಾರದ ಖರ್ಚಿನಲ್ಲಿ ಹಾಕಿದರೆ ಆಗ ಟ್ರಾನ್ಸ್‌ಫಾರ್ಮರ್ ಹಾಕಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ತನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಬಾವಿ ತೆಗೆಯಬೇಕಾದರೆ ಎಲ್ಲಿ ನೀರು ಸಿಕ್ಕುತ್ತದೆ, ಎಲ್ಲಿ ತೆಗೆದರೆ ಅನುಕೂಲವಾಗುತ್ತದೆ ಎನ್ನುವುದರ ಅನುಭವ ರೈತನಿಗೆ ಇರುವುದಿಲ್ಲ. ಆದುದರಿಂದ ಇಲಾಖೆಯವರು ಇಷ್ಟು ಆಳದಲ್ಲಿ ನೀರು ಸಿಕ್ಕುತ್ತದೆ, ಎಂಥ ಕಡೆ ಸಿಕ್ಕುತ್ತದೆ ಎನ್ನುವ ಸಲಹೆ ಕೊಡಲು ವ್ಯವಸ್ಥೆ ಮಾಡಿ, ಬಾವಿ ತೆಗೆಯುವುದಕ್ಕೆ ದುಡ್ಡು ಕೊಡಬೇಕು. ಇಲ್ಲದೆ ಹೋದರೆ ಮೂರು ಸಾವಿರ ರೂಪಾಯಿ ಖರ್ಚು ಮಾಡಿ ಒಂದು ತಿಟ್ಟಿನ ಮೇಲೆ ಅನುಭವವಿಲ್ಲದವರು ಬಾವಿಯನ್ನು ತೆಗೆದರೆ ಲುಕ್ಸಾನಾಗುವ ಸಂದರ್ಭ ಬರುತ್ತದೆ.

ಅಧ್ಯಕ್ಷರು.—ಪ್ರತಿಯೊಂದು ಜಿಲ್ಲೆಯಲ್ಲಿಯೂ 'ವಾಟರ್ ಮ್ಯಾನ್' ಎಂದು ನೇಮಿಸುವ ಯೋಜನೆ ಸರ್ಕಾರದಲ್ಲಿ ತಯಾರಾಗುತ್ತಿದೆ.

ಶ್ರೀ ಎನ್. ನಂಜೇಗೌಡ.—ಹಾಗೆ ಮಾಡುವುದಾದರೆ ಬಹಳ ಸಂತೋಷ ನೀರು ವಸತಿ ಇರುವ ಕಡೆ ಡೆವಲಪ್‌ಮೆಂಟ್ ಲೈನ್ ಹಾಕಿ ಪಂಪ್‌ಸೆಟ್ ಹಾಕುವುದಾದರೆ ಹೆಚ್ಚಿನ ಆಹಾರವನ್ನು ಬೆಳೆಯುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಆಹಾರದ ಉತ್ಪತ್ತಿ ಕಡಮೆ ಯಾಗುವುದಕ್ಕೆ, ಆಹಾರದ ಬೆಳವಣಿಗೆ ನಮ್ಮಲ್ಲಿ ಜಾಸ್ತಿಯಾಗದೆ ಇರುವುದಕ್ಕೆ ಕಾರಣ ಸರ್ಕಾರದ ಆಡಳಿತದ ವಿಫಲತೆ ಎಂದು ಧಾರಾಳವಾಗಿ ಹೇಳಬಹುದು. ಕೇಂದ್ರ ಸರ್ಕಾರದಲ್ಲಿ ಇದರ ಪ್ರಭಾವ ಬಹಳ ಕಡಮೆಯಾಗಿದೆ. ನಮ್ಮ ರಾಜ್ಯಕ್ಕೆ ಬರಬೇಕಾದಂಥ ಗೊಬ್ಬರದ ಕಾರ್ಖಾನೆ ಏಕೆ ಬರಲಿಲ್ಲ? ಅದು ತಕ್ಷಣ ನಮ್ಮ ರಾಜ್ಯಕ್ಕೆ ಬರಬೇಕು. ಅದನ್ನು ತರುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ ರಾಜೀನಾಮೆ ಕೊಟ್ಟು ಮಂತ್ರಿಗಳು ಮನೆಗೆ ಹೋಗಬೇಕು.

ಅಧ್ಯಕ್ಷರು.—ಅವರು ರಾಜೀನಾಮೆ ಕೊಟ್ಟರೆ ಆಹಾರ ಜಾಸ್ತಿಯಾಗುತ್ತದೆಯೇ ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಗೊಬ್ಬರದ ಕಾರ್ಖಾನೆ ನಮ್ಮ ರಾಜ್ಯಕ್ಕೆ ತರಬೇಕು.

ಶ್ರೀ ಬಿ. ಡಿ. ಜತ್ತಿ (ಆಹಾರ ಶಾಖೆಯ ಮಂತ್ರಿಗಳು).—ರಾಜೀನಾಮೆ ಕೊಟ್ಟರೆ ಹೆಚ್ಚು ಆಹಾರವನ್ನು ಬೆಳೆಸುವುದಾದರೆ ಇವತ್ತೇ ರಾಜೀನಾಮೆಯನ್ನು ಕೊಡುತ್ತೇನೆ.

Mr. SPEAKER.—I am not prepared to accept the resignation.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಹಾರದ ವಿತರಣೆಯ ವಿಷಯದಲ್ಲಿ ಏನಾಗಿದೆ ಎಂದರೆ ರೈತನಿಗೆ ಬೇಕಾದ ಸೌಲಭ್ಯವನ್ನು ಕೊಟ್ಟಿಲ್ಲ. ಯಾವುದೋ ಒಂದು ದರವನ್ನು ಗೊತ್ತು ಮಾಡಿದರೆ ಆ ದರದಲ್ಲಿ ಕೊಂಡುಕೊಳ್ಳುವವರು ಯಾರು, ಮಾರುವವರು ಯಾರು! ಸೊಸೈಟಿಯವರು ಕೊಳ್ಳುತ್ತಾರೆ,

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಮಾರುತ್ತಾರೆ ಎಂದು ಹೇಳಬಹುದು. ನಮ್ಮ ಜಿಲ್ಲೆಯಲ್ಲಿ ಸುಗ್ಗಿಯ ಕಾಲದಲ್ಲಿ 41-42 ರೂಪಾಯಿಗಳಿಗೆ ಒಂದು ಕ್ವಿಂಟಾಲ್ ಬತ್ತ ಸಿಕ್ಕುತ್ತಿತ್ತು ಆಗ ಸರ್ಕಾರದವರಾಗಲೀ, ಸೊಸೈಟಿಯವರಾಗಲೀ ತೆಗೆದುಕೊಳ್ಳಲಿಲ್ಲ. ಕೆಲವೇ ದಿವಸಗಳಲ್ಲಿ ಪುಣ್ಯಾತ್ಮರು ಹೊರಗಡೆಯಿಂದ ಅಂದರೆ ಮಂಗಳೂರು ಮತ್ತು ಬೆಳಗಾಂ ಕಡೆಯಿಂದ ಬಂದು ಹೊಸ ನೋಟುಗಳನ್ನು ಕೊಟ್ಟು— ಎಲ್ಲಿಂದ ತಂದರೋ ಗೊತ್ತಿಲ್ಲ, ಕೊಯಮತ್ತೂರು ನೋಟು ಎಂದು ಹೇಳುತ್ತಾರೆ— ಎಷ್ಟು ಕ್ವಿಂಟಾಲ್ ನಿಮ್ಮಲ್ಲಿದೆ, ಅದನ್ನು ಲಾರಿಗೆ ಹಾಕಿ ಎಂದು ತೂಕ ಸಹಿತ ಮಾಡದೆ 80 ಮೂಟೆ 90ಮೂಟೆ ಪ್ರಕಾರ ತೆಗೆದುಕೊಂಡು ಲಾರಿಗಳಲ್ಲಿ ತುಂಬಿಕೊಂಡು ಹೋದರು. ಹೀಗಾಗಿ ಬತ್ತದ ಧಾರಣೆ ಜಾಸ್ತಿಯಾಯಿತು. ಕೆಲವು ಸೊಸೈಟಿಗಳವರು ಸಹಿತ ಸರ್ಕಾರದವರು ಗೊತ್ತುಮಾಡಿರುವ ದರಕ್ಕೆ ಮಾರಲು ಸರ್ಕಾರದವರು ನಮಗೆ ದುಡ್ಡು ಕೊಟ್ಟಿಲ್ಲ ಎಂದು ಹೊರಗಡೆ ಹೆಚ್ಚು ಬೆಲೆಗೆ ಮಾರಾಟ ಮಾಡುವುದಕ್ಕೆ ಏರ್ಪಾಟು ಮಾಡಿದರು. ಮಾನ್ಯ ಸದಸ್ಯರಾದ ಭಾಸ್ಕರಶೆಟ್ಟರೂ, ಎ. ಕೃಷ್ಣಶೆಟ್ಟರೂ ಬಜೆಟ್ ಅಧಿವೇಶನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಕೇರಳಕ್ಕೆ ಅಕ್ಕಿ ಹೋಗುತ್ತಿದೆ ಎಂದು ಹೇಳಿದರು ಮತ್ತು ಈಗಲೂ ಕೂಡ ಹೇಳಿದರು. ಆದರೂ ಅದಕ್ಕೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ. ಇವತ್ತೂ ಸರ್ಕಾರ ಆಶ್ವಾಸನೆ ಕೊಡುವುದಾದರೆ ಅಂಥ ಜನರನ್ನು ಹಿಡಿದುಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಇದರಲ್ಲಿ ರಾಜಕೀಯವನ್ನು ತಂದು ಕೆಲವರನ್ನು ಹಿಡಿದು ಕೆಲವರನ್ನು ಬಿಡುವ ಪದ್ಧತಿಯನ್ನು ಇನ್ನಾದರೂ ನಿಲ್ಲಿಸಬೇಕು ಎಂದು ಹೇಳುತ್ತೇನೆ.

ಶ್ರೀ ಬಿ. ಡಿ ಜತ್ತಿ.—ಮಾನ್ಯ ಸದಸ್ಯರು ಅಂಥ ಸಮಾಚಾರವನ್ನು ಕೊಟ್ಟರೆ ಅವರು ಯಾರಿದ್ದರೂ ಕೂಡ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ವ್ಯವಸಾಯ ಮಂತ್ರಿಗಳು ಭಾಷಣ ಮಾಡಿದರು. ಅವರು ಏಕೆ ಭಾಷಣ ಮಾಡಿದರು, ಏನು ಭಾಷಣ ಮಾಡಿದರು ಎಂದು ನನಗೆ ಅರ್ಥವಾಗಲಿಲ್ಲ. ವಿಲೇಜ್ ಲೆವಲ್ ವರ್ಕರ್‌ನಿಂದ ಹಿಡಿದು ರಾಷ್ಟ್ರಾಧ್ಯಕ್ಷರವರೆಗೆ ಎಲ್ಲರೂ ಬುಲ್‌ಡೋಜರ್ ಕೊಡುತ್ತೇವೆ...

Mr. SPEAKER.—The Hon'ble Member should not bring in Rajyapal or President.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಗ್ರಾಮ ಭಾಷೆಯಲ್ಲಿ ಮಾತನಾಡುವಾಗ ಸ್ವಲ್ಪ ವ್ಯತ್ಯಾಸವಾಗಬಹುದು. ಹಾಗೆ ಆದಾಗ ತಾವು ಹೇಳಿದರೆ ನಾನು ತಿದ್ದಿಕೊಳ್ಳುತ್ತೇನೆ, ಸ್ವಾಮಿ.

ಈಗ ನಾವು ಏನೇನು ಹೊಸ ಯೋಜನೆಗಳನ್ನು ಮಾಡಿದ್ದೇವೆ ಅದರಿಂದ ಸಂಪೂರ್ಣ ಫಲವನ್ನು ಯಾವ ರೀತಿ ಪಡೆಯಬೇಕು ಎನ್ನುವುದನ್ನು ನೋಡಬೇಕು. ಹಿಂದೆ ಆದದ್ದು ಆಯಿತು, ಮುಂದೆ ಆಗುವುದನ್ನಾದರೂ ಸರಿಯಾಗಿ ಮಾಡೋಣ. ಸಣ್ಣ ನೀರಾವರಿ ಕೆಲಸಗಳನ್ನು ಮಾಡುತ್ತಿದ್ದೇವೆಂದು ಹೇಳಿದರು. ಆದರೆ ಪಬ್ಲಿಕ್ ವರ್ಕ್ಸ್ ಇಲಾಖೆಯವರು ಒಂದು ಸರ್ಕ್ಯುಲರ್ ಕಳಿಸಿ ಹೊಸ ಕೆಲಸಗಳನ್ನು ತೆಗೆದುಕೊಳ್ಳಬೇಡಿ ಎಂದು ಹೇಳಿದ್ದಾರೆ. ಹೀಗಾದರೆ ಸಣ್ಣ ನೀರಾವರಿ ಕೆಲಸ ಮಾಡಿದ ಹಾಗೆ ಆಯಿತೇ ? ವ್ಯವಸಾಯ ಇಲಾಖೆಯಲ್ಲಿ ರೈತರಿಗೆ ಪಂಪ್ ಸೆಟ್‌ಗಳನ್ನು ಕೊಡುವ ಯೋಜನೆ ಇದೆ. ಇವತ್ತಿನವರೆಗೂ ದುಡ್ಡು ಕೊಟ್ಟಿಲ್ಲ, ಟೆಂಡರುಗಳನ್ನು ಕರೆದಿಲ್ಲ. ಈಗ ಪಂಪ್ ಸೆಟ್‌ಗಳನ್ನು ತೆಗೆದುಕೊಳ್ಳಲು ಬೇಕಾದಷ್ಟು ಬೇಡಿಕೆ ಇದೆ. ಪಂಪ್ ಸೆಟ್‌ಗಳನ್ನು ಹಿಂದೆ ಕೊಟ್ಟಿರುವವರಿಗೂ ಇನ್ನೂ ಸರ್ವಿಸ್ ಕೊಟ್ಟಿಲ್ಲ. ನಮ್ಮ ಹಣವನ್ನು ವಾಪಸು ಕೊಡುವುದಕ್ಕೆ ಕೂಡ ಅಡ್ಡಿಯಾಗುತ್ತಿದೆ. ಬಾವಿ ತೆಗೆದು ಪಂಪ್ ಸೆಟ್‌ಗಳನ್ನು ಹೊಂದಿರುವವರಿಗೆ ಕರೆಂಟ್ ಕೊಡದೆಹೋದರೆ ವ್ಯವಸಾಯಗಾರನು ಏನು ಪ್ರಗತಿ ಸಾಧಿಸಬಹುದು ಎಂಬುದನ್ನು ತಾವು ಯೋಚನೆ ಮಾಡಬೇಕು.

ಸ್ವಾಮಿ, ಈಗ ಎಲ್ಲಿ ಕೇಳಿದರೂ ಅಲ್ಲಿ ಮಡಿವಂತಿಕೆ ಮಾತುಗಳು, ಪಾನ ನಿರೋಧ, ಖಾದಿ ಬೋರ್ಡು, ಇತ್ಯಾದಿ ಅನೇಕ ಮಾತುಗಳನ್ನು ಆಡುತ್ತಿದ್ದಾರೆ. ಯಾವಾಗ ಆಹಾರ ಹೆಚ್ಚಿಗೆ ಕೊಡಲು ಸರ್ಕಾರ ಮತ್ತು ಸಮಾಜಕ್ಕೆ ಸಾಧ್ಯವಿಲ್ಲವೋ ಆಗ ಪ್ರಕೃತಿಯಲ್ಲಿ ಬೆಳೆದಿರತಕ್ಕ ಈಚಲುಮರ, ಬಗಿನಿ ಮರ, ಇವುಗಳಿಂದ ದೊರೆಯತಕ್ಕ ಆಹಾರವನ್ನು ಕುಡಿದು ಜನರು ಜೀವನ ಮಾಡುವುದಕ್ಕೆ ಏನು ತೊಂದರೆ ? ಹೆಂಡದಿಂದ ಬರತಕ್ಕ ಆದಾಯವನ್ನು ನೀರಾವರಿ ಯೋಜನೆಗಳಿಗೆ ಉಪಯೋಗಿಸಬಹುದು. ಸೈನ್ಯಕ್ಕೆ ಈಗ ಮಾದಕ ಪದಾರ್ಥಗಳನ್ನು ಒದಗಿಸುತ್ತಿದ್ದಾರೆ ಮತ್ತು ಅವರನ್ನು ಹುರಿದುಂಬಿಸಿ ಯುದ್ಧಕ್ಕೆ ಬಿಡುತ್ತಿದ್ದಾರೆ. ಪ್ಲಾಂಟೇಶನಿನಲ್ಲೋ ಜಮೀನಿನಲ್ಲೋ ಇರತಕ್ಕ ಮಾದಕ ಪದಾರ್ಥಗಳನ್ನು ಜನರು ಕುಡಿದರೆ ಅದರಿಂದ ನಿಮಗೆ ತೊಂದರೆ ಏನು ? ಅದರಲ್ಲಿ ಯಾವುದೋ ಪರ್ಸೆಂಟೇಜ್ ಆಹಾರವಿದೆ ಎಂದು ಕೇಳಿದ್ದೇನೆ. ಇದನ್ನು ಮನಸ್ಸಿಗೆ ತಕ್ಷಣ ತೆಗೆದುಕೊಂಡು ಮಧ್ಯಪಾನವನ್ನು ಬೇಗನೇ ಜಾರಿಗೆ ತರಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಈಗ ಕೋಟ್ಯಾಂತರ

ರೂಪಾಯಿಗಳನ್ನು ಖರ್ಚು ಮಾಡಿ ಪರದೇಶಗಳಿಂದ ಆಹಾರ ವಸ್ತು ಮತ್ತು ಗೊಬ್ಬರಗಳನ್ನು ತರಿಸುತ್ತಿದ್ದೀರಿ. ಆದರೆ ಅದೇ ದುಡ್ಡನ್ನು ನಮ್ಮ ದೇಶದಲ್ಲಿ ರೈತನಿಗೋಸ್ಕರ ಖರ್ಚು ಮಾಡಿ ಹೆಚ್ಚು ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಿದೆ. ಈಗ ಪಂಪ್‌ಸೆಟ್ಟು ಕೊಡುವುದನ್ನು ಎಲೆಕ್ಟ್ರಿಸಿಟಿ ಬೋರ್ಡ್‌ನವರಿಗೆ ವಹಿಸಿದ್ದಾರೆ. ರೈತನು ಒಂದು ದಿವಸ ಪಂಪುಗಳನ್ನು ತರುವುದಕ್ಕೋಸ್ಕರ ಅಲ್ಲಿಗೆ ಹೋಗಬೇಕು. ಇನ್ನೊಂದು ದಿವಸ ಮೋಟಾರ್‌ಗೋಸ್ಕರ ಹೋಗಬೇಕು : ಮತ್ತೊಂದು ದಿವಸ ಕಂಟ್ರಾಕ್ಟರನ್ನು ಹುಡುಕಿಕೊಂಡು ಹೋಗಬೇಕು. ಆಗ ಯಾವ ಯಾವ ಗುಮಾಸ್ತರಿಗೆ ಎಷ್ಟೆಷ್ಟು ಕೈಬೆಚ್ಚಗೆ ಮಾಡಬೇಕೆಂಬುದನ್ನು ಯೋಚನೆ ಮಾಡಿ ಇದರಿಂದಾಗಿ ರೈತನಿಗೆ ತುಂಬಾ ತೊಂದರೆಯಾಗಿದೆ.

ಇನ್ನು ರೈತನಿಗೆ ಕೊಡತಕ್ಕ ಸಾಲದ ವಿಚಾರ. ಎಲ್ಲೆಲ್ಲಿ ನೀರಾವರಿ ಯೋಜನೆಗಳಿಂದ ಸಫಲತೆ ಆಗಲಿಲ್ಲವೋ, ಅಂತಹಕಡೆ ಬಾವಿಗಳನ್ನು ತೋಡಿಸುವುದಕ್ಕೆ ಹೆಚ್ಚಿಗೆ ಪ್ರಾಶಸ್ತ್ಯ ಕೊಡಬೇಕು ; ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ತಕ್ಷಣ ತೆಗೆದುಕೊಳ್ಳಬೇಕು. ಈ ಕೃತಕ ಗೊಬ್ಬರವು ಖರ್ಚಾಗುವುದಕ್ಕೆ ಕುಡಿತವೇ ಒಂದು ಮುಖ್ಯ ಕಾರಣ. ಅಮೋನಿಯಂ ಸಲ್ಫೇಟ್‌ನಿಂದ ಕಾಫಿ ತೋಟಗಳಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರು ಮಾಡುತ್ತಿದ್ದಾರೆ. ಆದ್ದರಿಂದ ಇದು ಬ್ಲಾಕ್ ಮಾರ್ಕೆಟ್ಟಿಗೆ ವಿಶೇಷವಾಗಿ ಹೋಗುತ್ತಿದೆ. ಆ ದೃಷ್ಟಿಯಿಂದ ಎಲ್ಲಾ ಅಲ್ಲಿನ ಬಗಿನಿ ಮರಗಳನ್ನು ಕಡಿಯಲು ಉಪಯೋಗಿಸುವುದಕ್ಕೆ ಅವಕಾಶ ಕೊಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಈಗ ಮಾಸ್ಟರ್ ಪ್ಲಾನ್ ತಯಾರು ಮಾಡುತ್ತಿದ್ದೀರಿ. ದೇಶದ ದುಡ್ಡನ್ನೆಲ್ಲಾ ತೆಗೆದುಕೊಂಡು ಹೋಗಿ ಇನ್‌ವೆಸ್ಟಿಗೇಶನ್‌ಗೆ ಹಾಕುತ್ತಿದ್ದೀರಿ. ಇವತ್ತಿಗೆ ಒಂದು ಪ್ರೊಜೆಕ್ಟಾದರೂ ನಮ್ಮಲ್ಲಿ ತೆಗೆದುಕೊಂಡಿಲ್ಲ. 50 ವರ್ಷಗಳಾದರೂ ಗೋರೂರು ಪ್ರೊಜೆಕ್ಟನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದನ್ನು ಇನ್ನೂ ಸರ್ವೆ ಮಾಡುತ್ತಿದ್ದಾರೆ. ಯಾರು ಬೇಡವೋ, ಅಂತಹ ಅಧಿಕಾರಿಗಳನ್ನು ಅಲ್ಲಿಗೆ ಹಾಕುತ್ತಾರೆ. ಅವರನ್ನು ಸರ್ವೆ ಮಾಡಿಸುವ ಕೆಲಸದಿಂದ ಬಿಟ್ಟು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಇಡಿ. ಕೆಲವು ಸಮಯ ಅಣೆಕಟ್ಟು ಕೆಲಸದ ಮೇಲೆ ಅವರನ್ನು ಬಿಡಿ, ಇನ್ನು ಕೆಲವು ಸಮಯ ಇನ್ವೆಸ್ಟಿಗೇಶನ್ ಮಾಡಲು ಬಿಡಿ. ಈಗಿನ ತುರ್ತು ಪರಿಸ್ಥಿತಿಯಲ್ಲಿ ಹಣ ಉಳಿಸಬೇಕೆಂದು ಭಾಷಣ ಮಾಡಿದ್ದುದನ್ನು ಕೇಳಿದ್ದೇನೆ. ದೊಡ್ಡ ದೊಡ್ಡ ಪವರ್ ಪ್ರೊಜೆಕ್ಟುಗಳನ್ನು ಕೆಲವು ವರ್ಷ ಬೇಕಾದರೆ ನಿಲ್ಲಿಸಿ, ತಕ್ಷಣ ಪ್ರತಿಫಲ ದೊರೆಯುವಂತಹ ಸಣ್ಣ ಸಣ್ಣ ಯೋಜನೆಗಳನ್ನು ತೆಗೆದುಕೊಳ್ಳಿ. ಮಾನ್ಯ ಮಂತ್ರಿಗಳೆಲ್ಲಾ ತುರ್ತು ಪರಿಸ್ಥಿತಿಯಲ್ಲಿ ಹಣ ಉಳಿಸಬೇಕೆಂಬ ದೃಷ್ಟಿಯಿಂದ ಕಾಲ್ನಡಿಗೆಯಲ್ಲೇ ಬರುವುದಕ್ಕೆ ಪ್ರಯತ್ನ ಮಾಡಿದರು. ಅದರ ಬದಲು ಕಾರಿನಲ್ಲೇ ಬರಲಿ, ಇನ್ನೊಂದು ಕಾರು ಬೇಕಾದರೆ ಅದರ ಹಿಂದೆ ಬರಲಿ. ಇಲ್ಲದಿದ್ದರೆ ಈಗ ಲಾಯರ್ಸ್ ಬಂದ ಹಾಗೆ ಹಿಂದಿನಿಂದ 10 ಜನ ಮುಂದುಗಡೆಯಿಂದ 10 ಜನ ಅವರ ಜೊತೆಯಲ್ಲಿ ಬರುತ್ತಿರುವ ಹಾಗೆ ಬರಲಿ. ಆದರೆ ಇದು ಸಾಯಲ್ಲ. ನಿಜವಾಗಿ ಸರ್ಕಾರಕ್ಕೆ ಮಿತವ್ಯಯ ಮಾಡಬೇಕೆಂದಿದ್ದರೆ, ಈ ಮಂತ್ರಿಗಳ ಸಂಖ್ಯೆ ಏನು ಇದೆ ಅದನ್ನು ಎಂಟಕ್ಕೆ ಇಳಿಸಿ ಮಿಕ್ಕವರನ್ನು ಬಿಟ್ಟುಬಿಡಿ. ಮುಂದಕ್ಕೆ ದೇಶ ಒಳ್ಳೆಯ ಸ್ಥಿತಿಗೆ ಬಂದಾಗ 28 ಜನರ ಬದಲಿಗೆ 40 ಜನ ಬೇಕಾದರೆ ಮಾಡಿಕೊಳ್ಳಿರಿಂತೆ. ಈಗ ಒಂದು ಒಳ್ಳೆಯ ವಿಷಯವನ್ನು ಹೇಳುತ್ತೇನೆ.

ಅಧ್ಯಕ್ಷರು.—ಹಾಗಾದರೆ ಇಷ್ಟರವರೆಗೆ ಹೇಳಿದ್ದು ಒಂದೂ ಒಳ್ಳೆಯ ವಿಷಯವಲ್ಲವೇ ? (ನಗು)

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ರೆವೆನ್ಯೂ, ಅಗ್ರಿಕಲ್ಚರ್, ಪಬ್ಲಿಕ್ ವರ್ಕ್ಸ್ ಮತ್ತು ಇನ್ನೂ ಒಂದೆರಡು ಇಲಾಖೆಗಳ ಸೆಕ್ರೆಟರಿಗಳು ವಿವಿಧ ವಿಷಯಗಳಲ್ಲಿ ಪರ್ಯಾಲೋಚನೆ ನಡೆಸಲು, ವಾರಕ್ಕೊಮ್ಮೆ ಇಲ್ಲವೇ ತಿಂಗಳಿಗೊಮ್ಮೆ ಬೆಂಗಳೂರಿನಲ್ಲಿ ಸಭೆ ಸೇರಿ ಯಾವ ಯಾವ ಕಡೆಗಳಲ್ಲಿ ಎಷ್ಟೆಷ್ಟು ರೈತರಿಂದ ವ್ಯವಸಾಯಕ್ಕೋಸ್ಕರ ಅರ್ಜಿಗಳು ಬಂದಿವೆ, ಆ ಅರ್ಜಿಗಳು ಏನಾಗಿವೆ? ಯಾವ ಕಾರಣದಿಂದ ಎಷ್ಟು ಅರ್ಜಿಗಳು ಹಾಗೆಯೇ ನಿಂತಿವೆ, ಸಂಬಂಧಪಟ್ಟ ಇಲಾಖೆಯವರು ಆ ಅರ್ಜಿಗಳನ್ನು ಏತಕ್ಕೆ ವಿಲೇವಾರಿ ಮಾಡಲಿಲ್ಲ, ಯಾವ ಕಾರಣಗಳಿಂದಾಗಿ ನಿಂತು ಬಿಟ್ಟಿವೆ ಎಂಬುದನ್ನೆಲ್ಲಾ ವಿಚಾರಿಸಿ ರೈತನಿಗೆ ಬೇಕಾದ ಸೌಲಭ್ಯಗಳು ಸಿಗುವ ಕೆಲಸ ಮಾಡಲಿ. ಬಹಳ ಜನ ಮಂತ್ರಿಗಳು ಕೆಲಸ ಹೆಚ್ಚು ಮಾಡುತ್ತಿದ್ದಾರೆಂದು ನಾನು ಹೇಳುತ್ತಿದ್ದೇನೆ. ನಿಜ, ಅರ್ಜಿಗಳನ್ನು "forwarded to the Deputy Commissioner, Forwarded to the Assistant Commissioner, Forwarded to the Chief Engineer,"........ಎಂದು ಬರೆಯುತ್ತಾರೆ. ಅರ್ಜಿಗಳ ಸಂಖ್ಯೆಯೇನೋ ಜಾಸ್ತಿಯಾಗುತ್ತಾ ಇದೆ. ಆದರೆ ಅವುಗಳ ಮೇಲೆ ಅಭಿಪ್ರಾಯ ಕೊಡುವವರು ರೆವೆನ್ಯೂ ಇನ್ಸ್‌ಪೆಕ್ಟರರು ಮಾತ್ರ. ಹಾಗೆ ಮಾಡಬೇಡಿ.

ಇನ್ನು ತೆಂಗಿನ ಡೆವಲಪ್‌ಮೆಂಟ್ ಸ್ಕೀಮ್ ವಿಚಾರ ಹೇಳುತ್ತೇನೆ. ಈಗ ಒಂದು ತಾಲ್ಲೂಕಿನಲ್ಲಿ ಒಂದು ತೋಟದಲ್ಲಿ ವರ್ಷಕ್ಕೆ 20,000 ಕಾಯಿ ಆಗುವುದಕ್ಕೆ ಬದಲು 8 ಲಕ್ಷ ಕಾಯಿ ಆಗುತ್ತದೆಂದು ಹೇಳುತ್ತಾರೆ. ಆದರೆ ಮೂರು ವರ್ಷ ಆದ ಮೇಲೆ ಒಂದು ಮರದಿಂದ 3—4 ಕಾಯಿಗಳು ಸಿಕ್ಕು

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ತ್ತದೆ. 8—9 ಲಕ್ಷ ಸಿಕ್ಕುವುದಿಲ್ಲ, ಈ ರೀತಿ ಬೀಜ ಮಾಡಿದರೆ ನೂರು ವರ್ಷ ಇರತಕ್ಕ ಪದಾರ್ಥ ಎಷ್ಟುಮಟ್ಟಿಗೆ ಬೆಳದು ಅಭ್ಯಿದ್ಧಿಯಾಗುತ್ತದೆ ? ಇದೇ ರೀತಿ ಸೀಡ್ ಫಾರ್ಮ್‌ನಲ್ಲೂ ಅನೇಕ ಲೋಪ ದೋಷಗಳಿವೆ.

ಇನ್ನು ಕೋ-ಆಪರೇಟಿವ್ ಸೊಸೈಟಿಯ ವಿಚಾರ, ಅದರಲ್ಲೂ ಏನೂ ಪ್ರಯೋಜನವಿಲ್ಲ. ಒಕ್ಕಲು ತನಕ್ಕೆ ಬಹಳ ನಷ್ಟವಾಗುತ್ತಿದೆ. ಈಗ ಎಕರೆ ಒಂದರ ಅವರೆಜ್ ಈಲ್ಡ್ ಏನು ಬರುತ್ತದೆ ಎಂಬು ದನ್ನು ಮುಂದಿನ ಬಜೆಟ್ ಅಧಿವೇಶನದಲ್ಲಿ ಹೇಳುತ್ತೀರಾ ? ಇದನ್ನು ಬಿಟ್ಟು ಬಿಟ್ಟು ಇಂಡಿವಿಜುವಲ್ಸ್‌ಗೆ ಕೊಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri TIRUMALADEVARAYA (Gangavathi).—Sir, In order to raise food production, some of my friends here have given some valuable suggestions. I hope the Government would consider them and do something· Sir, most of my friends have spoken about the lift irrigation and so I do not want to repeat them. I would like to speak a few words about lift irrigation and about Tungabhadra Project. Sir, electricity is being produced in my constituency and some people have dug wells and applied for power. In the meeting, the concerned authorities replied that neither they have got materials nor they have got funds. Sir, when there are no funds, what is the use of generating more power ? There is food crisis, so I would request the Government that atleast some adequate funds are provided for lift irrigation and other such schemes. It is the opinion of some of my friends in this House and also outside that Tungabhadra Project has not fully developed. To some extent, it is right, Sir. The atchkat area is localised for heavy and light irrigation. Heavy irrigation means area localised for sugarcane and paddy. To, the extent Water has reached heavy irrigation and it is fully developed. The area localised for light is as barren as before. The reason behind it is that the agriculturist is unwilling to take up this scheme. Unless and until the Government do some experiments and if the returns are profitable, then the Government should have some demonstration plots here and there and propagate it and then only cultivators would take it up. Sir, it is a thinly populated area. So, in order to bring all these localised lands under cultivation, either we have to bring agricultural labour from outside, or we have to use mechanical means. Sir, there is a lot of water in the dam and if water is given to the cultivators without commitment on the part of the Government wherever there is no tail-end land difficulty, then I hope we can bring a few thousands acres more under heavy cultivation. Last year, our Government gave water to Andhra Pradesh and by giving that, to some extent our raiyats also suffered. Therefore, I request our Government that water should be freely given to our cultivators so that we can raise some more food products in our State instead of giving it to Andra Pradesh. Sir, in order to increase food production, we want fertilizers we are feeling scarcity and shortage of Chemical fertilizers.

I would like to say a few words about the words about the work of bulldozers in Raichur District. Sir, there are 6—7 bulldozers, but they not put to work for the main reason that there are no drivers to work them. When we ask the authorities, they replied that because the pay

offered to drivers is inadequate, nobody is coming forward. When we have invested lakhs of rupees on bulldozers is it not waste that they should be kept idle for want of drivers ? What is the use of telling the people simply that we have so many bulldozers ? Whenever we apply for bulldozers, we are given this kind of reply. How does it help agriculture ? Therefore, I request the concerned authorities to see that at least the bulldozers are not kept idle.

Sir, In order to increase production and to help the agriculturists tractors are useful. A tractor imported from foreign countries used to cost Rs. 10,000. Now they are assembled and manufactured in India and the price has gone up to Rs. 16,000. In addition to that, we have to pay 6 per cent sales tax also. When the object of the Government is to give relief to the agriculturist in order to produce more food, why should we impose this sales tax on the sale of tractors ? and why should Indian manufactured tractor cost more than the foreign one ? Government should consider it—whether it concerned the Central Government or our State Government they should see that the price of tractor is lowered. Now they are producing big tractors. If it is possible to produce small tractors at a lesser price, it would help smaller raiyats having 10—15 acres. Government should consider this aspect also. And for the production of agricultural implements also, they should have a small factory in each district headquarter place so that the agriculturist can easily get these implements.

With these few words, I thank the Chair for giving an opportunity to me to speak.

ಶ್ರೀ ಅಂದಾನಯ್ಯ (ಕುಣಿಗಲ್).—ಮಾನ್ಯ ಸಭಾಪತಿಗಳೇ, ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಅಧಿಕ ಆಹಾರೋತ್ಪಾದನೆಗೆ ಏನೇನು ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವ ನಿರ್ಣಯದ ಮೇಲೆ ಈಗಾಗಲೇ ಈ ಮಾನ್ಯ ಸಭೆಯ ಅನೇಕ ಸದಸ್ಯರು ಅತ್ಯಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಮಗೆ ಸ್ವಾತಂತ್ರ್ಯ ಬಂದು 18 ವರ್ಷಗಳಾದುವು. ಮೂರು ಪಂಚವಾರ್ಷಿಕ ಯೋಜನೆಗಳು ಮುಗಿಯುತ್ತಾ ಬಂದುವು. ಈ ಅವಧಿಗಳಲ್ಲಿ ಸರ್ಕಾರ ಏನು ಸಾಧನೆಮಾಡಿದೆಯೆಂದು ನೋಡಿದ್ದೇ ಆದರೆ ನಮ್ಮ ಕಣ್ಣುಮುಂದೆ ಒಂದ ಚಿತ್ರ ಕಾಣುತ್ತಿದೆ. ಒಂದುಕಡೆ ಮದೋನ್ಮತ್ತರಾಗಿ, ಲೋಲರಾಗಿ ಸುಖಭೋಜನ ಮಾಡಿ ಸುಪ್ಪತ್ತಿಗೆಮೇಲೆ ಮಲಗಿ ಹೊರಳಾಡುತ್ತಿರುವವರ ದೃಶ್ಯ. ಇನ್ನೊಂದುಕಡೆ ಬಡ ಜನತೆ ಹೊಟ್ಟೆಗಿಲ್ಲದೆ ಊರೂರು ಮನೆಮನೆ ಬೀದಿಬೀದಿ ಅಲೆಯುತ್ತಾ ಇರತಕ್ಕ ದೃಶ್ಯ—ಇಂತಹ ಒಂದು ಚಿತ್ರವನ್ನು ನಾವು ಇವತ್ತು ನೋಡುತ್ತಿದ್ದೇವೆ. ನಮ್ಮ ದೇಶ ವ್ಯವಸಾಯಗಾರರ ದೇಶ. ಸೇಕಡ 80ರಷ್ಟು ಜನ ವ್ಯವಸಾಯ ಕಸಬನ್ನು ಅವಲಂಬಿಸುತ್ತಿದ್ದಾರೆ. ಮಳೆಯನ್ನೇ ನೆಚ್ಚಿಕೊಂಡು ವ್ಯವಸಾಯ ಮಾಡುವಜನರೇ ಈಗಬಹಳ ಹೆಚ್ಚಾಗಿದ್ದಾರೆಂಬುದು ಎಲ್ಲರಿಗೂ ತಿಳಿದಂಥ ವಿಷಯ, ಮುಖ್ಯವಾಗಿ ನಮ್ಮ ದೇಶದಲ್ಲಿ ನಿರ್ದಿಷ್ಟಕಾಲದಲ್ಲಿ ಮಳೆ ಬರುತ್ತಾ ಇಲ್ಲ. The rainfall in India is uncertain ಎಂದು ನಮ್ಮ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ ವ್ಯವಸಾಯಗಾರನಿಗೆ ತಾನು ಬೆಳೆ ತನ್ನ ಕೈ ಸೇರಬೇಕಾದರೆ ಸರ್ಕಾರದವರು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದನ್ನು ವಿಚಾರಮಾಡುವುದು ಮುಖ್ಯ. ಮೊಟ್ಟಮೊದಲನೆಯದಾಗಿ ರೈತನಿಗೆ ಬೇಕಾದುದು ಭಾವಿಗಳು. ಏಕೆಂದರೆ ಮಳೆ ನಿರ್ದಿಷ್ಟಕಾಲದಲ್ಲ ಬರುವುದಿಲ್ಲ. ರೈತರು ಬೆಳೆದ ಬೆಳೆಯನ್ನು ತೆಗೆದುಕೊಳ್ಳಬೇಕಾದರೆ ಅವರಿಗ ನೀರಿನ ಸೌಲಭ್ಯ ಸಾಕಷ್ಟು ಬೇಕು. ರೈತರಿಗೆ ಹೆಚ್ಚು ನೀರು ಸಿಗಬೇಕಾದರೆ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರ ಬಾವಿಗಳನ್ನು ತೋಡಿಸುವುದಕ್ಕೆ ಹಣ ಸಹಾಯ ಮಾಡಬೇಕು. ಇವತ್ತು ಸರ್ಕಾರದವರು ಬಾವಿಗಳಿಗೆಂದು ಏನು ಸಾಲ ಕೊಡುತ್ತಿದ್ದಾರೋ ಅದು ಖಂಡಿತವಾಗಿ ಸಾಲುತ್ತಾ ಇಲ್ಲ. ಕೇವಲ ಮೂರು ಸಾವಿರ ರೂಪಾಯಿಗಳಲ್ಲಿ ಬಾವಿಯನ್ನು ಕಟ್ಟುವುದಕ್ಕಾಗುವುದಿಲ್ಲ. ಬಾವಿಯಲ್ಲಿ ಎಷ್ಟು ಹಳ್ಳಬೇಕೋ ಅಷ್ಟು ಹಳ್ಳವನ್ನು ತೆಗೆಯಲಿಕ್ಕಾಗುವುದಿಲ್ಲ. ಅಂತಹ ಬಾವಿಗಳಲ್ಲಿರತಕ್ಕ ನೀರಿನಿಂದ ಕೇವಲ ಅರ್ಧ ಎಕರೆ ಅಥವಾ ಒಂದು ಎಕರೆ ಸಾಗು ಮಾಡುವುದಕ್ಕೂ ಸಾಧ್ಯವಾಗುತ್ತಾ ಇಲ್ಲ. ಈಗ ಏನು ಒಂದೊಂದು ಬಾವಿಗೆ ಮೂರು

(ಶ್ರೀ ಅಂದಾನಯ್ಯ)

ಸಾವಿರ ರೂಪಾಯಿಗಳನ್ನು ಸರ್ಕಾರದವರು ಕೊಡುತ್ತಿದ್ದಾರೋ ಅದನ್ನು ಐದು ಸಾವಿರ ರೂಪಾಯಿಗಳಿಗೆ ಹೆಚ್ಚಿಗೆ ಮಾಡಬೇಕು. ಸಾಮಾನ್ಯವಾಗಿ ಒಂದೊಂದು ಬಾವಿಯಿಂದ ಮೂರು ಅಥವಾ ನಾಲ್ಕು ಎಕರೆ ಜಮೀನು ಸಾಗುವಳಿ ಮಾಡುವುದಕ್ಕೆ ಅನುಕೂಲತೆ ಮಾಡಿಕೊಡಬೇಕು.

ಎರಡನೆಯದಾಗಿ ಬೇಕಾಗಿರುವುದು ನಮಗೆ ಕೃತಕ ಗೊಬ್ಬರ. ಇದರ ತೊಂದರೆ ನಮ್ಮ ದೇಶದಲ್ಲಿ ಬಹಳ ಹೆಚ್ಚಾಗಿ ಕಾಣುತ್ತಾ ಇದೆ. ವ್ಯವಸಾಯ ಮಂತ್ರಿಗಳು ಭಾಷಣ ಮಾಡುತ್ತಾ 1963-64 ಮತ್ತು 64-65 ನೇ ಸಾಲುಗಳಿಗೆ ನಮಗೆ 2 ಮತ್ತು 3 ಲಕ್ಷ ಟನ್ನುಗಳಷ್ಟು ಕೃತಕಗೊಬ್ಬರ ಬೇಕೆಂದು ಕೇಂದ್ರ ಸರ್ಕಾರದವರಲ್ಲಿ ಕೇಳಿದ್ದರೂ ಅವರು ಅರ್ಧದಷ್ಟನ್ನೂ ಕೂಡ ನಮಗೆ ಸರಬರಾಜು ಮಾಡಲಿಲ್ಲವೆಂದು ಹೇಳಿದರು. ನಾನು ಹೇಳುತ್ತೇನೆ. ಇವತ್ತು ಕೇಂದ್ರ ಸರ್ಕಾರದಲ್ಲಿ ಮೈಸೂರಿನ ಪ್ರತಿನಿಧಿಗಳಾಗಿ ಕೇಂದ್ರ ಮಂತ್ರಿಮಂಡಲದಲ್ಲಿ ಯಾರಾದರೂ ಇದ್ದಿದ್ದೇ ಆಗಿದ್ದರೆ ನಮ್ಮ ದೇಶಕ್ಕೆ ಬೇಕಾದಂಥ ಗೊಬ್ಬರ ಹಾಗೂ ಇತರ ಸೌಕರ್ಯಗಳ ಬಗ್ಗೆ ಅವರು ಅಲ್ಲಿ ಬಹಳವಾಗಿ ಕಷ್ಟಪಟ್ಟು ಸರ್ವ ಪ್ರಯತ್ನಗಳನ್ನು ಮಾಡಿ ನಮಗೆ ಹೆಚ್ಚಿನ ಸೌಲಭ್ಯವನ್ನು ಕಲ್ಪಿಸಿಕೊಡುತ್ತಿದ್ದರೆಂಬ ಗಮನವನ್ನು ನಾನು ಹೇಳಬಯಸುತ್ತೇನೆ. ಆದ್ದರಿಂದ ಮುಖ್ಯ ಮಂತ್ರಿಗಳು ಬೇಗನೆ ಕೇಂದ್ರ ಮಂತ್ರಿಮಂಡಲದಲ್ಲಿ ನಮ್ಮ ಪ್ರತಿನಿಧಿ ಒಬ್ಬರು ಇರುವುದಕ್ಕೆ ಸರ್ವ ಪ್ರಯತ್ನಗಳನ್ನು ಮಾಡಬೇಕು.

ಇನ್ನು ಕೆರೆಗಳಲ್ಲಿ ಹೂಳು ತೆಗೆಯುವ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ. ಇವತ್ತು ನಮ್ಮ ದೇಶದಲ್ಲಿ ಅನೇಕ ಸಣ್ಣಸಣ್ಣ ಕೆರೆಗಳಿವೆ. ಕೇವಲ ಒಂದು ಸಾರಿ ಕೆರೆ ತುಂಬಿದರೆ ಬೆಳೆಯಾಗುವುದಿಲ್ಲ. ಸುಮಾರು 3-4 ಸಾರಿ ಕೆರೆ ತುಂಬಬೇಕು. ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಎಲ್ಲಾ ಕೆರೆಗಳಲ್ಲಿ ಹೂಳು ತುಂಬುವುದರಿಂದಲೇ ಸರಿಯಾಗಿ ಬೆಳೆ ಮಾಡುವುದಕ್ಕೆ ರೈತರಿಗೆ ತೊಂದರೆಯಾಗಿ ಅವರು ಬೆಳೆದ ಬೆಳೆಯೇ ಅವರ ಕೈಸೇರುತ್ತಾ ಇಲ್ಲ. ಆದ್ದರಿಂದ ಈ ದೇಶದಲ್ಲಿ ಸರ್ಕಾರ ಕೆರೆಗಳಲ್ಲಿ ಹೂಳು ತೆಗೆಯುವ ಕಾರ್ಯವನ್ನು ಮೊದಲು ಕೈಗೊಂಡು ರೈತರಿಗೆ ಸಹಾಯಮಾಡಬೇಕು. ನಮ್ಮಲ್ಲಿ ಎಷ್ಟೋ ಸಣ್ಣಸಣ್ಣ ಕೆರೆಗಳಿವೆ. ಅವುಗಳಿಗೆ ಹೂಳು ಬೀಳುವುದನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ತಕ್ಕ ಪ್ರಯತ್ನಗಳನ್ನು ಕೂಡಲೇ ಮಾಡಬೇಕೆಂಬುದಾಗಿ ನಾನು ಸಣ್ಣ ನೀರಾವರಿ ಮಂತ್ರಿಗಳನ್ನು ಪ್ರಾರ್ಥಿಸುತ್ತೇನೆ. ಇವತ್ತು ರೈತನಿಗೆ ಕೊಡುವ ಸೌಲಭ್ಯಗಳು ಯಾವ ರೀತಿ ಇವೆಯೆಂಬುದನ್ನು ನೋಡಿದರೆ ತೆನಾಲಿರಾಮಕೃಷ್ಣ ಕುದುರೆ ಸಾಕಿದ ಹಾಗೆ ಇದೆ. ಅವನು ದೂರದಲ್ಲಿ ನಿಂತು ಹುಲ್ಲು ನೀರು ತೋರಿಸಿ ಕುದುರೆ ಸಾಕುತ್ತಿದ್ದ. ಹಾಗೆ ನಮ್ಮ ಸರ್ಕಾರ ರೈತನಿಗೆ ಗೊಬ್ಬರ, ಪಂಪುಸೆಟ್ಟು, ಇತರ ಸೌಕರ್ಯಗಳನ್ನು ಕಲ್ಪಿಸುತ್ತಿದೆ, ಇದೆಲ್ಲವನ್ನೂ ಬರೀ ಪೇಪರ್‌ನಲ್ಲಿ ತೋರಿಸಿ ರೈತನಿಗೆ ಕಾಲಕ್ಕೆ ಸರಿಯಾಗಿ ಏನೇನು ಸೌಲಭ್ಯಗಳನ್ನು ಕೊಡಬೇಕಾಗಿತ್ತೋ ಅವನ್ನು ಸರಿಯಾಗಿ ಒದಗಿಸುತ್ತಾ ಇಲ್ಲ. ಆದ್ದರಿಂದ ಈಗಲಾದರೂ ನಮ್ಮ ದೇಶದಲ್ಲಿ ಅಧಿಕ ಆಹಾರೋತ್ಪಾದನೆ ಗೋಸ್ಕರ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ಅಷ್ಟು ತೀವ್ರರೀತಿಯಲ್ಲಿ ತೆಗೆದುಕೊಂಡು ರೈತರಿಗೆ ಹೆಚ್ಚಿನ ಸಹಾಯಮಾಡಬೇಕೆಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಇನ್ನು ನನ್ನ ತಾಲ್ಲೂಕಿನ ವಿಷಯವನ್ನು ಹೇಳುವುದಾದರೆ ನಮ್ಮಲ್ಲಿ 30 ಸಾವಿರ ಎಕರೆ ಪ್ರದೇಶದಲ್ಲಿ ಗದ್ದೆ ನಾಟಿಯನ್ನು ಮಾಡಿದ್ದೆವು. ಮಳೆ ಸಾಕಷ್ಟು ಬಾರದೆ ಕೆರೆಗಳಲ್ಲೆಲ್ಲಾ ಒಂದು ತೊಟ್ಟು ನೀರು ನಿಲ್ಲದೆ ಅವೆಲ್ಲವೂ ಬತ್ತಿಹೋದುವು. ಈಗ ಆ ಗದ್ದೆಗಳೆಲ್ಲಾ ಬಿರುಕು ಬಂದು ಪೈರು ಒಣಗಿ ಹೋಗುತ್ತಾ ಇವೆ. ನಮ್ಮ ತಾಲ್ಲೂಕಿನ ಪರಿಸ್ಥಿತಿ ಈ ರೀತಿಯಾಗಿದೆ. ಇದರಿಂದ ದನಕರುಗಳಿಗೆ ಹುಲ್ಲು ಇಲ್ಲವೇ ಇಲ್ಲ, ಜನಗಳಿಗೆ ಆಹಾರ ಸರಿಯಾಗಿ ಸಿಗುತ್ತಾ ಇಲ್ಲ ನಮ್ಮ ಜಿಲ್ಲೆಯಲ್ಲೇನೋ ಆಹಾರ ಸಂಗ್ರಹಣೆಯಾಗಿದೆ, ಆದರೆ ಅದನ್ನು ಸರಿಯಾಗಿ ವಿತರಣೆ ಮಾಡುತ್ತಿಲ್ಲ. ಅದಕ್ಕಾಗಿ ಸರ್ಕಾರದವರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಒಂದು ಸೂಚನೆ ಕೊಡಬೇಕೆಂದು ನಾನು ಆಹಾರಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ.

11-00 A.M

ಇವೊತ್ತು ನಮ್ಮ ಜಿಲ್ಲೆಯಲ್ಲಿ ಎಲ್ಲೆಲ್ಲಿ ಏನು ಆಹಾರವನ್ನು ಸಂಗ್ರಹಣೆ ಮಾಡಿದ್ದಾರೆಯೋ ಅದನ್ನು ಅಲ್ಲಲ್ಲೇ ವಿತರಣೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕೆಂದು ನಾನು ಮಾನ್ಯ ಆಹಾರ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನಾನು ಪತ್ರಿಕೆಯಲ್ಲಿ ಓದಿದ್ದೇನೆ, ಶ್ರೀಮಾನ್ ಜತ್ತಿಯವರು ತುಮಕೂರಿನಲ್ಲಿ ಮತ್ತು ಬೆಂಗಳೂರಿನಲ್ಲ ಅನೇಕ ಅಂಗಡಿಗಳನ್ನು ರೈಡ್ ಮಾಡಿ ಆಹಾರ ಧಾನ್ಯಗಳನ್ನು ಬಚ್ಚಿಟ್ಟದ್ದನ್ನು ಹಿಡಿದಿದ್ದಾರೆಂದು ಮಾನ್ಯ ಮಂತ್ರಿಗಳು ಸಾಹಸಮಾಡಿ ಕೆಲಸ ಮಾಡಿದ್ದಾರೆ. ಆದರೆ ಪ್ರಯೋಜನ ಏನು ಬಂತು? ಆ ವರ್ತಕರು ಕೋರ್ಟಿಗೆ ಹೋಗಿ

ಲಾಯರನ್ನು ಇಟ್ಟುಕೊಂಡು ಡಿಫೆಂಡ್ ಮಾಡಿಕೊಳ್ಳುತ್ತಾರೆ. ಈ ರೀತಿ ಕಾನೂನನ್ನು ಅನ್ವಯಿಸಿದರೆ ಅನುಕೂಲವಾಗುವುದಿಲ್ಲ. ಡಿಫೆನ್ಸ್ ಆಫ್ ಇಂಡಿಯಾ ಕಾನೂನು ಪ್ರಕಾರ ಅವರು ಕೋರ್ಟಿಗೆ ಹೋಗದಹಾಗೆ ಮಾಡಿ ಅವರಿಗೆ ಉಗ್ರ ಶಿಕ್ಷೆಯನ್ನು ವಿಧಿಸಬೇಕು. ದೊಡ್ಡ ದೊಡ್ಡ ಸ್ಥಳಗಳಲ್ಲಿ ಯಾರು ಯಾರು ಕಾಳಸಂತೆ ವ್ಯಾಪಾರವನ್ನು ಮಾಡುತ್ತಾರೆಯೋ ಅಂಥವರನ್ನು ಹಿಡಿದು ಅವರಿಗೆ ಉಗ್ರ ಶಿಕ್ಷೆಯನ್ನು ವಿಧಿಸುವುದಾದರೆ ನಿಜವಾಗಿಯೂ ಕೂಡ ಬ್ಲಾಕ್ ಮಾರ್ಕೆಟ್ಟನ್ನು ತಡೆಗಟ್ಟಬಹುದು; ಎಂದು ನಾನು ಆಹಾರ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಸಿದ್ಧಯ್ಯನವರು ಈ ಸಭೆಯ ಮುಂದೆ ತಂದಿರತಕ್ಕ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದು ನಾನು ಅಪೇಕ್ಷೆಪಡುತ್ತೇನೆ. ಈಗಾಗಲೇ ಮಾನ್ಯ ಸದಸ್ಯರನೇಕರು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಹೆಚ್ಚು ಆಹಾರೋತ್ಪಾದನೆಯನ್ನು ಮಾಡತಕ್ಕ ವಿಷಯದಲ್ಲಿ ನಾನು ಸ್ವಲ್ಪ ಮಟ್ಟಿಗೆ ಹೇಳಬೇಕೆಂದಿದ್ದೇನೆ. ಹೈಬ್ರೀಡ್ ಜೋಳ, ಸಜ್ಜೆ ಮತ್ತು ಗೋನು ಜೋಳ ಇವುಗಳು ಈಗ ಎರಡು ವರ್ಷಗಳಿಂದ ಪ್ರಚಾರ ವಾಗುತ್ತಿದೆ. ಅಮೆರಿಕಾದಲ್ಲಿ ಈಗ 15 ವರ್ಷಗಳ ಹಿಂದೆ ಪ್ರಚಾರಮಾಡಿದ್ದರೆ ನಮ್ಮ ದೇಶದಲ್ಲಿ ಈಗ ಎರಡು ವರ್ಷಗಳಿಂದ ಪ್ರಚಾರವಾಗುತ್ತಿದೆ. ಆದರೆ ಕೆಲವು ಜನರು ಮಾತ್ರ ಇದರ ಪ್ರಯೋಗವನ್ನು ಮಾಡಿದ್ದಾರೆ. ಹೈಬ್ರೀಡ್ ಜೋಳ, ಗೋನು ಜೋಳ ಸಜ್ಜೆ ಈ ಬೆಳೆಗಳು ಯಾವ ತರಹ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುತ್ತವೆ ಎಂಬುದನ್ನು ನಾನು ಸಂಕ್ಷಿಪ್ತವಾಗಿ ತಿಳಿಸುತ್ತೇನೆ. ಒಂದು ಎಕರೆ ಜಮೀನಿನಲ್ಲಿ ನೀರು ಕಟ್ಟಿ ಸೈಂಟಿಫಿಕ್ಕಾಗಿ ವ್ಯವಸಾಯ ಮಾಡುವುದಾದರೆ 20-30 ಚೀಲ ಗೇನೂ ಜೋಳವನ್ನು ಬೆಳೆಯಬಹುದು, ಮುಧೋಳ, ಜಮಖಂಡಿ ಈ ಪ್ರದೇಶದಲ್ಲಿ ಈ ತರಹ ಬೆಳೆಯನ್ನು ಬೆಳೆಯುವುದರಿಂದ ಉತ್ಪತ್ತಿ ಜಾಸ್ತಿಯಾಗಿದೆ, ಎಂದು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಇದು ಮೂರು ತಿಂಗಳಲ್ಲಿಯೇ ಫಸಲು ಸಿಕ್ಕುತ್ತದೆ. ನಾರ್ಮಲ್ ಜೋಳವನ್ನು ಬೆಳೆಯಬೇಕಾದರೆ 5-6 ತಿಂಗಳು ಬೇಕಾಗುತ್ತದೆ. ಡ್ರೈಕಂಡೀಷನ್ ಇರುವ ಜಮೀನಿನಲ್ಲಿ 20ಚೀಲ ಜೋಳವನ್ನು ಬೆಳೆಯುವುದಕ್ಕೆ ಅವಕಾಶವಿರುವಾಗ ಯಾವಾಗಲೂ ಹಳೆಯ ಪದ್ಧತಿಯನ್ನೇ ಅನುಸರಿಸಿ ಜಮೀನಿನಲ್ಲಿ ಬತ್ತವನ್ನು ಬೆಳೆಯುತ್ತಿದ್ದಾರೆ. ಜಮೀನಿನಲ್ಲಿ ತೆಂಗು ಹಾಕಬೇಕು, ಕಬ್ಬು ಬೆಳೆಯಬೇಕು ಎನ್ನುವ ಪದ್ಧತಿಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬೇಕು. ಒಂದು ಸಾರಿ ಬತ್ತ ಹಾಕಿದರೆ 5 ತಿಂಗಳು ಸಮರ್ಪಕವಾಗಿ ನೀರು ಕೊಡಬೇಕಾಗುತ್ತದೆ. 5 ಎಕರೆ ಬತ್ತದ ಬೆಳೆಗೆ ಕೊಡತಕ್ಕ ನೀರನ್ನು 15-20 ಎಕರೆ ಜೋಳದ ಬೆಳೆಗೆ ಹಾಸಿಸಬಹುದು. ಗೌನು ಜೋಳ ಮತ್ತು ಸಜ್ಜೆಗೆ ಅಷ್ಟು ಹೆಚ್ಚು ನೀರು ಬೇಕಾಗುವುದಿಲ್ಲ. ಹೈಬ್ರೀಡ್ ಜೋಳದ ಬೀಜವನ್ನು ಉಪಯೋಗಿಸುವುದರಿಂದ ಸಾಮಾನ್ಯ ಜೋಳದ ಉತ್ಪತ್ತಿಗಿಂತ ಎರಡು ಪಟ್ಟು, ಮೂರು ಪಟ್ಟು ನಾಲ್ಕು ಪಟ್ಟು 5 ಪಟ್ಟುಗಳವರೆಗೂ ಉತ್ಪನ್ನ ಹೆಚ್ಚಾಗುತ್ತದೆ. ಆದರೆ ಇಲ್ಲಿ ಬೀಜಗಳ ಒಂದು ತೊಂದರೆ ಬರುತ್ತಿದೆ. ಇಲ್ಲಿ ಸೀಡ್ಸ್ ಏನು ಬೆಳೆಯುತ್ತಾರೆಯೋ ಅವು ಮಲ್ಟಿಪ್ಲೈ ಆಗುವುದಿಲ್ಲ. ಆದ್ದರಿಂದ ಸೀಡ್ಸ್ ಅನ್ನು ಬೇರೆ ಸೀಡ್ಸ್ ಪ್ರಾಜೆಕ್ಟುಗಳಿಂದ ತರಿಸಬೇಕಾದ ತೊಂದರೆಗಳು ಬರುತ್ತವೆ. ಕೆಲವು ರೈತರು ಸೀಡ್ಸ್ ಅನ್ನು ಹೊರಗಡೆಯಿಂದ ಕೊಯಮತ್ತೂರು ಮುಂತಾದ ಪ್ರದೇಶಗಳಿಂದ ತಂದು ಪ್ರಯೋಗ ಮಾಡಿ ಚೆನ್ನಾಗಿ ಬೆಳೆಯುತ್ತಾರೆ. ಇದರಿಂದ ಪ್ರತಿಯೊಬ್ಬ ರೈತರಿಗೂ ಅನುಕೂಲವಾಗುತ್ತದೆ. ಚೆನ್ನಾಗಿ, ಜಾಗ್ರತೆಯಾಗಿ ಬೆಳೆಯುತ್ತದೆ. ಅದಕ್ಕೋಸ್ಕರ ಬೀಜದ ವಿಷಯದಲ್ಲಿ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ ರಿಸರ್ಚ್ ಸ್ಟೇಷನ್‌ನಲ್ಲಿ ಆದಷ್ಟು ಬೇಗನೇ ಎಂದರೆ ಖಚಿತವಾಗಿ ಮುಂದಿನ ವರ್ಷ ಜೂನ್ ತಿಂಗಳಲ್ಲಿ ಬೀಜಗಳನ್ನು ನಮ್ಮಲ್ಲಿರತಕ್ಕ ರಿಸರ್ಚ್ ಸ್ಟೇಷನ್‌ನಲ್ಲಿ ತಯಾರು ಮಾಡಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದರಲ್ಲಿ ವರ್ಷಕ್ಕೆ ಎರಡು ಬೆಳೆಗಳನ್ನು ಸುಲಭವಾಗಿ ತೆಗೆದುಕೊಳ್ಳಬಹುದು. ಬಹಳ ಜನ ರೈತರು ಬೀಜಗಳು ಬೇಕೆಂದು ಕೇಳುತ್ತಾರೆ. ಆದ್ದರಿಂದ ಅದನ್ನು ಒದಗಿಸುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ನೀರಾವರಿ ಇರತಕ್ಕ ಪ್ರದೇಶಗಳಲ್ಲಿ ಈ ಬೀಜಗಳನ್ನು ಉಪಯೋಗಿಸುವುದರಿಂದ ಬಹಳ ಅನುಕೂಲವಾಗುತ್ತದೆ. ತುಂಗಭದ್ರಾ ಪ್ರಾಜೆಕ್ಟ್ ಕೆಳಗಡೆ ಡ್ರೈಕಂಪೆಟ್ ಪ್ರದೇಶವಿದೆ. ಅವರಿಗೆ ಈ ಬೀಜಗಳನ್ನು ಒದಗಿಸಿದರೆ ಅನುಕೂಲವಾಗುತ್ತದೆ. ಅದ್ದರಿಂದ ಆ ಪ್ರದೇಶದ ರೈತರಿಗೆ ರಿಸರ್ಚ್ ಸ್ಟೇಷನ್‌ನಲ್ಲಿ ತಯಾರುಮಾಡಿದಂತಹ ಜೋಳ, ಸಜ್ಜೆ ಈ ಬೀಜಗಳನ್ನು ಒದಗಿಸುವುದಕ್ಕೆ ಪ್ರಯತ್ನಮಾಡಬೇಕೆಂದು ನಾನು ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಹಿಂದಿನ ವಕ್ಕಲುತನದ ಪದ್ಧತಿಯನ್ನು ಬಿಟ್ಟು ಆಧುನಿಕ ಪದ್ಧತಿಯ ಬೇಸಾಯವನ್ನು ಮಾಡತಕ್ಕವರು ಕೆಲವೇ ಜನ ಇದ್ದಾರೆ. ವಕ್ಕಲುತನದ ವಿಷಯದಲ್ಲಿ ರೈತರ ಮಕ್ಕಳಿಗೆ ತರಪೇತಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಅದಕ್ಕೋಸ್ಕರ ಟ್ರೈನಿಂಗ್ ಸ್ಕೂಲುಗಳನ್ನು ಅಲ್ಲಲ್ಲೇ ತೆರೆಯಬೇಕು ರೈತರಲ್ಲಿ ಚಿಕ್ಕವರು ಮತ್ತು ದೊಡ್ಡವರು ಎಲ್ಲರಿಗೂ ಕೂಡ ಆದುನಿಕ

(ಶ್ರೀಮತಿ ಬಸವರಾಜೇಶ್ವರಿ)

ಪದ್ಧತಿಯ ವ್ಯವಸಾಯದ ವಿಷಯದಲ್ಲಿ ತರಪೇತಿಯನ್ನು ಕೊಡಬೇಕು. ಜಮಖಂಡಿಯಲ್ಲಿ ರೈತರ ಮಕ್ಕಳು ಒಂದು ಸೀಡ್ ಗ್ರೋಯರ್ಸ್ ಸೊಸೈಟಿಯನ್ನು ಮಾಡಿಕೊಂಡು ಅವರು ಅಲ್ಲಿ ನೂರು ಎಕರೆಗಳಲ್ಲಿ ಬೀಜವನ್ನು ಉತ್ಪತ್ತಿ ಮಾಡಿ ಅವರು ರೈತರಿಗೆ ಕೊಡುತ್ತಿದ್ದಾರೆ. ಅವರು ಅಲ್ಲಿ ಉತ್ಪತ್ತಿ ಮಾಡತಕ್ಕಂಥ ಬೀಜದಲ್ಲಿ ಒಂದು ಎಕರೆಗೆ 3 ಸಾವಿರ ರೂಪಾಯಿಗಳ ಆದಾಯ ಬರುತ್ತಿದೆ, ಎಂದು ನಾನು ಕೇಳಿದ್ದೇನೆ. ನಮ್ಮಲ್ಲಿಯೂ ಸಹ ಏತಕ್ಕೆ ಆ ರೀತಿ ಮಾಡಬಾರದು ? ಅದರ ಟೆಕ್ನಿಕ್ ಏನಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಅದಕ್ಕೋಸ್ಕರ ತರಪೇತಿ ಕೇಂದ್ರಗಳನ್ನು ತೆರೆದು ರೈತರಿಗೆ ತರಪೇತಿಯನ್ನು ಕೊಡಬೇಕು.

ಇನ್ನು ಇನ್‌ಸಿಕ್ಟಿಸೈಡ್ ವಿಷಯದಲ್ಲಿ ಹೇಳುವುದಾದರೆ, ಇದರಲ್ಲಿ ಅನೇಕ ಕ್ರಮಗಳಿವೆ. ಬೆಳೆಗಳಿಗೆ ಬರತಕ್ಕಂಥ ರೋಗಗಳಿಗೆ ಸರಿಯಾದ ಔಷಧಿಯನ್ನು ಉಪಯೋಗಿಸದೆ ಹೋದರೆ ಬೆಳೆಗಳು ಯಾರಿಗೂ ಕೈಗೆ ಸಿಕ್ಕುವುದಿಲ್ಲ. ಇನ್‌ಸಿಕ್ಟಿಸೈಡ್ಸ್‌ಗೋಸ್ಕರ ರೈತನಿಗೆ ಕೊಡುತ್ತಿದ್ದ ಸಬ್ಸಿಡಿಯನ್ನು ಮುಂದಿನ ವರ್ಷದಿಂದ ಸರ್ಕಾರದವರು ಕೊಡುವುದಿಲ್ಲ ಎಂಬ ಕೂಗನ್ನು ನಾನು ಕೇಳಿದ್ದೆನೆ. ಆದ್ದರಿಂದ ಇನ್‌ಸೆಕ್ಟಿಸೈಡ್ಸ್‌ಗೋಸ್ಕರ ಸರ್ಕಾರದವರು ಕೊಡುತ್ತಿದ್ದಂತಹ ಸಬ್ಸಿಡಿಯನ್ನು ಮುಂದುವರಿಸದೇ ಹೋದರೆ ರೈತರು ಔಷಧಿಯನ್ನು ತಂಮ ಬೆಳೆಗಳಿಗೆ ಹೊಡೆಯುವುದಕ್ಕೆ ಸಾಧ್ಯವಿಲ್ಲ. ಈ ದೃಷ್ಟಿಯಿಂದ ರೈತನಿಗೆ ಕೊಡುತ್ತಿದ್ದ ಸಬ್ಸಿಡಿಯನ್ನು ನಿಲ್ಲಿಸಬಾರದು ಎಂದು ನಾನು ಹೇಳುತ್ತೇನೆ.

ಇನ್ನು ತುಂಗ ಭದ್ರಾ ನೀರಾವರಿ ಪ್ರದೇಶದಲ್ಲಿರುವ ಲೆಫ್ಟ್‌ಬ್ಯಾಂಕ್ ಕೆನಾಲ್ ಪ್ರದೇಶದಲ್ಲಿ 5½ ಲಕ್ಷ ಎಕರೆ ಜಮೀನು ಇದೆ. ಅಲ್ಲಿ ಸಿಂಧನೂರಿನ ಹತ್ತಿರ ಡ್ರೈಕಂವೆಟ್ ಕಲ್ಟಿವೇಷನ್ ಆಗತಕ್ಕ ವಿಶಾಲವಾದ ಬಯಲು ಪ್ರದೇಶವಿದೆ. ಅದನ್ನು ಸಾಗುವಾಡಿಲ್ಲ ಎನ್ನುವ ಕೂಗು ಎಲ್ಲರಿಗೂ ಗೊತ್ತಿದೆ. ಅಲ್ಲಿ ಒಂದು ಸೀಡ್ ಫಾರಮ್ ಮಾಡುತ್ತೇವೆಂದು ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಅದನ್ನು ಇನ್ನೂ ಅಲ್ಲಿ ಮಾಡಿಲ್ಲ. ಆದ್ದರಿಂದ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಅದನ್ನು ಕಾರ್ಯಗತ ಮಾಡಿದರೆ ಅಲ್ಲಿ ಹಾಳಾಗುತ್ತಾ ಇರತಕ್ಕ ಜಮೀನಿನಲ್ಲಿ ಉತ್ಪತ್ತಿ ಮಾಡಬಹುದು.

ಇನ್ನು ಫರ್ಟಿಲೈಜರ್ಸ್ ವಿಷಯದಲ್ಲಿ ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಫರ್ಟಿಲೈಜರ್ಸ್ ಮತ್ತು ಫಾಸ್ಫೇಟ್ ಸರಿಯಾಗಿ ಸಿಕ್ಕುತ್ತಿಲ್ಲ. ಆದ್ದರಿಂದ ಅದನ್ನು ಇಂಡಿಯಾ ಸರ್ಕಾರದಿಂದ ತರಿಸುವುದಕ್ಕೆ ಪ್ರಯತ್ನ ಮಾಡಬೇಕು. ಈಗ ನಮ್ಮಲ್ಲಿ ಏನು ಮೆನ್ಯೂರ್ ಉತ್ಪತ್ತಿಯಾಗುತ್ತಿದೆಯೋ ಅದನ್ನು ಇನ್ನೊಂದು ಕಡೆಗೆ ಹೋಗದಂತೆ ತಡೆಗಟ್ಟಬೇಕು. ತುಂಗಭದ್ರಾ ಏರಿಯಾದಲ್ಲಿರತಕ್ಕ ಹೊಸಪೇಟೆಯಲ್ಲಿ ತಯಾರಾಗತಕ್ಕ 7 ಲಕ್ಷ ಟನ್ ಮೆನ್ಯೂರ್ ಬೇರೆ ಕಡೆ ಹೋಗುತ್ತಿದೆ ಎಂದು ನಾನು ಕೇಳಿದ್ದೇನೆ. ಆದ್ದರಿಂದ ಅದು ಬೇರೆ ಸ್ಟೇಟಿಗೆ ಹೋಗದಂತೆ ತಡೆಗಟ್ಟಬೇಕು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಸ್ವಾಮಿ, ಈ ಸಂದರ್ಭದಲ್ಲಿ ಹೆಚ್ಚಾಗಿ ಆಹಾರ ಉತ್ಪತ್ತಿ ಮಾಡಬೇಕಾದ ಕಾರ್ಯಕ್ರಮದಲ್ಲಿ ಒಂದೆರಡು ವಿಷಯಗಳನ್ನು ಇಲ್ಲಿ ಹೇಳಬಯಸುತ್ತೇನೆ. ಹೆಚ್ಚು ಆಹಾರ ಬೆಳೆಯ ಬೇಕಾದರೆ ಭೂಮಿಯ ಸಾರ ಸಂರಕ್ಷಣೆ, ಬಿತ್ತನೆ, ಗೊಬ್ಬರ ಮತ್ತು ನೀರು ಸರಬರಾಜು ಇವು ಬಹು ಮುಖ್ಯವಾದವುಗಳು ಎಂದು ಈ ಸಭೆಯಲ್ಲಿ ನನ್ನ ಎಲ್ಲ ಸ್ನೇಹಿತರು ಈಗಾಗಲೇ ತಿಳಿಸಿದ್ದಾರೆ. ಆದರೆ ಎಷ್ಟುಮಟ್ಟಿಗೆ ಇವನ್ನು ಕಾರ್ಯರೂಪಕ್ಕೆ ತಂದಿದ್ದಾರೆಂದು ಇಲ್ಲಿ ಹೇಳುವುದಕ್ಕೆ ನನಗೆ ಬಹಳ ಸಂಕಟವಾಗುತ್ತದೆ. ಭೂಸಾರ ಸಂರಕ್ಷಣೆ ಕಾರ್ಯದಲ್ಲಿ ಕಳೆದ ಎರಡು ವರ್ಷಗಳಿಂದಲೂ ಸರಕಾರದವರು ಇಟ್ಟಿರತಕ್ಕ ಹಣದಲ್ಲಿ ಶೇಕಡಾ 20 ರಷ್ಟನ್ನು ಕೂಡ ಖರ್ಚು ಮಾಡಿಲ್ಲ. ಜಿಲ್ಲೆಯ ಮಟ್ಟದಲ್ಲಿ ಇರತಕ್ಕ ಕಮಿಟಿ ವರ್ಷಕ್ಕೆ ಒಂದು ಸಾರಿಯೂ ಕುಳಿತಿಲ್ಲ. ಅಧಿಕಾರಿಗಳೂ ಕೂಡ ಇದರ ಬಗ್ಗೆ ಸಾಕಷ್ಟು ಮುತುವರ್ಜಿ ವಹಿಸಿ ರೈತರಿಗೆ ಅನುಕೂಲಗಳನ್ನು ಮಾಡಿಯೂ ಕೊಡಲಿಲ್ಲ. ಇದನ್ನು ನೋಡಿದರೆ ಭೂಸಾರ ಸಂರಕ್ಷಣೆ ಮಾಡುವುದರಲ್ಲಿ ಸರಕಾರ ಎಷ್ಟುಮಟ್ಟಿಗೆ ಮುಂದುವರಿಯುತ್ತಿದೆ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ. ಇದು ಬಹು ಮುಖ್ಯ ಅಂಶ ಎಂದು ಎಲ್ಲರೂ ಹೇಳುತ್ತಾರೆ ಇದಕ್ಕೆ ಸರಕಾರ ಅಷ್ಟು ಗಮನ ಕೊಡುತ್ತಿಲ್ಲ ಕೊಟ್ಟಿರುವ ಹಣವನ್ನಾದರೂ ಸರಿಯಾದರೀತಿಯಲ್ಲಿ ಇದುವರೆಗೆ ಖರ್ಚು ಮಾಡಿದ್ದರೆ ಅದರಿಂದಲೇ ಒಂದಕ್ಕೆರಡರಷ್ಟು ಬೆಳೆ ಬೆಳೆಯಬಹುದಾಗಿತ್ತು. ಇಟ್ಟಿರತಕ್ಕ ಹಣವನ್ನಾದರೂ ಸರಿಯಾದ ವ್ಯವಸ್ಥೆ ಮಾಡಿ ಖರ್ಚು ಮಾಡಬೇಕಾಗಿದೆ.

ಇನ್ನು ಗೊಬ್ಬರದ ವಿಚಾರದಲ್ಲಿ ಪ್ರತಿಯೊಬ್ಬರೂ ಕೂಡ ಗೊಬ್ಬರ ಹಾಕಿದರೇನೆ ಬೆಳೆ ಬರುತ್ತದೆ ಎಂದು ಹೇಳಿದರು. ಅದು ನಮಗೂ ಅರ್ಥವಾಗುತ್ತದೆ. ಅದಕ್ಕೆ ತಕ್ಕ ಹಾಗೆ ಮಳೆ ಬಂದರೂ

ಬೆಳೆ ಬರುತ್ತದೆ. ಈ ನಮ್ಮ ಬೆಂಗಳೂರು ನಗರದಲ್ಲಿಯೇ ಸುಮಾರು 40 ಸಾವಿರ ದನಕರುಗಳಿವೆ. ಇವು ಒಂದು ದಿನದಲ್ಲಿ ಒಂದು ದನ ಎರಡು ಕೆ. ಜಿ. ಯಷ್ಟು ಸಗಣಿ ಹಾಕುತ್ತದೆ. ಎಂದರೆ ಸುಮಾರು 80,000 ಕೆ. ಜಿ. ಗಳಷ್ಟು ಸಗಣಿ ಗೊಬ್ಬರ ಸಿಗುತ್ತದೆ. ಆದರೆ ಈ ಸಗಣಿಯನ್ನು ಗೊಬ್ಬರ ಮಾಡದೆ ಬೆರಣಿಯಾಗಿ ತಟ್ಟಿಕೊಂಡು ಅದನ್ನು ಒಣಗಿಸಿ ಸೌದೆಯಂತೆ ಜನ ಉಪಯೋಗಿಸುತ್ತಿದ್ದಾರೆ. ಮಾನ್ಯ ಮಂತ್ರಿಗಳ ಮನೆಯಲ್ಲಿರುವ ದನಗಳ ಸಗಣಿಯನ್ನು ಕೂಡ ಬೆರಣಿಯಾಗಿ ತಟ್ಟುವುದನ್ನು ನಾನು ನೋಡಿದ್ದೇನೆ. ನಾವೇನೋ ಬಾಯಲ್ಲಿ ತತ್ವವನ್ನು ಹೇಳಬಹುದು, ಅದನ್ನು ಉಪಯೋಗಕ್ಕೆ ತರುವವರು ಯಾರು? ಪಾಲನೆ ಮಾಡುವವರು ಯಾರು? ಇನ್ನೊಂದು ಸರಕಾರದ ಗಮನಕ್ಕೆ ಬಂದಂತೆ ಕಾಣುವುದಿಲ್ಲ. ನಮ್ಮ ಈ ನಗರದಲ್ಲೇ ಸಿಗುತ್ತಿರುವ ದನಗಳ ಸಗಣಿಯನ್ನೇ ಸರಿಯಾದ ರೀತಿಯಲ್ಲಿ ಗೊಬ್ಬರ ಮಾಡಿ ಕೊಳ್ಳಲು ಯಾರಾದರೂ ಪ್ರಯತ್ನ ಮಾಡಿದ್ದಾರೆಯೇ ಎಂದರೆ ಯಾರೂ ಕೂಡ ಅದರ ಕಡೆಗೆ ಗಮನ ಕೊಡುತ್ತಿಲ್ಲ. ನನ್ನ ಆಸೆ, ಇದರ ಕಡೆಗೆ ಸರಕಾರವಾದರೂ ಈಗಲಾದರೂ ಗಮನಕೊಡಬೇಕೆಂದು ಸೂಚಿಸುತ್ತೇನೆ.

ಇನ್ನು ನಮ್ಮ ಬೆಂಗಳೂರು ನಗರದ ಒಳಚರಂಡಿ ವ್ಯವಸ್ಥೆಯಿಂದ ಊರಿಂದಾಚೆಗೆ ಲಕ್ಷ ಲಕ್ಷ ಟನ್ನುಗಳಷ್ಟು ಗೊಬ್ಬರ ಕೆರೆಗಳಿಗೆ ಅನ್ಯಾಯವಾಗಿ ಹೋಗಿ ಹಾಳಾಗುತ್ತಿದೆ. ಇದನ್ನು ಯಾರಾದರೂ ಹೋಗಿ ನೋಡಿದ್ದಾರೆಯೇ? ಇದರ ಬಗ್ಗೆ ಮುನಿಸಿಪಾಲಿಟಿಯವರು ವಾಟರ್ ಸಪ್ಲೈ ಬೋರ್ಡಿಗೆ ಈ ಅಧಿಕಾರವನ್ನು ವಹಿಸಿರುವುದರಿಂದ ಅವರು ಕೂಡ ಇದರ ಬಗ್ಗೆ ಸಾಕಷ್ಟು ಗಮನ ಕೊಟ್ಟಂತೆ ತೋರುವುದಿಲ್ಲ. ಇದರಿಂದ ಬರುವ ಗೊಬ್ಬರವನ್ನು ಸರಕಾರ ಸರಿಯಾದ ವ್ಯವಸ್ಥೆ ಮಾಡಿ ರೈತರು ತೆಗೆದುಕೊಂಡು ಹೋಗಬಹುದು ಎಂದು ಹೇಳಿದರೆ ಯಾರಾದರೂ ತೆಗೆದುಕೊಂಡು ಹೋಗುತ್ತಾರೆ. ಅದಕ್ಕೂ ಅಧಿಕಾರದಲ್ಲಿರುವವರು ಅವಕಾಶ ಕೊಡುತ್ತಿಲ್ಲ. ಈಗಲಾದರೂ ಸರಕಾರ ರೈತರು ತೆಗೆದುಕೊಂಡು ಹೋಗಲು ಅವಕಾಶ ಕೊಡಿ ಎಂದು ಸಲಹೆ ಮಾಡುತ್ತೇನೆ. ಇಲ್ಲವೇ ನಿಮ್ಮ ವ್ಯವಸಾಯ ಇಲಾಖೆಯವರೇ ಕಂಪೋಸ್ಟು ಗೊಬ್ಬರ ಮಾಡಿ ಎಲ್ಲ ರೈತರಿಗೂ ಹಂಚುವ ವ್ಯವಸ್ಥೆಯನ್ನಾದರೂ ಮಾಡಿ ಎಂದು ಸಲಹೆ ಮಾಡುತ್ತೇನೆ. ಇಲಾಖೆಯಲ್ಲಿ ಅಧಿಕಾರದಲ್ಲಿತಕ್ಕವರು ಇದರ ಬಗ್ಗೆ ಶ್ರದ್ಧೆವಹಿಸಿ ಕೆಲಸ ಮಾಡುವವರು ಇಲ್ಲ. ಅವರು ವ್ಯವಸಾಯ ಮಾಡುವವರಿಗೆ ಸಾಕಷ್ಟು ಗೊಬ್ಬರ ಕೊಡಬೇಕೆಂದು ಸಲಹೆ ಮಾಡುತ್ತಿಲ್ಲ. ಹಳ್ಳಿಗಳಲ್ಲಿ ಎನ್. ಇ. ಎಸ್. ಎಂದೇನೋ ಇದೆ. ಅಲ್ಲಿ ತಾಲ್ಲೂಕು ಬೋರ್ಡು ಎಂದೂ ಇದೆ. ಆದರೆ ಅಲ್ಲಿರುವ ತಾಲ್ಲೂಕು ಬೋರ್ಡು ಅಧಿಕಾರಿಯನ್ನು ಶಿಕ್ಷಿಸಲು ಅಲ್ಲಿನ ಅಧ್ಯಕ್ಷರಿಗೆ ಅಧಿಕಾರವಿಲ್ಲ. ಅಧಿಕಾರವೆಲ್ಲಾ ಸರಕಾರಕ್ಕಿದೆ. ಅವರುಗಳು ಸರಕಾರಕ್ಕೆ ಕೊಡುವ ರಿಪೋರ್ಟುಗಳೆಲ್ಲಾ ಬರೀ ಸುಳ್ಳು ರಿಪೋರ್ಟುಗಳೇ ಆಗಿರುತ್ತವೆ. ಹಳ್ಳಿಗಳಲ್ಲಿ ಗೊಬ್ಬರ ದನಗಳಿಂದ ಬರುತ್ತದೆ ಅದನ್ನು ಹೇಗೆ ಕಂಪೋಸ್ಟು ಗೊಬ್ಬರ ಮಾಡಬೇಕೆಂದು ಜನರಿಗೆ ಸರಿಯಾದ ತಿಳುವಳಿಕೆ ಕೊಡುವ ಅಧಿಕಾರಿಗಳಿಲ್ಲ. ಶೇಕಡಾ 25 ರಷ್ಟು ಭಾಗ ಇಲ್ಲಿನ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇಂತಹ ಅಧಿಕಾರಿಗಳ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಲು ತಾಲ್ಲೂಕು ಬೋರ್ಡಿನಲ್ಲಿರುವ ಅಧ್ಯಕ್ಷರಿಗೆ ಅಧಿಕಾರ ಇಲ್ಲ. ಆಡಳಿತವನ್ನೇನೋ ವಿಕೇಂದ್ರೀಕರಣ ಮಾಡಬೇಕೆಂದು ಇದ್ದರೂ ಸಾರ್ವಜನಿಕರ ಕೆಲಸ ಮಾಡಲು ಈಗ ಇರುವ ವ್ಯವಸ್ಥೆಯಂತೆ ಮಾಡಲು ಸಾಧ್ಯವಿಲ್ಲ ಎಂದು ನನ್ನ ಅನುಭವದಿಂದ ಇಲ್ಲಿ ಹೇಳುತ್ತೇನೆ.

ಇನ್ನು ನಮ್ಮ ದೇಶದಲ್ಲಿ ಜಪಾನ್ ಮಾದರಿಯಲ್ಲಿ ಭತ್ತವನ್ನು ಬೆಳೆ ಮಾಡಬೇಕು ಎಂದು ಹೇಳಿ ಹತ್ತು ಹತ್ತು ಇಂಚುಗಳಷ್ಟು ದೂರದಲ್ಲಿ ಸಸಿಗಳನ್ನು ಹಾಕಬೇಕು ಎಂದು ಬಾಯಲ್ಲಿ ಹೇಳುತ್ತಾರೆಯೇ ಹೊರತು ಅದನ್ನು ಸರಿಯಾಗಿ ಒಂದು ಜಿಲ್ಲೆಯಲ್ಲಾದರೂ ಯಾರಾದರೂ ಒಂದು ಸಾವಿರ ಎಕರೆಗಳಲ್ಲಿ ಹಾಕಿ ಪ್ರಯೋಗ ಮಾಡಿ ತೋರಿಸಿದ್ದಾರೆಯೇ? ಹಾಗೇನಾದರೂ ಮಾಡಿದ್ದರೆ ನಾವೂ ಕೂಡ ನೋಡಿ ಇಲ್ಲಿ ಉತ್ತರ ಕೊಡ ಬಹುದಾಗಿತ್ತು. ಈ ಬಿತ್ತನೆಯನ್ನು ಹೇಗೆ ಉಪಯೋಗಿಸಬೇಕು ಮತ್ತು ಇದಕ್ಕೆ ಯಾವ ಯಾವ ರೀತಿಯಾದ ಔಷಧಿಗಳನ್ನು ಹಾಕಿ ಉಪಯೋಗ ಮಾಡಿದರೆ ಎಷ್ಟು ಉಪಯೋಗವಾಗುತ್ತದೆ ಎನ್ನುವುದನ್ನು ಸರಿಯಾಗಿ ರೈತರಿಗೆ ತಿಳಿಸುವ ಜನ ಇಂದು ನಮ್ಮ ಇಲಾಖೆಯಲ್ಲಿ ನೂರಕ್ಕೆ ಐದು ಜನರು ಕೂಡ ಇಲ್ಲ. ಇರುವವರು ಬರೀ ಸುಳ್ಳು ವರದಿಗಳನ್ನು ಕಳುಹಿಸುತ್ತಿದ್ದಾರೆ. ಆರೀತಿಯಾಗಿ ಜನಕ್ಕೆ ಸರಿಯಾಗಿ ತಿಳುವಳಿಕೆ ಕೊಡುವ ಜನ ಇದ್ದರೆ ನಮ್ಮ ದೇಶ ವ್ಯವಸಾಯದಲ್ಲಿ ಬಹಳ ಅಭಿವೃದ್ಧಿಗೆ ಬರುತ್ತಿತ್ತು. ಹಾಗೆ ರೀ ಆರ್ಗನೈಜು ಮಾಡುವಂತ ಅಧಿಕಾರಿಗಳು ನಮ್ಮಲ್ಲಿಲ್ಲ. ಅಲ್ಲದೆ ನಮ್ಮಲ್ಲಿರುವ ಅಧಿಕಾರಿಗಳು ಹಳ್ಳಿಗಳಲ್ಲಿ ಕಂಪೋಸ್ಟು ಗೊಬ್ಬರ ಹೇಗೆ ಮಾಡುತ್ತಿದ್ದೇವೆ ಎನ್ನುವುದನ್ನು ತೋರಿಸಲು ಅಧಿಕಾರಿಗಳು ಬಂದಾಗ ತೋರಿಸುತ್ತಾರೆ. ಅದು ಹೇಗಿರುತ್ತದೆ ಎಂದರೆ, ಕೆಳಗೆ ಮೇರೆ ಮಣ್ಣು ಮುಚ್ಚಿ ತೋರಿಸುವ ವ್ಯವಸ್ಥೆಯನ್ನು ನಾವೂ ನೋಡಿದ್ದೇವೆ. ಗ್ರಾಮ ಪಂಚಾಯತಿಗಳವರೇ ಆಗಲೀ ಅಲ್ಲಿರುವ ವಿಲೇಜು ಲೆವಲ್ ವರ್ಕರುಗಳೇ ಆಗಲಿ ರೈತಾಪಿ ಜನಕ್ಕೆ ಕಂಪೋಸ್ಟು ಗೊಬ್ಬರ ಹೇಗೆ ತಯಾರು ಮಾಡುವುದು ಎನ್ನುವುದನ್ನು ಸರಿಯಾಗಿ ತೋರಿಸುತ್ತಿರುವವರು ನಮ್ಮದೇಶದಲ್ಲಿ ಇಲ್ಲ. ಇದು ಬಹಳ ಅನ್ಯಾಯ. ಯಾವ ಊರಿನಲ್ಲೇ

(ಶ್ರೀ ಜಿ. ರಾಮೇಗೌಡ)

ನೋಡಲಿ ಕಾಂಪೋಸ್ಟು ಗೊಬ್ಬರವನ್ನು ಸರಿಯಾಗಿ ಮಾಡುತ್ತಿಲ್ಲ. ಇಂತಹ ಗೊಬ್ಬರವನ್ನು ಒಂದು ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷ ಟನ್ನುಗಳಷ್ಟು ಹಾಕಿದ್ದರೆ ನಮ್ಮಲ್ಲಿ ಆಹಾರಧಾನ್ಯ ಹೆಚ್ಚಾಗಿ ಉತ್ಪತ್ತಿಯಾಗಲು ಅವಕಾಶ ಇತ್ತು. ಆ ರೀತಿ ಮಾಡದೆ ಗೊಬ್ಬರವನ್ನೆಲ್ಲಾ ದುರುಪಯೋಗ ಮಾಡುತ್ತಿದ್ದಾರೆ. ಹೀಗೆ ದುರುಪಯೋಗಮಾಡುತ್ತಿರುವವರ ಮೇಲೆ ತಕ್ಕ ಕ್ರಮಗಳನ್ನು ತೆಗೆದು ಕೊಳ್ಳಬೇಕಾದುದು ಅವಶ್ಯಕವಾಗಿದೆ. ಇದರ ಕಡೆಗೆ ಗಮನ ಕೊಡಬೇಕು.

ಕೆರೆಕಟ್ಟೆಗಳ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ಈಗ್ಗೆ ಮೂರು ವರ್ಷಗಳ ಹಿಂದೆ ಕೆರೆ ಕೆಲಸಗಳಿಗಾಗಿ ಕಂಟ್ರಾಕ್ಟುದಾರರಿಗೆ ವಹಿಸಿದ್ದರೂ ಕೂಡ ಅವುಗಳ ಕೆಲಸಗಳು ಇನ್ನೂ ಪೂರೈಸದೇ ಹಾಗೇ ಉಳಿದಿವೆ. ಹೀಗೆ ಕೆರೆ ಕೆಲಸಗಳು ಅರ್ಧದಲ್ಲೇ ಉಳಿದಿರುವಂತಹ ಕೆರೆ ಗಳು ಸುಮಾರು ಒಂದು ಸಾವಿರ ಕೆರೆಗಳಿವೆ. ಇದನ್ನೆಲ್ಲಾ ದುರಸ್ತು ಮಾಡಿದ್ದರೆ ಇನ್ನೂ ಒಂದು ಲಕ್ಷಟನ್ನುಗಳಷ್ಟು ಆಹಾರದವಸಗಳನ್ನು ಉತ್ಪತ್ತಿ ಮಾಡಬಹುದಾಗಿತ್ತು. ಅಲ್ಲದೆ ಯಾವ ಕಂಟ್ರಾಕ್ಟರುಗಳಿಗೆ ಕೆಲಸವನ್ನು ವಹಿಸಲಾಗಿತ್ತೋ ಅವರು ಸಕಾಲದಲ್ಲಿ ಕೆಲಸಗಳನ್ನು ಮುಗಿಸದೇ ಇದ್ದರೆ ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಅವರಿಂದ ಕೆಲಸಗಳು ಆಗದೇ ಇರುವುದರಿಂದ ಇಷ್ಟು ನಷ್ಟವಾಗುತ್ತಿದೆ. ಇದರ ಕಡೆಗೆ ಗಮನ ಕೊಡಬೇಕು.

ಇನ್ನು 20 ಸಾವಿರ ರೂಪಾಯಿಗಳಷ್ಟು ಎಸ್ಟಿಮೇಟು ಆಗಿರುವ ಕೆಲಸಗಳನ್ನು ಆಯಾ ಜಿಲ್ಲೆ ಯಲ್ಲಿರುವ ಎಕ್ಸಿಕ್ಯೂಟೀವ್ ಇಂಜನೀಯರುಗಳೇ ಅದನ್ನು ಮಂಜೂರು ಮಾಡುವ ಅಧಿಕಾರ ಕೊಡ ಬೇಕು. ಈಗ ಇಂತಹ ಕೆಲಸಗಳ ಮಂಜೂರತಿಗೆ ಸರಕಾರಕ್ಕೇ ಬರಬೇಕಾಗಿದೆ. ಇದರಿಂದ ಕೆಲಸ ಗಳಾಗಲು ಬಹಳ ನಿಧಾನವಾಗುತ್ತದೆ. ಮತ್ತು ಜನಗಳಿಗೂ ಬಹಳ ತೊಂದರೆಯಾಗುತ್ತದೆ, ಆದುದರಿಂದ ಸಣ್ಣ ಸಣ್ಣ ನೀರಾವರಿ ಯೋಜನೆಗಳು 20 ಸಾವಿರ ರೂಪಾಯಿಗಳಿಗೆ ಒಳಪಟ್ಟಿದ್ದರೆ ಅದನ್ನು ಆಯಾ ಜಿಲ್ಲೆಯಲ್ಲಿರುವ ಎಕ್ಸಿಕ್ಯೂಟೀವ್ ಇಂಜನೀಯರುಗಳೇ ಮಂಜೂರು ಮಾಡುವುದಕ್ಕೆ ಸರಕಾರದವರು ಅವಕಾಶ ಮಾಡಿಕೊಡಬೇಕು. ಆ ರೀತಿಯಾಗಿ ಸರಕಾರ ಮಾಡಲೇ ಬೇಕು ಇಲ್ಲದೇ ಇದ್ದರೆ ಇದರಿಂದ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ಸರಕಾರ ಗಮನಕೊಡಬೇಕು.

ಶ್ರೀ ಎಫ್. ಎಸ್. ತಾವರೆ (ಷಿಗ್ಗಾಂವ್).—ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿವಸ ಗಳಿಂದಲೂ ಅನೇಕ ಮಾನ್ಯ ಸದಸ್ಯರುಗಳು ಆಹಾರಧಾನ್ಯದ ವಿಚಾರವಾಗಿ ಇಲ್ಲಿ ಬಹಳವಾಗಿ ಮಾತನಾಡಿದ್ದಾರೆ. ನಾನು ಮಾತನಾಡಬೇಕೋ ಬೇಡವೋ ಎಂದು ಇದ್ದೆ. ಅನಿವಾರ್ಯವಾಗಿ ಇಲ್ಲಿ ಮಾತನಾಡುತ್ತಿದ್ದೇನೆ. ಹಿಂದಿಯಲ್ಲಿ ಒಂದು ಗಾದೆ ಇದೆ; ಅದರಂತೆ ಈ ಎರಡು ದಿವಸ ಗಳಿಂದಲೂ ಮಾತನಾಡಿದಂತೆ ಇನ್ನು ಎರಡು ವರ್ಷಗಳು ಮಾತನಾಡಿದರೂ ಕೂಡ ಅದರಿಂದ ಹೆಚ್ಚು ಉಪಯೋಗವೇನೂ ಆಗಲಾರದು ಎಂದು ನನ್ನ ಅಭಿಪ್ರಾಯ. ಅನೇಕ ಸಾರಿ ಈ ಸಭೆಯಲ್ಲಿ ನಮ್ಮ ಮಿತ್ರರು ಹೇಳಿದಂತೆ ನಮಗೆ ಮುಖ್ಯವಾಗಿ ನೀರು, ಗೊಬ್ಬರ ಹಾಗೂ ಬೀಜಗಳು ಬೇಕು ಎಂದು ಹೇಳುತ್ತಿದ್ದಾರೆ. ಇದರ ಕಡೆಗೆ ಸರಕಾರದವರು ಇಲ್ಲಿಯವರೆಗೆ ಏನಾದರೂ ಯೋಚನೆ ಮಾಡಿದ್ದಾರೆಯೇ ಎಂದು ನೋಡುವಾಗ ಅದು ಒಂದು ದೊಡ್ಡ 'ಜೀರೋ' ಎಂದರೆ ಸೊನ್ನೆ ಎನ್ನುವಂತಹ ಒಂದು ನಿರ್ಣಯಕ್ಕೆ ನಾನು ಬಂದಿದ್ದೇನೆ. ಏಕೆಂದರೆ ಮಾತನಾಡುವಂತಹ ನಾವು ಯಾವುದನ್ನೂ ಇಲ್ಲಿಯವರೆಗೆ ಕಾರ್ಯರೂಪಕ್ಕೆ ತರುವಂತಹ ಯೋಜನೆಗಳನ್ನು ಮಾಡಿ ರೈತರಿಗೆ ಅನುಕೂಲ ಮಾಡಿ ಕೊಟ್ಟಿಲ್ಲ. ನಮ್ಮ ಆಡಳಿತ ಯಂತ್ರ ಇಂದು ಏನಿದೆ ಅದು ರೈತರಿಗೆ ಅಷ್ಟೇನೂ ಅನುಕೂಲಗಳನ್ನು ಮಾಡಿಲ್ಲ ಎಂದು ಕಳಕಳಿಯಿಂದ ಬಹಳ ಸಂಕಟದಿಂದ ಹೇಳಬೇಕಾಗಿದೆ. ಹೀಗೆ ಹೇಳಿದರೆ ಇದರಲ್ಲೇನೂ ತಪ್ಪಾಗಲಾರದು ಎಂದು ನನಗನಿಸುತ್ತದೆ. ಒಬ್ಬ ವ್ಯಕ್ತಿ ಒಳ್ಳೆಯ ಉತ್ತಮ ಆಹಾರಗಳನ್ನೇ ಅಂದರೆ ಗೋಧಿ, ತುಪ್ಪ ಮತ್ತು ಹಾಲು ಇಂಥ ಪದಾರ್ಥಗಳನ್ನೇ ಉಣ್ಣಬಹುದು. ಆದರೆ ಅವು ಜಠರದಲ್ಲಿ ಹೋದಾಗ, ಜಠರ ಸರಿಯಾಗಿ ತನ್ನ ಕೆಲಸವನ್ನು ಮಾಡದೆ ಹೋದರೆ ಅಂಥ ಉತ್ತಮ ಪದಾರ್ಥಗಳನ್ನು ತಿಂದ ವ್ಯಕ್ತಿಯೇನಾಗುತ್ತಾನೆ? ಹೊಟ್ಟೆ ದಪ್ಪನಾಗಿ ಅವನ ಕೈಕಾಲುಗಳು ಸಣ್ಣನಾಗುತ್ತವೆ. ಅದೇ ರೀತಿ ಈ ದಿವಸ ಸರ್ಕಾರದ ಹೊಟ್ಟೆ ದಪ್ಪನಾಗುತ್ತಿದೆ; ಕಾರ್ಯ ಮಾಡತಕ್ಕ ಕೈಕಾಲುಗಳು ಸಣ್ಣಗಾಗುತ್ತಿವೆ. ನಾವು ಈ ಕಾಯಿಲೆಯನ್ನು ಎಷ್ಟು ಬೇಗ ಪರಿಹಾರ ಮಾಡಿದರೆ ಅಷ್ಟೂ ಉತ್ತಮ, ಇಲ್ಲವಾದರೆ ಈ ಕಾಯಿಲೆ ಇರುವತನಕ ನಾವೇನೇ ಮದತ್ತು ಮಾಡಿ ದರೂ ನಮ್ಮ ಈ ಆಹಾರ ಸಮಸ್ಯೆ ಬಗೆಹರಿಯುವುದಿಲ್ಲ. ಆದುದರಿಂದ ನಾನು ಈ ದಿವಸ ಈ ಮಾನ್ಯ ಸಭೆಯಲ್ಲಿ ನಮ್ಮ ಮುಖ್ಯ ಮಂತ್ರಿಗಳಿಗೆ ಹೇಳಬಯಸುವುದೇನೆಂದರೆ, ಕಾರ್ಯಾಂಗದಲ್ಲಿರತಕ್ಕ ಜನ ರಿಗೆ ಅವರು ಏನು ಸೌಕರ್ಯಬೇಕಾದರೂ ಕೊಡಲಿ, ಅವರಿಗೆ ಕೊಡತಕ್ಕದ್ದನ್ನು ಬೇಡ ಎಂದು ನಾವುಗಳ್ಯಾರೂ ಅದಕ್ಕೆ ಅಡ್ಡಿಬರುವುದಿಲ್ಲ. ಆಡಳಿತದಲ್ಲಿ ಕೆಲಸಮಾಡಲು ಇರತಕ್ಕ ಜನರು ಕಾರ್ಯೋನ್ಮುಖರಾಗಬೇಕು. ಅದಾಗದಿದ್ದರೆ ನಾವು ಇಲ್ಲಿ ಎಷ್ಟೇ ಭಾಷಣಗಳನ್ನು ಮಾಡಿದರೂ

ನಮ್ಮ ಪ್ರಯತ್ನಗಳೆಲ್ಲವೂ ಬರೀ ಭಾಷಣದಲ್ಲೇ ಮುಕ್ತಾಯವಾಗುತ್ತವೆ, ಈ ವಿಚಾರಕ್ಕೆ ಸರ್ಕಾರ ಮುಖ್ಯ ಗಮನಕೊಡಬೇಕೆಂದು ನಾನು ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ. ಆ ಒಂದು ಕಾರ್ಯವಾಗದಿದ್ದರೆ ನಾವು ಮಾಡತಕ್ಕದ್ದೆಲ್ಲಾ ನಿಷ್ಪ್ರಯೋಜನವಾಗುತ್ತದೆ. ಆದುದರಿಂದ ಮುಖ್ಯವಾಗಿ ಇದಾಕಡೆಯ ಜನರಕಡೆ ಸರ್ಕಾರದವರು ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ. ನಾವು ಇಲ್ಲಿಯವರೆಗೂ ವ್ಯವಸಾಯದಲ್ಲಿ ಏನು ಪ್ರಗತಿಯನ್ನು ಸಾಧಿಸಿದ್ದೇವೆಂಬುದರ ಬಗ್ಗೆ ನಮ್ಮ ನೆರೆ ಪ್ರಾಂತ್ಯಗಳೊಂದಿಗೆ ಹೋಲಿಸಿದರೆ ಅದು ಗೊತ್ತಾಗುತ್ತದೆ. ನಾವು ಈ ಬಾಬಿನಲ್ಲಿ ಯಾವ ಮಟ್ಟದಲ್ಲಿದ್ದೇವೆಂಬುದು ತಿಳಿಯುತ್ತದೆ. ಮೈಸೂರು ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು 1905ರಲ್ಲೇ ತಯಾರಿಸಲಾಯಿತು. ಆಗ ಇದು ಇಡೀ ಇಂಡಿಯಾಕ್ಕೆ ಒಂದು ಹೆಸರುವಾಸಿಯನ್ನು ಗಳಿಸಿತು. ಆದರೆ ಈ ದಿವಸ ದೇಶದಲ್ಲಿರತಕ್ಕ ರೈತರಿಗೆ ಇದನ್ನು ಎಷ್ಟರಮಟ್ಟಿಗೆ ಪೂರೈಕೆ ಮಾಡಲಾಗಿದೆ ಎಂಬುದನ್ನು ಇದು ನಮ್ಮಲ್ಲಿ ಎಷ್ಟರಮಟ್ಟಿಗೆ ಬೆಳೆದಿದೆ ಎಂಬುದನ್ನು ವಿಚಾರ ಮಾಡುವುದಾದರೆ ನಮ್ಮ ರಾಜ್ಯದಲ್ಲಿ 24 ಸಾವಿರ ಪಂಪ್‌ಸೆಟ್‌ಗಳನ್ನು ಪೂರೈಕೆ ಮಾಡಲಾಗಿದೆ ಎಂದು ಸರ್ಕಾರದವರು ಹೇಳುತ್ತಿದ್ದರೂ ಒಂದೊಂದು ತಾಲ್ಲೂಕಿಗೆ 3 ಪಂಪ್‌ಸೆಟ್‌ಗಳನ್ನೂ ಕೂಡ ಪೂರೈಕೆ ಮಾಡುವುದಕ್ಕಾಗಿಲ್ಲ. ಈಗ ಸೇಲಂ ಜಿಲ್ಲೆ ಒಂದರಲ್ಲೇ ಒಂದೂವರೆ ಲಕ್ಷ ಪಂಪ್‌ಸೆಟ್‌ಗಳನ್ನು ಪೂರೈಕೆಮಾಡಿದ್ದಾರೆ. ಮದ್ರಾಸಿನಲ್ಲಿ 7 ಲಕ್ಷ ಪಂಪ್‌ಸೆಟ್‌ಗಳನ್ನು ಪೂರೈಕೆಮಾಡಲಾಗಿದೆ. ಮದ್ರಾಸಿನಲ್ಲಿ ವಿದ್ಯುಚ್ಛಕ್ತಿಯನ್ನು ತಯಾರಿಸಿದ್ದು ಈ ರಾಜ್ಯದಲ್ಲಿ ತಯಾರಾದ 20 ವರ್ಷಗಳ ನಂತರ ಅಲ್ಲಿ ಅದನ್ನು ತಯಾರಿಸಲಾಯಿತು. ಅಷ್ಟು ಅಲ್ಲಿ ಅದನ್ನು ತಡವಾಗಿ ತಯಾರಿಸಿದ್ದರೂ ಅಲ್ಲಿ ರೈತರಿಗೆ ಅದರಿಂದ ಆಗುತ್ತಿರುವ ಅನುಕೂಲತೆಯನ್ನು ನೋಡಿದರೆ ನಾವೆಲ್ಲರೂ ಒಂದು ಅಭಿಮಾನ ಅಥವಾ ಹೆಮ್ಮೆ ಪಡುವಂಥ ವಿಚಾರ ಅಲ್ಲಿ ನಡೆದಿದೆ. ಹಾಗೆ ಈ ದಿವಸ ಪರದೇಶಕ್ಕೆ ಹೋಗತಕ್ಕ ಎಣ್ಣೆ ಕಾಳುಗಳ ವಿಚಾರ ತೆಗೆದುಕೊಂಡರೆ ನಮ್ಮ ಮೈಸೂರು 26ನೇ ದರ್ಜೆಯಲ್ಲೋ ಏನೋ ಇದೆ. ನಾವು ಇಲ್ಲಿ ಸುಮಾರು ಇಪ್ಪತ್ತೇಳೂವರೆ ಲಕ್ಷ ಎಕರೆಗಳಲ್ಲಿ ಎಣ್ಣೆ ಬೀಜವನ್ನು ಬೆಳೆಯುತ್ತಿದ್ದೇವೆ. ಆದರೆ ಗುಜರಾತಿನವರು ಎಣ್ಣೆ ತಯಾರಿಕೆಯಲ್ಲಿ ನಮಗಿಂತಲೂ ಮುಂದಿದ್ದಾರೆ. ಅಲ್ಲಿ ಎಣ್ಣೆಯ ತಯಾರಿಕೆಯಲ್ಲಿ 1600 ಪೌಂಡಿಗೆ ಅವರು ಮುಟ್ಟಿರುವಾಗ ನಾವಿಲ್ಲಿ 350-400 ಪೌಂಡ್ ತಯಾರಿಸುತ್ತಿದ್ದೇವೆ. ಹೀಗೆ ನಾವು ರೈತನ ಯಾವ ಒಂದು ಸಮಸ್ಯೆಯನ್ನೂ ಇಲ್ಲಿಯತನಕ ಬಗೆಹರಿಸಲು ಸಾಧ್ಯಗಾಗಿಲ್ಲ. ನಮ್ಮಲ್ಲಿರತಕ್ಕ ಹಿತಶತೃಗಳಿಂದ ನಮ್ಮ ಶಕ್ತಿಯೆಲ್ಲಾ ಹಾಳಾಗುತ್ತಿದೆ. ಇನ್ನು ನಮ್ಮ ಹಾವೇರಿ ತಾಲ್ಲೂಕಿನ ವಿಚಾರಕ್ಕೆ ಬಂದರೆ ಅಲ್ಲಿ ಸರ್ಕಾರದವರು 20 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ 3-4 ವರ್ಷಗಳಲ್ಲಿ ಒಂದು ಕೆರೆಯನ್ನು ಕಟ್ಟಿದ್ದಾರೆ. ಆದರೆ ಇಲ್ಲಿಯವರೆಗೂ ಒಂದು ಎಕರೆ ಕೂಡ ನೀರು ಸಾಗುವಳಿಗೆ ಬಂದಿಲ್ಲ. ಹೀಗೇಕಾಯಿತು ಎಂದರೆ—ಕೆರೆಯ ಕೆಲಸ ಒಂದು ಕಡೆ ಆಗುತ್ತಿದ್ದರೆ ಅಲ್ಲಿ ಕಾಲುವೆ ಕೆಲಸವಾಗಲೀ ಮತ್ತು ಭೂಮಿಯನ್ನು ಸಮ ಮಾಡತಕ್ಕ ಕೆಲಸವಾಗಲೀ ಒಂದೂ ಆಗದೆ ಇರುವುದರಿಂದ ಹಾಗಾಯಿತು. ಹೀಗೆ ಅನೇಕ ಕಡೆ ಅನುಕೂಲಗಳಿದ್ದರೂ ಅಲ್ಲಿ ಜರೂರಾಗಿ ಆಗಬೇಕಾದ ಕೆಲಸಗಳಾಗದೆ ಭೂಮಿ ಹಾಗೇ ನಿರರ್ಥಕವಾಗಿ ಬಿದ್ದಿದೆ. ಸರ್ಕಾರದವರು ಖರ್ಚುಮಾಡಿದ ಹಣವೂ ವ್ಯರ್ಥವಾಗುತ್ತಿದೆ. ಆದುದರಿಂದ ಸರ್ಕಾರದವರಿಗೆ ನಾನು ಈ ಸಂದರ್ಭದಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ—ನಮ್ಮಲ್ಲಿರತಕ್ಕ ಶಕ್ತಿಯನ್ನೆಲ್ಲಾ ಕ್ರೋಢೀಕರಿಸಿ—ಅಂದರೆ ಹೈಬ್ರಿಡ್ ಜೋಳ ಗೋಧಿ ಇತ್ಯಾದಿಗಳನ್ನು ಜನರಿಗೆ ಒದಗಿಸಿ, ಇನ್ನೂ ಅವರಿಗೆ ಅಗತ್ಯವಿರತಕ್ಕ ಗೊಬ್ಬರ, ವಿದ್ಯುಚ್ಛಕ್ತಿ ಇವುಗಳನ್ನೆಲ್ಲಾ ಒದಗಿಸಿಕೊಟ್ಟರೆ ಅನುಕೂಲವಾಗುತ್ತದೆ. ಆದರೆ ಈ ದಿವಸ ಹಾಗೆ ಮಾಡುತ್ತಿಲ್ಲ. ಬಿತ್ತನೆ ಬೀಜ ದೊರೆತವನಿಗೆ ಗೊಬ್ಬರ ಸಿಕ್ಕುವುದಿಲ್ಲ, ಗೊಬ್ಬರ ಸಿಕ್ಕಿದವನಿಗೆ ಬಿತ್ತನೆ ಬೀಜ ಸಿಕ್ಕುವುದಿಲ್ಲ ಇವೆರಡನ್ನು ಕೊಟ್ಟಿದ್ದರೂ ಅವನಿಗೆ ಅತಿ ಪ್ರಾಮುಖ್ಯವಾಗಿ ಬೇಕಾಗಿರತಕ್ಕ ವಿದ್ಯುಚ್ಛಕ್ತಿಯನ್ನು ಒದಗಿಸಿರುವುದಿಲ್ಲ, ಹೀಗೆ ಬುದ್ಧಿಯಿದ್ದು, ಕೆಲಸ ಮಾಡುವುದಕ್ಕೆ ಶಕ್ತಿ ಇರತಕ್ಕವರಿಗೆ ಸಾಮಾನುಗಳನ್ನು ಸರಿಯಾಗಿ ಒದಗಿಸುವುದಿಲ್ಲ. ಒಬ್ಬ ರೈತನಿಗೆ ಈ ಎಲ್ಲ ಅನುಕೂಲಗಳೂ ಏಕ ಕಾಲಕ್ಕೆ ದೊರೆಯುವಂತೆ ಮಾಡಬೇಕು. ಇದು ಸರ್ಕಾರದವರ ಆದ್ಯ ಕರ್ತವ್ಯ.

ಇನ್ನು ರಾಜ್ಯದಲ್ಲಿರತಕ್ಕ ನಾನಾ ಭಾಗಗಳಲ್ಲಿ ಯಾವ ಯಾವ ಪ್ರದೇಶದಲ್ಲಿ ಏನೇನು ಬೆಳೆಯನ್ನು ಬೆಳೆಯಬೇಕು, ಯಾವ ಭೂಮಿಗೆ ಯಾವ ಗೊಬ್ಬರ ಹಾಕಬೇಕು ಎಂಬುದನ್ನು ಅವರಿಗೆ ತಿಳಿಸುವಂಥ ಒಬ್ಬ ಧಾತನಿಲ್ಲ. ನಾನು ಇನ್ನು ಕಡೆಯದಾಗಿ ತಿಳಿಸಬೇಕೆಂದಿರುವುದೇನೆಂದರೆ, ನಮ್ಮ ಅಗ್ರಿಕಲ್ಚರಲ್ ಕಾಲೇಜಿನಲ್ಲಿರತಕ್ಕ ಪರಿಣತರು ಸುಮ್ಮನೆ ಇಲ್ಲಿ ಕುಳಿತು ಹುಡುಗರಿಗೆ ಪಾಠ ಹೇಳುವುದರ ಬದಲು ಹಳ್ಳಿ ಹಳ್ಳಿಗಳಿಗೂ ಹೋಗಿ ಅಲ್ಲಿ ರೈತಾಪಿ ಜನರಿಗೆ ಯಾವ ಯಾವ ಭೂಮಿಯಲ್ಲಿ ಯಾವ ಯಾವ ಬೆಳೆಯನ್ನು ತೆಗೆಯಬೇಕು, ಯಾವ ಭೂಮಿಗೆ ಎಂಥ ಗೊಬ್ಬರ ಹಾಕಬೇಕು, ಬಿತ್ತನೆ ಬೀಜ ಯಾವುದು, ಯಾವಯಾವ ಭೂಮಿಗೆ ಚೆನ್ನಾಗಿ ಹಿಡಿಸುತ್ತೆ ಎಂಬುದನ್ನು ತಿಳಿಸತಕ್ಕದ್ದು ಬಹಳ ಅಗತ್ಯ, ಅದರಿಂದ ಹೆಚ್ಚಿನ ಅನುಕೂಲವಗುತ್ತದೆ. ಇಲ್ಲವಾದರೆ ಇಂಥ ಒಂದು ದೊಡ್ಡ ಸಂಸ್ಥೆ ಇದ್ದು ಅದು ತನ್ನ ಕಾಲವನ್ನೆಲ್ಲಾ ಪಾಠ ಹೇಳುವುದಕ್ಕೆ ವಿನಿಯೋಗಿಸಿದಲ್ಲಿ ಅದರಿಂದ ದೇಶಕ್ಕೆ ಹೆಚ್ಚು ನಷ್ಟವಾಗತ್ತೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೀರಭದ್ರಪ್ಪ ಈರಪ್ಪ (ಎಲ್ಬುರ್ಗಿ).—ಮಾನ್ಯ ಸಭಾಪತಿಗಳೇ, ಈ ಸಂದರ್ಭದಲ್ಲಿ ನಾನು ನಮ್ಮ ಜಿಲ್ಲೆಯಲ್ಲಿ ಉಂಟಾಗಿರತಕ್ಕ ಪರಿಸ್ಥಿತಿಯ ಬಗ್ಗೆ ಕೆಲವು ಮಾತುಗಳನ್ನಾಡಬೇಕೆಂದು ಇದ್ದೇನೆ. ನಮ್ಮ ಎಲ್ಬುರ್ಗಿ, ಕೊಪ್ಪಳ, ಗಂಗಾವತಿ, ಸಿಂಧನೂರು ಕುಷ್ಟಗಿ ಇತ್ಯಾದಿ ತಾಲ್ಲೂಕುಗಳೆಲ್ಲೆಲ್ಲಾ ಬೇಸಾಯಕ್ಕೆ ಯೋಗ್ಯವಾದಂಥ ಜಮೀನು ಬೇಕಾದಷ್ಟಿದೆ. ಆದರೆ ಅಲ್ಲಿ ನೀರಾವರಿ ಅನುಕೂಲ ವಿಲ್ಲದೆ ಭೂಮಿ ಪಾಳು ಬೀಳತಕ್ಕ ಪರಿಸ್ಥಿತಿಯುಂಟಾಗಿದೆ. ಅಲ್ಲಿ ಒಂದು ಸಮನಾದ ಭೂಮಿಯಿಲ್ಲ, ಅದಕ್ಕೆ ನೀರಿನ ಸರಬರಾಯಿಗಾಗಿ ಯಾವ ಒಂದು ಒಡ್ಡನ್ನೂ ಮಾಡಿಲ್ಲ, ಅಲ್ಲಿರತಕ್ಕ ರೈತರಿಗೆ ಬಿತ್ತನೆ ಬೀಜ ಅಥವಾ ಗೊಬ್ಬರ ಇವುಗಳೊಂದನ್ನೂ ಸರಿಯಾಗಿ ಸರಬರಾಯಿ ಮಾಡುತ್ತಿಲ್ಲ. ಈ ವಿಚಾರ ವನ್ನು ನಾನು ಸರ್ಕಾರಕ್ಕೆ ಅನೇಕಾವರ್ತಿ ಸೂಚನೆ ಮಾಡಿದ್ದೇನೆ. ಆದರೆ ಸರ್ಕಾರದವರು ಇದು ವರೆಗೂ ಅದಕ್ಕೆ ಗಮನ ಕೊಟ್ಟಿಲ್ಲ. ಸರ್ಕಾರದವರು ಅತ್ತ ಗಮನ ಕೊಟ್ಟಿದ್ದೇ ಆದರೆ ಅಲ್ಲಿ ಹೆಚ್ಚು ಬೆಳೆ ಬೆಳೆಯುವುದಕ್ಕೆ ಅವಕಾಶವಿದೆ. ಅಷ್ಟೇ ಅಲ್ಲದೆ ತುಂಗಭದ್ರ ಅಣೆಕಟ್ಟು ಇರುವ ಕಡೆ 7 ಲಕ್ಷ 20 ಸಾವಿರ ಎಕರೆಗಳಿಗೆ ನೀರು ಸಾಗುಕೊಡುವುದಕ್ಕೆ ಅವಕಾಶವಿದೆ. ಆದರೆ ಅಲ್ಲಿ ಕಳೆದ 15 ವರ್ಷಗಳಿಂದ ನೀರು ಸಾಗುವಳಿಗೆ ತಂದಿರತಕ್ಕ ಭೂಮಿ ಮೂರು ಲಕ್ಷ ಎಕರೆಗಿಂತ ಜಾಸ್ತಿಯಾಗಿಲ್ಲ. ಅಲ್ಲಿ ಉಳಿದ ಭೂಮಿಯನ್ನು ತರೀ ಸಾಗುವಳಿಗೆ ತರಲು ರೈತರಿಗೇನು ಅನಾನುಕೂಲವಾಗಿದೆ ಎಂಬುದನ್ನು ಸರ್ಕಾರದವರು ಕೂಡಲೇ ವಿಚಾರಮಾಡತಕ್ಕದ್ದು ಅವಶ್ಯಕ. ಹಾಗೆ ಎಲ್ಲೆಲ್ಲಿ ಹೆಚ್ಚು ಬೆಳೆ ಬೆಳೆಯುವುದಕ್ಕೆ ಅವಕಾಶವಿದೆಯೋ ಅಂಥ ಕಡೆಗಳಲ್ಲೆಲ್ಲಾ ರೈತರಿಗೆ ಒಳ್ಳೆಯ ಭತ್ತದ ಬೀಜ ವನ್ನು ಮತ್ತು ಗೊಬ್ಬರವನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಆದರೆ ಹುರುಪಿನಿಂದ ಕೆಲಸ ಮಾಡತಕ್ಕ ಜನರಿಗೆ ಸಾಕಷ್ಟು ಪ್ರೋತ್ಸಾಹವಿಲ್ಲ.

ಇನ್ನು ಕೆಲವು ಕಡೆಗಳಲ್ಲಿ ಸರ್ಕಾರದವರು ನೀರಾವರಿ ಅನುಕೂಲಕ್ಕಾಗಿ ಬಾವಿಗಳಿಗೆ ದುಡ್ಡನ್ನು ಕೊಟ್ಟಿದ್ದಾರೆ. ಇದರಿಂದಲೂ ಹೆಚ್ಚು ಬೆಳೆ ಬೆಳೆಯುವುದಕ್ಕೆ ಸಹಾಯಕವಾಗುತ್ತದೆ. ಆದರೆ ಈ ವಿಚಾರದಲ್ಲಿ ಒಂದು ಅಂಶವನ್ನು ನಾನು ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳಬೇಕಾಗಿದೆ. ಅದೇನೆಂದರೆ ಈಗ ಬಾವಿಗಳಿಗೆ ಕೊಡತಕ್ಕ ಸಾಲವನ್ನು ತಾಲ್ಲೂಕ್ ಬೋರ್ಡುಗಳ ಮೂಲಕ ಕೊಡುತ್ತಿದ್ದಾರೆ. ಆದರೆ ಹಣವನ್ನು ಜರೂರಾಗಿ ಮಂಜೂರು ಮಾಡದೆ ಇದ್ದ ಕಾರಣ ಅನೇಕ ಕಡೆ ಈ ಹಣ ಲ್ಯಾಪ್ಸಾಗಿದೆ. ಇದು ತುಂಬಾ ಅನ್ಯಾಯ, ಹೀಗಾಗಬಾರದು. ಹಾಲಿ ನೀರಾವರಿ ಬಾವಿಗಳಿಗಾಗಿ 3 ಸಾವಿರ ರೂಪಾಯಿಗಳ ಸಾಲವನ್ನು ಕೊಡಲಾಗುತ್ತಿದೆ. ಅದು ಕೆಲವು ಕಡೆ ಸಾಲದು. ಅನೇಕ ಕಡೆಗಳಲ್ಲಿ ರೈತರು ಬಾವಿಗಳನ್ನು ತೆಗೆಯಲು 7-8 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ನೀರು ಬಿದ್ದಿಲ್ಲ. ಅಂಥ ಕಡೆಗೆ ಈ 3 ಸಾವಿರ ರೂಪಾಯಿ ಏತಕ್ಕೂ ಸಾಲದು. ಆದುದರಿಂದ ಈ ಗ್ರಾಂಟನ್ನು 5 ಸಾವಿರಕ್ಕೆ ಹೆಚ್ಚಿಸಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ನಮ್ಮ ಪ್ರದೇಶದಲ್ಲಿ ಅನೇಕ ಸಣ್ಣಪುಟ್ಟ ಕೆರೆಗಳು, ನದಿಗಳೂ, ಹಳ್ಳಗಳೂ ಇರುತ್ತವೆ. ದೊಡ್ಡ ದೊಡ್ಡ ಅಣೆಕಟ್ಟು ಗಳನ್ನು ಕಟ್ಟಬೇಕಾದರೆ ಹೆಚ್ಚು ಹಣ ಮತ್ತು ಹೆಚ್ಚು ಕಾಲ ಬೇಕಾಗುತ್ತದೆ. ಅವುಗಳಿಂದ ಬೇಗ ಫಲ ಸಿಕ್ಕುವುದಿಲ್ಲ. ಆದುದರಿಂದ ಈ ಕೆಲಸವನ್ನು ಸ್ವಲ್ಪ ಹಿಂದಕ್ಕೆ ಹಾಕಿ, ನಮ್ಮ ರಾಜ್ಯದಲ್ಲಿರತಕ್ಕ ಸಣ್ಣ ಹಳ್ಳ, ಕೆರೆಗಳ ಕಡೆಗೆ ಹೆಚ್ಚಿನ ಲಕ್ಷ್ಯ ಕೊಡಬೇಕಾದ್ದು ಅತ್ಯಗತ್ಯ. ಹಾಗೇ ಕೊಳವೇ ಬಾವಿ ಗಳನ್ನೂ ತೆಗೆಸುವುದಕ್ಕೆ ಹೆಚ್ಚು ಪ್ರಯತ್ನ ಮಾಡಬೇಕು. ಇದರಿಂದ ಬೇಗ ಹೆಚ್ಚಿನ ಪ್ರತಿಫಲ ಸಿಗುತ್ತದೆ. ತುಂಗಭದ್ರ ಮೇಲು ಭಾಗದಲ್ಲ ಅಣೆಕಟ್ಟು ಹಾಕಬೇಕು. ಈ ವಿಚಾರಗಳಿಗೆ ಸರ್ಕಾರ ದವರು ಹೆಚ್ಚಿನ ನಿಗಾ ಕೊಡಬೇಕಂದು ಹೇಳಿದುದರಿಂದ ಧಾರವಾಡ, ರಾಯಚೂರು ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳಿಗೆ ನೀರು ದೊರೆಯುತ್ತದೆ. ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

11-30 A.M.

†ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಸ್ವಾಮಿ, ಒಳ್ಳೆಯ ಕಾಲದಲ್ಲಿ ಮಾನ್ಯ ಸ್ನೇಹಿತರು ಶ್ರೀಮಾನ್ ಸಿದ್ದಯ್ಯನವರು ಈ ನಿರ್ಣಯವನ್ನು ತಂದಿದ್ದಾರೆ. ಬಹಳ ಮುಖ್ಯವಾದ ವಿಚಾರವನ್ನು ನಾವು ಇವತ್ತಿನ ದಿವಸ ಪ್ರಸ್ತಾಪ ಮಾಡುತ್ತಾ ಇದ್ದೇವೆ. ಈಗಾಗಲೇ ಸ್ನೇಹಿತರು ಬಹಳ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಏನೇ ಇರಲಿ, ನಾನಂತೂ ಮನಸ್ಸಿಗೆ ಬಹಳ ನೊಂದು ಮಾನ್ಯ ಮುಖ್ಯ ಮಂತ್ರಿಗಳವರ ಮುಂದೆ ಹೇಳಬೇಕಾಗಿದೆ, ಎಲ್ಲಿಯ ವರೆಗೆ ಇಲಾಖೆಯ ಆಡಳಿತ ಸರಿಹೋಗುವುದಿಲ್ಲವೋ ಅಲ್ಲಿಯವರೆಗೂ ನಿಮ್ಮ ಒಳ್ಳೆಯ ಮನಸ್ಸಿನಿಂದ ಏನೂ ಪ್ರಯೋಜನವಾಗುವುದಿಲ್ಲ. ಇದು ಬಹುಶಃ ಮಾನ್ಯ ಮುಖ್ಯ ಮಂತ್ರಿಗಳಿಗೂ ಗೊತ್ತು. ಅವರೂ ಸಹ ಈ ಹಿಂದೆಯೇ ಇದನ್ನು ಒಪ್ಪಿದ್ದಾರೆ. ಈ ಇಲಾಖೆಯ ಆಡಳಿತ ಸರಿಮಾಡಬೇಕಾದ್ದು ಬಹಳ ಆದ್ಯಕರ್ತವ್ಯವಾಗಿದೆ. ಇಂತಹ ಒಂದು ತುರ್ತು ಪರಿಸ್ಥಿತಿಯಲ್ಲಿ ವ್ಯವಸಾಯದ ಅಭಿವೃದ್ಧಿಯ ಕಡೆಗೆ ಗಮನ ಕೊಡುತ್ತಿಲ್ಲ. ಆದ್ದರಿಂದ ಈಗ ವ್ಯವಸಾಯ, ಕೈಗಾರಿಕೆ ಮತ್ತು ದೇಶದ ರಕ್ಷಣೆ ಇವುಗಳನ್ನು ಮಾತ್ರ ಸಧ್ಯಕ್ಕೆ ನೋಡಿಕೊಂಡು ಬಾಕಿ ವಿಷಯಗಳನ್ನು ಕೊಂಚ ಕಾಲ ಬದಿ

ಗೊತ್ತಿದರೂ ತಪ್ಪಾಗಲಾರದು ಎಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಯಾವ ಒಂದು ಪ್ರಯೋಗವನ್ನು ಮಾಡಲಿ, ಸಂಶೋಧನೆ ಮಾಡಲಿ ಅದಕ್ಕೆ ಇಲಾಖೆಯ ಅಧಿಕಾರಿಗಳು ಮಾಡಬೇಕಾಗಿದೆ. ನಾವು ಈ ಒಂದು ಮಾನ್ಯ ಸಭೆಯ ಸದಸ್ಯರಾಗಿ ನಮ್ಮ ಹೆಚ್ಚಿನ ಕಾಲ ಈ ಅಧಿಕಾರಿಗಳ ಕೊರತೆಯನ್ನು ಕೇಳತಕ್ಕ ಸಂದರ್ಭ ಜಾಸ್ತಿಯಾಗುತ್ತಾ ಇದೆಯೇ ಹೊರತು ಅವರು ಬಂದು ನಮ್ಮ ವ್ಯವಸಾಯದ ಕ್ರಮದಲ್ಲಿ ಇಂತಹ ಸಂಶೋಧನ ಮಾಡಿದ್ದೇವೆ ಅದರ ಸಹಾಯವನ್ನು ತೆಗೆದುಕೊಳ್ಳಿ ಎಂದು ಹೇಳತಕ್ಕ ಸಂದರ್ಭ ಬಹಳ ಕಡಿಮೆ ಎಂಬುದನ್ನು ನಾವು ನೋಡುತ್ತಾ ಇದ್ದೇವೆ. ಮೊನ್ನೆ ತಾನೇ ಆದಂತಹ ಈ ಇಲಾಖೆಯ ಪ್ರಮೋಷನ್ ವಿಷಯದಲ್ಲಿ 1957ನೇ ಲಿಸ್ಟ್, 1962ನೇ ಲಿಸ್ಟ್ ಇತ್ಯಾದಿ ಇತ್ಯಾದಿ ಅವರ ಮನಸ್ಸನ್ನು ಕಲಕಿ, ಅವರ ಮನಸ್ಸಿನಲ್ಲಿ ಅಲ್ಲೋಲಕಲ್ಲೋಲವನ್ನುಂಟು ಮಾಡಿದೆ. ಯಾರೂ ಜವಾಬ್ದಾರಿಯುತರಾದ 1 ಕ್ಲಾಸ್ ಅಥವಾ 2 ಕ್ಲಾಸ್ ಆಫೀಸರುಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ, ವಿಶ್ವಾಸದಿಂದ ಇದು ನಮ್ಮ ಕರ್ತವ್ಯ, ಈ ಕರ್ತವ್ಯ ಮಾಡಬೇಕೆಂಬ ಮನೋಭಾವ ಅವರಲ್ಲ ಇಲ್ಲ. ಇಂಟಿಗ್ರೇಷನ್ ಆದ ಮೇಲೆ ಬೊಂಬಾಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮೈಸೂರು ವಗೈರೆ ಎನ್ನತಕ್ಕ ಒಂದು ಭಾವನೆಯಲ್ಲಿ ತೊಡಗಿ ಅವರ ಕರ್ತವ್ಯದ ಕಡೆಗೆ ಹೆಚ್ಚು ಗಮನ ಕೊಡದೇ ಇರುವುದರಿಂದ ಅವರು ಸೆಕ್ರೆಟೇರಿಯಟ್‌ನಲ್ಲಿ, ಅಸೆಂಬ್ಲಿಯ ಆವರಣದಲ್ಲಿ, ಲೆಜಿಸ್ಲೇಟರ್ಸ್ ಹೋಂನಲ್ಲಿ ವ್ಯವಸಾಯ ಮಾಡುತ್ತಾ ಇದ್ದಾರೆಯೇ ವಿನಾ ತಾವು ಮಾಡಬೇಕಾದ ಕೆಲಸ ಮಾಡುತ್ತಾ ಇಲ್ಲ. ಆ ಕಡೆಗೆ ಸಂಬಂಧಪಟ್ಟ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಗಮನ ಕೊಟ್ಟು ಸಂಶೋಧನೆಯ ಕೆಲಸ ಚೆನ್ನಾಗಿ ನಡೆದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಇವತ್ತಿನ ದಿವಸ ಹೈಬ್ರಿಡ್ ಮೇಜ್, ಫರ್ಟಿಲೈಸರ್ಸ್ ಇವುಗಳ ಸಂಬರಾಯಿ ಬಹಳವಾಗಿ ಆಗಬೇಕಾಗಿದೆ. ಹೈಬ್ರಿಡ್ ಮೇವನ್ನು ಉತ್ತರ ಇಂಡಿಯಾದಿಂದ ತರಿಸುತ್ತಾ ಇದ್ದೇವೆ. ಅದು ಸರಿಯಲ್ಲ; ಹೆಚ್ಚು ನಮ್ಮ ಸಂಸ್ಥಾನದಲ್ಲೇ ಬೆಳೆಯುವುದಕ್ಕೆ ಪ್ರಯತ್ನ ಪಟ್ಟು ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಮನಸ್ಸು ಮಾಡಿದರೆ ಖಂಡಿತವಾಗಿಯೂ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದೆ. ಈಗ ಧಾರಣವಾಸಿಗಳು ಹೆಚ್ಚಾಗಿರುವುದರಿಂದ ಪ್ರತಿಯೊಬ್ಬನಿಗೂ ಹೆಚ್ಚು ಬೆಳೆಯಬೇಕೆಂಬ ಕುತೂಹಲ ಬಂದಿದೆ. ಇದು ಶಾಶ್ವತವಾಗಿ ಇರಬೇಕಾದರೆ ಇದಕ್ಕೆ ದೊರೆಯಬೇಕಾದ ಸೌಲಭ್ಯ, ಫರ್ಟಿಲೈಸರ್ಸ್ ರೈತನಿಗೆ ಎಷ್ಟು ಮಟ್ಟಿಗೆ ಮುಟ್ಟುತ್ತಾ ಇದೆ ಮತ್ತು ಅದನ್ನು ಸಕಾಲದಲ್ಲಿ ಒದಗಿಸುತ್ತಾ ಇದ್ದೇವೆಯೇ ಎಂಬುದನ್ನು ನೋಡಿದ್ದೇ ಅದರೆ ಅದು ಅಷ್ಟು ಸಮರ್ಪಕವಾಗಿಲ್ಲ, ಬೇಕಾದ ಸೌಲಭ್ಯ ಮತ್ತು ಹಣವನ್ನು ಸಕಾಲದಲ್ಲಿ ಒದಗಿಸಿದ್ದೇ ಆದರೆ ನಿಜವಾಗಿಯೂ ಕೂಡ ಈ ಆಹಾರದ ಪೂರೈಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬ ದೃಢ ನಂಬಿಕೆ ನನಗೆ ಇದೆ. ಹೈಬ್ರಿಡ್ ಮೇಜ್‌ನ್ನು ಬೆಳೆಸುವುದಕ್ಕೆ ನಾನು ಪ್ರಯತ್ನ ಪಟ್ಟೆ, ವ್ಯವಸಾಯದ ಶಾಲೆಗೆ ಸೇರಿದ ಭೂಮಿ ಇರುವುದರಿಂದ ಅಲ್ಲಿ ಹೈಬ್ರಿಡ್ ಪದ್ಧತಿಯನ್ನು ಪ್ರಯೋಗ ಮಾಡಿದೆ. 20 ಕುಂಟೆ ಜಮೀನಿನಲ್ಲಿ 15 ಚೀಲ ಜೋಳವನ್ನು ಬೆಳೆದಿದ್ದೇವೆ. ಅದನ್ನು ಸ್ವಂತವಾಗಿ ಉಪಯೋಗ ಮಾಡುತ್ತಾ ಇದ್ದೇವೆ. ಈ ರೀತಿ ಒಂದು ಪ್ರತಿಫಲ ಇದೆ ಎಂದು ಕಂಡುಬಂದದ್ದರಿಂದ ಇದನ್ನು ಬೆಳೆಯೋಣ ಎಂಬ ಉತ್ಸಾಹ ಇದೆ. ಫರ್ಟಿಲೈಸರ್ಸ್ ಬೆಲೆ ಬಹಳ ಹೆಚ್ಚಾಗುತ್ತಾ ಇದೆ, ಸೂಪರ್ ಫಾಸ್ಫೇಟ್ ಒಂದು ಟನ್‌ಗೆ 325 ರೂಪಾಯಿಗಳವರೆಗೂ ಹೋಗಿದೆ. ಮೊದಲು ಅದು 225 ರೂಪಾಯಿ ಇತ್ತು, ಫ್ರೀ ಮಾರ್ಕೆಟ್‌ನಲ್ಲಿ. ಇದನ್ನು ಶಾಸ್ತ್ರೀಯವಾಗಿ ವರ್ತಕರು ಏರಿಸಿಕೊಂಡು ಹೋಗುತ್ತಾ ಇದ್ದಾರೆ. ಇದರ ಕಡೆಗೆ ಹೆಚ್ಚು ಗಮನ ಕೊಟ್ಟು ಫರ್ಟಿಲೈಸರ್ಸನ್ನು ಸಾಕಾದಷ್ಟು ಸಕಾಲಕ್ಕೆ ಒದಗಿಸಿದ್ದೇ ಆದರೆ ಖಂಡಿತವಾಗಿಯೂ ಕೂಡ ಈ ಆಹಾರದ ಕೊರತೆ ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ,

ಶ್ರೀ ಎನ್. ಎ. ಕರಿಲಿಂಗಣ್ಣನವರ್ (ಗೋಕಾಕ್-1).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಈ ಆಹಾರ ಧಾನ್ಯ ಹೆಚ್ಚು ಬೆಳೆಯಬೇಕು, ಅದು ಕೊರತೆಯಾಗಿದೆ ಎನ್ನುವಂತಹ ಮಾತು ಏನು ಈ ಒಂದು ಸಭೆಯ ಮುಂದೆ ಇಟ್ಟಿದ್ದಾರೋ ಇದನ್ನು ನಾನು ರೈತನಾಗಿ ಅಂತಃಕರಣ ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇಲ್ಲಿ ಆಹಾರಧಾನ್ಯವನ್ನು ಹೆಚ್ಚಾಗಿ ಬೆಳೆಯಿರಿ ಎಂಬ ಮಾತನ್ನು ಹೇಳುತ್ತಾರೆ, ರೈತನು ಹೇಗೆ ಬೆಳೆಯುತ್ತಾನೆ? ಅವನಿಗೆ ಬೇಕಾದ ಸೌಲಭ್ಯ ಕೊಡಬೇಕು ಸರ್ಕಾರದವರು. ನಮ್ಮ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ, ಅದನ್ನು ಮೂರು ಭಾಗಗಳನ್ನಾಗಿ ಮಾಡಬೇಕಾಗುತ್ತದೆ, ಸುಮಾರು ಮೂರನೆಯ ಒಂದು ಅಂಶ 25 ರಿಂದ 30 ಇಂಚು ಮಳೆಯಾಗುತ್ತದೆ, ಇನ್ನು ಮೂರನೆಯ ಒಂದು ಅಂಶಕ್ಕೆ ಘಟಪ್ರಭಾ ನೀರನ್ನು ಕೊಡಲಾಗುತ್ತದೆ, ಇನ್ನು ಉಳಿದ ಮೂರನೆಯ ಎರಡು ಅಂಶ ಮಳೆಯಾಗದಿದ್ದರೆ ಸ್ಕೇರ್ಸಿಟಿ ಭಾಗ ಎಂದು ಪರಿಗಣಿಸಲ್ಪಟ್ಟಿದೆ. ಈಗ ಘಟಪ್ರಭಾ ನೀರನ್ನು ಕೊಡುತ್ತಾ ಇರುವುದರಲ್ಲಿ ಹೈಬ್ರಿಡ್ ಗೋಧಿ, ಜೋಳ ಒಂದು ಎಕರೆಗೆ ಸುಮಾರು 30 ಚೀಲ ಬೆಳೆದಿದ್ದಾರೆ. ಅಲ್ಲಿನ ಪರಿಸ್ಥಿತಿ ಏನಾಗಿದೆ ಎಂದರೆ ನೀರು ಬೇಕಾದಾಗ ನೀರು ಕೊಡುವುದಿಲ್ಲ, ಗೊಬ್ಬರ ಬೇಕಾದಾಗ ಗೊಬ್ಬರ ಕೊಡುವುದಿಲ್ಲ. ಅಂತಹ ಪರಿಸ್ಥಿತಿಯಿಂದಾಗಿಯೂ ಕೂಡ ಅಲ್ಲಿ 25-30

(ಶ್ರೀ ಎಸ್. ಎ. ಕರಿಲಿಂಗಣ್ಣನವರ್)

ಚೀಲ ಗೋಧಿ, ಜೋಳ ಉತ್ಪನ್ನವಾಗುತ್ತಾ ಇದೆ. ಸಮಯಕ್ಕೆ ಸರಿಯಾಗಿ ನೀರು, ಗೊಬ್ಬರ ಸಿಕ್ಕದೇ ಇರುವ ಪರಿಸ್ಥಿತಿಯಿಂದಾಗಿ ಬಹಳ ಲುಕ್ಸಾನಾಗಿದೆ. ಆದ್ದರಿಂದ ಘಟಪ್ರಭಾದಲ್ಲಿನ ನೀರು ಸಾಕಾದಷ್ಟು ರೈತರಿಗೆ ಸಿಕ್ಕುವಂತೆ ಮಾಡಬೇಕೆಂದು ಸರ್ಕಾರದವರಿಗೆ ಸಲಹೆ ಮಾಡಲು ಬಯಸುತ್ತೇನೆ. ನಮ್ಮ ಭಾಗದಲ್ಲಿರತಕ್ಕ ಕುಂದರನಾಡು ಪ್ರದೇಶದಲ್ಲಿ ಬರೀ ಮಳೆಯ ನೀರಿನಿಂದಲೇ ಒಂದು ಎಕರೆಗೆ 15-20 ಚೀಲು ಬೆಳೆಯತಕ್ಕ ಪ್ರದೇಶ ಇದೆ. ಅದಕ್ಕೆ ಗೊಬ್ಬರ ಬೇಕು, ಗೊಬ್ಬರ ಸಿಕ್ಕುವುದಿಲ್ಲ. ಮೊನ್ನೆ ಕೊಟ್ಟಿದ್ದಾರೆ, ನಮ್ಮ ಸೊಸೈಟಿಯವರು, ಅಲ್ಲಿ ನಾಲ್ಕೈದು ಹಳ್ಳಿಗಳು ಇವೆ, ಎರಡು ಟನ್ ಗೊಬ್ಬರ ಕೊಟ್ಟರೆ ಸಾಕಾಗುತ್ತದೆಯೇ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು, ಒಂದು ಎಕರೆಗೆ 200 ಗ್ರಾಂ ಸಲ್ಫೇಟನ್ನು ಕೊಟ್ಟರೆ ಅದು ಸಾಕಾಗುವುದಿಲ್ಲ. ಇದನ್ನು ವಿಚಾರ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಎಲ್ಲಿ 20 ರಿಂದ ಮೇಲ್ಪಟ್ಟು ಇಂಚು ಮಳೆಯಾಗುತ್ತದೆ ಅಲ್ಲಿ ಯಾವ ಪ್ರಮಾಣದ ಮೇಲೆ ಗೊಬ್ಬರ ಕೊಡಬೇಕು ಎನ್ನುವಂತಹದು ನಿರ್ಣಯವಾಗಬೇಕು. ಅದನ್ನು ಬಿಟ್ಟು ಜಿಲ್ಲಾವಾರು, ತಾಲ್ಲೂಕವಾರು ಕೊಟ್ಟರೆ ಸರಿಯಾದ ಪ್ರಮಾಣದಲ್ಲಿ ಹಂಚಿಕೆಯಾಗುವುದಿಲ್ಲ ಎಂಬುದನ್ನು ಸೂಚಿಸಬಯಸುತ್ತೇನೆ. ಜಿಲ್ಲಾವಾರು, ತಾಲ್ಲೂಕುವಾರು ಕೊಡಬೇಕೆಂಬ ಪದ್ಧತಿಯನ್ನು ಅನುಸರಿಸಿ ಗೊಬ್ಬರ ಕೊಟ್ಟರೆ ಅದರಿಂದ ಏನೇನೂ ಉಪಯೋಗವಾಗುವುದಿಲ್ಲ. ಹೆಚ್ಚು ಮಳೆ ಎಲ್ಲಿ ಬೀಳುತ್ತದೆ, ನೀರಿನ ಸೌಕರ್ಯ ಎಲ್ಲಿ ಹೆಚ್ಚಾಗಿ ಇದೆ ಅಂತಹ ಕಡೆಗಳಿಗೆ ಗೊಬ್ಬರ ಕೊಟ್ಟರೆ ಅದರಿಂದ ರೈತರಿಗೆ ಉಪಯೋಗವಾಗುತ್ತದೆ. ಅದರಿಂದ ಜಾಸ್ತಿ ಬೆಳೆಯುತ್ತಾರೆ. ಆದ್ದರಿಂದ ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಪರಿಸ್ಥಿತಿ ಇದೆ ಎಂಬುದನ್ನು ತಿಳಿದುಕೊಂಡು ಆ ರೀತಿಯಿಂದ ಗೊಬ್ಬರವನ್ನು ಹಂಚಬೇಕೆಂದು ನಾನು ಸಲಹೆ ಮಾಡುತ್ತೇನೆ.

ಕುಂದರನಾಡಿನಲ್ಲಿ ಮಾರ್ಕಂಡೇಯ ನದಿ ಇದೆ, ಅಲ್ಲಿ ನೀರಾವರಿ ಸೌಲಭ್ಯವನ್ನು ಮಾಡಿಕೊಟ್ಟರೆ 50 ಸಾವಿರ ಎಕರೆ ನೀರಾವರಿಯಾಗುವಂತಹ ಒಂದು ಪ್ರಶ್ನೆ ಇದೆ. ಅದಕ್ಕೆ ಹಿಂದೆ ರಂಗದ ಹೊಳೆ ಎಂದು ಒಂದು ಹಳ್ಳ ಇದೆ. ಅದಕ್ಕೆ ಕಟ್ಟೆ ಹಾಕಿದರೆ ಆ ಪ್ರದೇಶದಲ್ಲಿ ಒಂದು ಎಕರೆಯಲ್ಲಿ 30 ಚೀಲ ಜೋಳ ಬೆಳೆಯುತ್ತದೆ ಎಂದು ಹೇಳುತ್ತೇನೆ. ಇದನ್ನು ಸ್ವಲ್ಪ ವಿಚಾರಮಾಡಿನೋಡಬೇಕು. ಈ ಸಲ ಮಳೆ ಸರಿಯಾಗಿ ಆಗಲಿಲ್ಲ. ನಮ್ಮ ಕಡೆಯಲ್ಲಿ ನಾನು 4 ಎಕರೆಯಲ್ಲಿ ಜೋಳ ಹಾಕಿದ್ದೆ, ಒಂದು ಸಾವಿರ ರೂಪಾಯಿ ಖರ್ಚು ಮಾಡಿದ್ದೆ. ಅರಿದ್ರಾ ಮಳೆ ಬೀಳುವಂತಹ ಪರಿಸ್ಥಿತಿ ಇಲ್ಲ, ಈ ತನಕ ಮಳೆಯಾಗಿಲ್ಲ. ಸರಿಯಾಗಿ ಮಳೆಯಾಗಿದ್ದರೆ 50-60 ಚೀಲ ಜೋಳ ಬರುತ್ತಾ ಇತ್ತು, ಮಳೆರಾಯ ಕೋಪ ಮಾಡಿಕೊಂಡಿದ್ದಾನೆ. ಈ ಸಲ ಹಸ್ತಾ ಮಳೆಯಾಗದಿದ್ದರಿಂದ ಮುಂಗಾರಿನ ಪೀಕು ಸಹ ಬರುವುದಿಲ್ಲ, ಹಿಂಗಾರಿನ ಪೀಕಿಗೂ ಹಾನಿಯಾಗುತ್ತದೆ. ಈ ರೀತಿಯಿಂದ ಬೆಳೆಗೆ ಈ ಸಾರಿ ಬಹಳ ಹಾನಿಯಾಗುತ್ತಾ ಇದೆ. ಆದುದರಿಂದ ಸಣ್ಣ ನೀರಾವರಿ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ, ಮತ್ತು ಹಳ್ಳಿ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿಯನ್ನು ಕೊಟ್ಟು ಸಹಾಯ ಮಾಡಿದರೆ ತಮ್ಮಷ್ಟಕ್ಕೆ ತಾವೇ ಭೂಮಿಗೆ ನೀರನ್ನು ಉಣಿಸಿಕೊಳ್ಳತಕ್ಕ ಪರಿಸ್ಥಿತಿ ಬರುತ್ತದೆ. ಕುಂದರನಾಡಿನಲ್ಲಿ ವಿದ್ಯುಚ್ಛಕ್ತಿ ಲೈನ್‌ನ್ನು ಎಳೆಯುತ್ತ ಇದ್ದಾರೆ. ಅದನ್ನು ಜಾಗ್ರತೆ ಹಾಕಿಸಿಕೊಡಬೇಕೆಂದು ಹೇಳುತ್ತೇನೆ. ರೈತರಿಗೆ ಸರಕಾರ ಹೆಚ್ಚು ಸಹಾಯ ನೀಡುತ್ತದೆಂದು ನಂಬುತ್ತೇನೆ. ಈ ಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಬ್ಬ ಒಡ್ಡ ಕತ್ತೆಯಮೇಲೆ ಬೀಸೋಕಲ್ಲು ಹೇರಿ ಕೊಂಡು ಹೋಗುತ್ತಿದ್ದ. ಕತ್ತೆಗೆ ಕಾಣುವಂತೆ ಅದರ ಬಾಯಿಗೆ ಸಿಕ್ಕದಂತೆ ಸ್ವಲ್ಪ ಹುಲ್ಲನ್ನು ಇಡಲಾಗಿತ್ತು. ಕತ್ತೆ ಆ ಹುಲ್ಲಿನ ಆಸೆಯಿಂದ ಅದು ತನಗೆ ಸಿಕ್ಕುತ್ತದೆ ಎಂದು ಕೊಂಡು ಭಾರವನ್ನು ಹೊತ್ತುಕೊಂಡು ಮುಂದೆ ಮುಂದೆ ಹೋಗುತ್ತಿತ್ತು. ಹೀಗೆ ರೈತ ಸರಕಾರದವರು ಎಲ್ಲಾ ಸಹಾಯಗಳನ್ನೂ ನೀಡುತ್ತಾರೆಂಬ ಭರವಸೆಯ ಮೇಲೆ ಮುಂದುವರೆಯುತ್ತಿದ್ದಾನೆ. ಆದರೆ ಕತ್ತೆಗೆ ಹೇಗೆ ಹುಲ್ಲು ಸಿಕ್ಕುತ್ತಿಲ್ಲವೋ ಹಾಗೆ ರೈತನಿಗೆ ಬೇಕಾದ ಬೀಜ, ಗೊಬ್ಬರ, ನೀರು ಮುಂತಾದ್ದು ಸಕಾಲದಲ್ಲಿ ಸಿಕ್ಕುತ್ತಿಲ್ಲ. ಹೀಗಾದರೆ ಅತ ಹೆಚ್ಚಿಗೆ ಬೆಳೆಯಲು ಹೇಗೆತಾನೆ ಸಾಧ್ಯ? ಹೀಗಾಗುವುದಕ್ಕೆ ಅವಕಾಶ ಕೊಡದೆ ರೈತನಿಗೆ ಕಾಲಕ್ಕೆ ಸರಿಯಾಗಿ ಸರಕಾರದವರು ಒದಗಿಸುವ ಸೌಲಭ್ಯಗಳು ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

SRI R. S. HEGDE (Honnawar).—Mr. Speaker, Sir, I want to suggest a minimum 12-point programme to boost up production and the consequent equitable distibution.

(1) To Government officers it must be brought home that the disposal of applications must be on a war-footing. A precise time should

be given within which applications must be disposed of. It may be for takavi, for land grant or pumpsets. The administrative bottlenecks should be got over by simplifying the procedure.

(2) The levy of paddy or foodgrains per acre must be on the classification of land which is on the basis of assessment. The present levy on the basis of rain-fed and irrigated land is bound to result in greatest injustice to the agriculturist whose land is termed as 4th class land. The levy must be based on the variety of the land based on assessment.

(3) Fair price must be given to the producer. The present rate structure fixed by the Government is not encouraging. When the prevailing market rate if Rs. 75 the agriculturist is getting only Rs. 40 thus leaving a great disparity between the prevailing market rate and the controlled rate. The consumer will not mind paying a little more. Last year in the rate structure the Government had a commercial vested interest and in some cases the retailer had to pay between Rs. 7 and Rs. 10 per quintal before the foodgrains could be released for sale. Hence greatest benefit should be afforded to the grower and the Government has to revise the rate for paddy and other foodgrains. Besides assessment in terms of kind has to be seriously thought of.

(4) The production of coarse grains should be stepped up and fair price should be paid for it. Besides the percentage of polish may be reduced from 5 to 3 or 2 per cent which will make available about 3 to 4 lakhs tons for the country.

(5) Then a decision of some importance has to be taken by the Government whether cash crops should be grown more intensively from the existing land and more lands can be made available for production of foodgrains. It is suggested by experts including the President of the Food Corporation that there should be a levy on the cash crops which is more remunerative than food crops and such a levy should subsidise the foodcrops.

(6) Then the sixth point pertains mainly to the Agriculture Department. There should be a network of demonstration plots at the block level. I suggest there must be at least 2,000 demonstration plots at every block level, a plot having 10 gunthas each so that we shall be able to cultivate about 1 lakh acres of land intensively with the modern method of cultivation. After having given some assistance to these demonstration plots the Government can insist on double the levy than what they have been doing now. At present at every block level the number of demonstration plots is between 20 and 25 and these plots have not been meeting the demands of the situation.

(7) A plant protection squad must be established at every Assistant Commissioner; Sub-Division level. The sprayers supplied at present on subsidy basis is sometimes misused and abused because they have neither the technical skill nor the necessary insecticides and pesticides. It should be organisd on the pattern of the D. D. T. Squad which has been there for the eradication of malaria in the malnad area.

(SRI R. S. HEGDE)

(8) Nutrition lessons in all the educational institutions must be made a part of the course in the syllabus with a view to change the food habits of the people.

(9) Minior irrigation work and khar lands especially in North Kanara and South Kanara has to be concentrated. In North Kanara alone thousands of minor Irrigation tanks, not new tanks, have to be commissioned by repairing them and desilting them. This has to be concentrated. The execution of these works is quickened as a result the return also will be very quick.

(10) Exploitation of the local manurial resources and other manures should be thought of.

(11) The future of the panchayat and co-operative Secretaries who are the rock bottom of panchayat agricultural production plan must be assured to enable them to evince greater interest in greater production.

(12) Then all the sweet water rivers should be exploited to the maximum. The present policy of making application to the Electricity Department through the Tahsildar who has to transmit it to the Head Office has to be revised because it takes year before the application reaches the destination. A sort of pilot project must be taken up for installation of pumpsets wherever there is sweet water. This should be taken up by the Department or the Government. That is the only way to exploit the sweet water which is there in North and South Kanara.

Then the next point is linking of credit with marketing. At present a lot of money is given as crop finance. Timely assistance is given to the agriculturist, but he makes a default because the crop finance is sometimes used to maintain his family. So, the Co-operative Department must stress that whenever crop loans are given the return must be in kind. That becomes possible only when certain families are selected by the Co-operative Society to finance all his activities by giving him not only crop finance but also finance for maintenance. If only crop finance is given, he takes away a mjaor portion of it for his maintenance or he has to take loan from other sources by hypothecation of his future crop and so it becomes impossible for him to return the crop finance given to him in kind.

Then all the Taluk a Development Boards and Panchayats must be informed that they must try to devote a part of their budget for production.

Finally, the suggestion relates mainly to the function of the Central Government and it is not the function of the State Government. The notes in circulation at present in the country is about Rs. 1,600 to 1,700 crores. Suppose you give a bank draft, before enchashing it, you have to pay a small commission. Similarly, at the time when the rupee other notes in circulation are changed I would like to suggest let the Government charge 1 Paisa per rupee as commission. Thus for Rs. 1600 crores notes in circulation the Government can get easily 1600 crores of Paise which would be available for development of the country.

Thank you, Sir.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಿದ್ದಯ್ಯನವರು ಮಂಡಿಸಿರುವ ಈ ಠರಾವನ್ನು ಅನುಮೋದಿಸುತ್ತ ನನಗೆ ಕೊಟ್ಟ ಐದು ನಿಮಿಷಗಳಲ್ಲಿ ಎಲ್ಲವನ್ನೂ ಹೇಳಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂಬು ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ.

ಮೊದಲನೆಯದಾಗಿ ಈ ಅಧಿವೇಶನದಲ್ಲಿ, ಈ ಮಾನ್ಯ ಸಭೆ ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿದಂಥ ಜವಾನರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿ ಎರಡು ನಿಮಿಷ ಮೌನವನ್ನು ಆಚರಿಸಿತು. ಎರಡನೆಯದಾಗಿ ಈ ಸಭೆಯು ಮಾನ್ಯ ಸದಸ್ಯರಾದ ಗೋಪಾಲ ಸಾಲೆನ್ನ ಅವರ ನಿಧನಕ್ಕಾಗಿ ಒಂದು ನಿಮಿಷ ಮೌನವನ್ನು ಆಚರಿಸಿತು. ಆದರೆ ಸರ್ಕಾರದವರು ಬೇಕಾದಷ್ಟು ಪ್ರಯತ್ನ ಮಾಡಿದರೂ ಕೂಡ ಜನತೆ ಬೇಕಾದಷ್ಟು ಪ್ರಯತ್ನ ಮಾಡಿ ಹೆಚ್ಚು ಬೆಳೆಯಲಿಕ್ಕೆ ಪ್ರಯತ್ನ ಮಾಡಿದರೂ ಕೂಡ ದೇವರ ಪ್ರಕೋಪಕ್ಕೆ ಒಳಗಾದಾಗ ನಾವು ಏನು ಮಾಡುವುದಕ್ಕೆ ಸಾಧ್ಯ? ಮಾನ್ಯ ಸದಸ್ಯರು ಎಲ್ಲವನ್ನೂ ಹೇಳಿದ್ದಾರೆ. ಆದರೆ ಸಭೆಯ ಅಧ್ಯಕ್ಷರು ಮತ್ತು ಸದಸ್ಯರು ಎದ್ದು ನಿಂತು ದೇವೇಂದ್ರನಲ್ಲಿ ಪ್ರಾರ್ಥನೆ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸದಸ್ಯರನೇಕರು ಅನೇಕ ಯೋಗ್ಯವಾದ ವಿಚಾರಗಳನ್ನು ಹೇಳಿದ್ದಾರೆ. ನನಗೆ ಹೇಳಲಿಕ್ಕೆ ಏನೂ ಉಳಿದಿಲ್ಲ ಎಂದು ಭಾವಿಸುತ್ತೇನೆ. ಇದ್ದುದರಲ್ಲಿ ಕೆಲವು ಮುಖ್ಯವಾದ ಸಂಗತಿಗಳನ್ನು ಹೇಳಬಯಸುತ್ತೇನೆ.

ಒಕ್ಕಲುತನದ ಹುಟ್ಟುವಳಿ ಹೆಚ್ಚಾಗಿ ಆಗಬೇಕೆನ್ನುವುದು ಎಲ್ಲರಿಗೂ ಗೊತ್ತಿದ್ದ ಸಂಗತಿ. ಅನೇಕ ವರ್ಷಗಳಿಂದ ಇದನ್ನು ಅಂದುಕೊಂಡು ಬಂದಿದ್ದೇವೆ. ಆದರೆ ಈವರೆಗೆ ಏಕೆ ಆಗಲಿಲ್ಲ ಎನ್ನುವ ವಿಚಾರವನ್ನು ಮಾಡಿದರೆ, ಒಕ್ಕಲುತನದ ಹುಟ್ಟುವಳಿ ಜಾಸ್ತಿಯಾಗಬೇಕಾದರೆ, ಒಕ್ಕಲಿಗರಿಗೆ ಟ್ರಾಕ್ಟರ್, ಉತ್ತಮ ಬೀಜ, ರಸಾಯನಿಕ ಗೊಬ್ಬರ ಕೊಡಬೇಕು ಮತ್ತು ನೀರಾವರಿ ಸೌಕರ್ಯಗಳನ್ನು ಒದಗಿಸಿಕೊಡಬೇಕು ಎಂದು ಎಲ್ಲರಿಗೂ ಗೊತ್ತಿರುವ ವಿಷಯ. ವ್ಯವಸಾಯ ಇಲಾಖೆಯವರು 19 ಜಿಲ್ಲೆಗಳಲ್ಲಿಯೂ 19 ಟ್ರಾಕ್ಟರ್ ಯೂನಿಟ್ಟುಗಳನ್ನು ಸ್ಥಾಪನೆ ಮಾಡಿದ್ದಾರೆ. ಅದರಲ್ಲಿ ಆರೇಳು ಯೂನಿಟ್ಟುಗಳು ಮಾತ್ರ ಕೆಲಸಮಾಡಲಿಕ್ಕೆ ಹತ್ತಿವೆ. ಯೂನಿಟ್ಟುಗಳು ಇದ್ದದ್ದೂ ಖರೆ, ಆ ಸಿಬ್ಬಂದಿಗೆ ಪಗಾರ ಕೊಟ್ಟಿದ್ದೂ ಖರೆ. ಆದರೆ ಆ ಟ್ರಾಕ್ಟರಿನಿಂದ ಒಬ್ಬ ಒಕ್ಕಲಿಗನಿಗೂ ಯಾವ ತರಹ ಫಾಯಿದೆಯೂ ಆಗಿಲ್ಲ. ಇದಕ್ಕೆ ನನ್ನ ಸಲಹೆ ಏನೆಂದರೆ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಕಡೆಯಿಂದ ಕೆಲಸ ಮಾಡಿಸಬೇಕು. ಪ್ರತಿಯೊಂದು ತಾಲ್ಲೂಕಿಗೂ ಒಂದೆರಡು ಟ್ರಾಕ್ಟರುಗಳನ್ನು ಕೊಟ್ಟು ತಾಲ್ಲೂಕು ಯೂನಿಟ್ ಮಾಡಬೇಕೆಂದು ಸೂಚನೆ ಮಾಡಬಯಸುತ್ತೇನೆ.

ಸುಧಾರಿಸಿದ ಬೀಜ ಕೊಡಲು ವ್ಯವಸಾಯ ಇಲಾಖೆಯವರು ರಿಜಿಸ್ಟರ್ಡ್ ಸೀಡ್ ಗ್ರೋಯರ್ಸ್ ಎಂದು 10-15 ಜನರನ್ನು ತಮಗೆ ಬೇಕಾದವರನ್ನು ಮಾಡಿದ್ದಾರೆ? ಅವರು ಹಳ್ಳಿಗಳಿಗೆ ಎಷ್ಟು ಬೀಜಗಳನ್ನು ಕೊಡಬೇಕೋ ಅಷ್ಟು ಕೊಟ್ಟಿಲ್ಲ. ಜನರು ಕೊಯಮತ್ತೂರು ಮತ್ತು ಅನೇಕ ಕಡೆಯಿಂದ ಬೀಜವನ್ನು ತರಿಸಿಕೊಳ್ಳಲಿಕ್ಕೆ ಹತ್ತಿದ್ದಾರೆ.

ರಸಾಯನಿಕ ಗೊಬ್ಬರ ಎರಡು ಲಕ್ಷ ಟನ್ ನಮಗೆ ಬೇಕಾಗಿತ್ತು. ಆದರೆ ಅಷ್ಟು ನಮಗೆ ಪುರೋಟು ಆಗಿಲ್ಲ. ನಮಗೆ ಸಿಕ್ಕಷ್ಟು ಗೊಬ್ಬರವನ್ನು ಹಂಚುವ ಪದ್ಧತಿ ಹೇಗಿದೆ ಎಂದರೆ ಸೊಸೈಟಿ ಮುಖಾಂತರ ಹಂಚುತ್ತಾರೆ. ಅವರು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಾರೆ. 20 ಚೀಲ ಗೊಬ್ಬರವನ್ನು ತೆಗೆದುಕೊಳ್ಳಬೇಕಾದವನು ತನ್ನ ಹತ್ತಿರ ರೊಕ್ಕವಿಲ್ಲದೆ ನಾಲ್ಕು ಚೀಲಗಳನ್ನು ತೆಗೆದುಕೊಳ್ಳುತ್ತಾನೆ. ಆದರೆ ಆ ನಾಲ್ಕು ಚೀಲಗಳನ್ನು ಆತನಿಗೆ ಕೊಟ್ಟು ಉಳಿದ ಚೀಲಗಳನ್ನು ಛೇರ್ಮನ್ನರು ಮತ್ತು ಸದಸ್ಯರು ಮತ್ತೊಬ್ಬರಿಗೆ ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುತ್ತಾರೆ. ಆದುದರಿಂದ ಆರಿಸಿ ಬಂದಂಥ ಸದಸ್ಯರಿರುವ ಪಂಚಾಯಿತಿ ಅಥವಾ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನವರು ಹಂಚುವಂಥ ಒಂದು ವ್ಯವಸ್ಥೆಯನ್ನು ಮಾಡ ಬಹುದು. ಸರ್ವಿಸ್ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಕೆಲವೊಂದು ಜನರು ರೊಕ್ಕ ತುಂಬಿ ಆರಿಸಿಬಂದಿರುತ್ತಾರೆ. ಷೇರ್ ಕ್ಯಾಪಿಟಲ್ ತಾವೇ ಹಾಕಿ ಅಥವಾ ತಾವೇ ವಸೂಲ್ಮಾಡಿ 50 ಜನ ಷೇರುದಾರರನ್ನು ತಮ್ಮ ಅಧೀನದಲ್ಲಿ ಇಟ್ಟು ಕೊಂಡಿರುತ್ತಾರೆ. ಅಂಥವರೇ ಆರಿಸಿ ಬರುವ ಸಂಭವವಿದೆ. ಆದರೆ ಪಂಚಾಯಿತಿ ಮತ್ತು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಈಗ ಎಲ್ಲರಿಂದ ಆರಿಸಿ ಬಂದಂಥ ಸದಸ್ಯರಿದ್ದಾರೆ. ಒಂದು ಗ್ರಾಮದಲ್ಲಿ 104 ಕುಟುಂಬಗಳಿದ್ದರೆ ಅಲ್ಲಿರುವ ಎಲ್ಲ ಕುಟುಂಬಗಳದರೂ ಸದಸ್ಯರಾಗಲೇಬೇಕು. ಅಂಥ ಸೊಸೈಟಿಗಳನ್ನು ಸ್ಥಾಪನೆ ಮಾಡಿಕೊಂಡರೆ ಪ್ರತಿ ಕುಟುಂಬದವರಿಗೂ ಅವರು ಸದಸ್ಯರಾಗಿರುವುದರಿಂದ ಅವರಿಗೆ ತಮ್ಮ ಜವಾಬ್ದಾರಿ ಗೊತ್ತಿರುತ್ತದೆ. ಆಗ ಅವರಿಗೆ ಎಷ್ಟು ಗೊಬ್ಬರ ಬೇಕು, ಎಷ್ಟು ಬೀಜ ಬೇಕು ಎಂದು ಹೇಳುವುದಕ್ಕೆ ಸಾಧ್ಯವಾಗುತ್ತದೆ. ಗ್ರಾಮದಲ್ಲಿರುವ ಎಲ್ಲರೂ ಒಟ್ಟುಗೂಡಿ ಸರ್ವಿಸ್ ಕೋ-ಆಪರೇಟಿವ್ ಸೊಸೈಟಿ ಮಾಡಿಕೊಂಡರೆ ಅದರ ಮುಖೇನ ಬೀಜ, ಗೊಬ್ಬರ ಇವುಗಳನ್ನು ಹಂಚಿಕೆ ಮಾಡಬಹುದು. ಈಗಿರುವಂತೆ ಒಂದೊಂದು ಜಿಲ್ಲೆಗೆ 10-15 ಜನ ರಿಜಿಸ್ಟರ್ಡ್ ಸೀಡ್ ಡೀಲರ್ಸ್ ಎಂದು ನೇಮಿಸಬಾರದು.

(ಶ್ರೀ ಎಸ್. ವಿ. ಅಗ್ನಿಹೋತ್ರಿ)

ಚಿಕ್ಕ ನೀರಾವರಿ ಬಗ್ಗೆ ಹೇಳಬೇಕಾದರೆ ಅದರಿಂದ ಹೆಚ್ಚು ಅನುಕೂಲವಿದೆ. ದೊಡ್ಡ ನೀರಾವರಿ ಕೆಲಸದಲ್ಲಿ 30-35 ವರ್ಷಕ್ಕೆ ಬೆಳೆ ಸಿಕ್ಕಬಹುದು. ಆಗ ನಾವು ಈ ಸಭೆಯ ಸದಸ್ಯರಾಗಿರುವುದಿಲ್ಲ, ಮಾನ್ಯ ಅಧ್ಯಕ್ಷರೂ ಇರುವುದಿಲ್ಲ. ಮುಂದಿನ ಜನಾಂಗಕ್ಕೆ ಏನಾಗುತ್ತದೆ ಎಂದು ತಿಳಿದುಕೊಳ್ಳುವವರು ಸಹಿತ ಇರುವುದಿಲ್ಲ. ಚಿಕ್ಕ ನೀರಾವರಿಯಿಂದ ಈಗ ಬದುಕುತ್ತೇವೆ ಎನ್ನುವ ಆಸೆ ಹುಟ್ಟುತ್ತದೆ. ಚಿಕ್ಕ ನೀರಾವರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ನಾವು ಚಿಕ್ಕ ನೀರಾವರಿ ಕೆಲಸಗಳ ವಿಚಾರದಲ್ಲಿ ಕೇಳಿದಾಗಿಲ್ಲೆಲ್ಲ ಮಾನ್ಯ ಆಲೂರು ಹನುಮಂತಪ್ಪನವರು ಇನ್‌ವೆಸ್ಟಿಗೇಷನ್‌ನಲ್ಲಿದೆ ಎಂದು ಹೇಳುತ್ತಾರೆ. ಎಲ್ಲಿಯವರೆಗೆ ಇನ್‌ವೆಸ್ಟಿಗೇಷನ್‌ನಲ್ಲಿರುತ್ತದೆ, ಅದು ಯಾವಾಗ ಮುಗಿಯುತ್ತದೆ, ಇನ್ನೂ ಎಷ್ಟು ವರ್ಷ ಬೇಕು ಎಂದು ಹೇಳುವುದಿಲ್ಲ. ಇನ್‌ವೆಸ್ಟಿಗೇಷನ್ ಎನ್ನುವ ಶಬ್ದವನ್ನು ತೆಗೆದು ಹಾಕಿರಿ. ಚಿಕ್ಕ ನೀರಾವರಿ ಸಲುವಾಗಿ ಕೆರೆಗಳ ಹೂಳು ತೆಗೆಸಿರಿ, ಹೊಸ ಕೆರೆಗಳನ್ನು ಕಟ್ಟಿರಿ, ಕಿತ್ತುಹೋಗಿರುವ ಕೆರೆಗಳನ್ನು ರಿಪೇರಿ ಮಾಡಿರಿ ಎಂದು ಕೇಳಿದರೆ ಇನ್‌ವೆಸ್ಟಿಗೇಷನ್ ನಡೆಸಿದ್ದೇವೆ ಎಂದು ಹೇಳುತ್ತಾರೆ. ನನಗಿಂತ ಹಿಂದಿನಿಂದ ಬಂದಂಥ ಸದಸ್ಯರೆಲ್ಲ ಇನ್‌ವೆಸ್ಟಿಗೇಷನ್ ಮಾಡುತ್ತೇವೆ ಎಂದು ಹೇಳಿದ್ದನ್ನು ಕೇಳಿ ಬಂದರು. ನನ್ನ ಸದಸ್ಯತ್ವದ ಅವಧಿಯಲ್ಲಿ ಆದರೂ ನಮ್ಮ ಭಾಗಕ್ಕೆ ಚಿಕ್ಕ ನೀರಾವರಿ ಕೆಲಸಗಳನ್ನು ಮಾಡಿಸಲು ಗಮನ ಕೊಡಬೇಕು. ನಮ್ಮಲ್ಲಿ ದೊಡ್ಡ ದೊಡ್ಡ ಹಳ್ಳಗಳಿಲ್ಲ, ಹೊಳೆಗಳಿಲ್ಲ. ಬಾವಿಯಿಂದ ನೀರನ್ನು ಪಡೆದು ವ್ಯವಸಾಯವನ್ನು ಅಭಿವೃದ್ಧಿಪಡಿಸಬೇಕಾಗಿದೆ. ನಮ್ಮಲ್ಲಿ 120 ಅಡಿ ಆಳ ಅಗೆದರೂ ನೀರು ಬರುವುದಿಲ್ಲ. ಇದರಿಂದ ಹೆಚ್ಚು ಖರ್ಚು ಬೀಳುತ್ತಿದೆ. ಬಾವಿ ಅಗೆಯುವ ಕೆಲಸಕ್ಕೆ ಐದು ಸಾವಿರ ರೂಪಾಯಿಗಳ ವರೆಗೆ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಸಾಲ ನಮ್ಮ ರೈತರಿಗೆ ದೊರೆಕಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಂಡರ್ ಗ್ರೌಂಡ್ ಡ್ರೈನೇಜ್ ಸ್ಕೀಂ ತೆಗೆದುಕೊಂಡು ಧಾರವಾಡದಲ್ಲಿ 37 ಲಕ್ಷರೂಪಾಯಿ ಖರ್ಚು ಮಾಡಿದ್ದಾರೆ. ದೊಡ್ಡ ದೊಡ್ಡ ನಗರಗಳಲ್ಲಿ ಅಂಡರ್ ಗ್ರೌಂಡ್ ಡ್ರೈನೇಜ್‌ನಲ್ಲಿ ಬರುವ ಕಶ್ಮಲ ಮತ್ತು ನೀರನ್ನು ವ್ಯರ್ಥ ಮಾಡದೆ ಗೊಬ್ಬರ ತಯಾರಿಸಲು ಉಪಯೋಗಿಸುತ್ತಾರೆ. ಇದೇ ರೀತಿ ಧಾರವಾಡ ಮತ್ತು ಇತರ ಕಡೆ ಗೊಬ್ಬರ ತಯಾರು ಮಾಡಿದರೆ ಅನುಕೂಲವಾಗುತ್ತದೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ನಾವು ಪ್ರತಿಯೊಂದಕ್ಕೂ ಪರರಾಷ್ಟ್ರಗಳ ಮೇಲೆ ಅವಲಂಬಿಸುತ್ತಿದ್ದೇವೆ. ಪರರಾಷ್ಟ್ರಗಳಿಂದ ಎಲ್ಲ ಸಾಮಾನುಗಳೂ ಸಿಕ್ಕುತ್ತವೆಂದು ಇಲ್ಲ. ಪಾಕಿಸ್ಥಾನ ಭಾರತದೊಡನೆ ನಡೆಸಿದ ಯುದ್ಧದಲ್ಲಿ ಅವರು ಬಳಸಿದ ಪೇಟನ್ ಟ್ಯಾಂಕ್‌ಗಳು, ಪೇಷೆಂಟ್ ಟ್ಯಾಂಕುಗಳಾದವು, ಸೆಬರ್ ಜೆಟ್ ವಿಮಾನಗಳೆಲ್ಲ ಸಾಬರ್ ಜೆಟ್ ವಿಮಾನಗಳಾದುವು. ಆದರೆ ಭಾರತದವರು ಪರ ರಾಷ್ಟ್ರಗಳಿಂದ ಬಂದ ಉಪಕರಣಗಳ ಮೇಲೆ ಅವಲಂಬನೆ ಮಾಡದೆ ಯುದ್ಧದಲ್ಲಿ ಗೆದ್ದೆವು. ಭಾರತದ ಸೇನೆ ಬೆಂಗಳೂರಿನಲ್ಲಿ ತಯಾರಾದಂಥ ನ್ಯಾಟ್ ವಿಮಾನಗಳನ್ನು ಬಳಸಿ ಅಸಾಧ್ಯ ಕೆಲಸ ಮಾಡಿದರು. ಆದುದರಿಂದ ನಮ್ಮಲ್ಲಿರುವ ರಿಸೋರ್ಸಸ್, ನಮ್ಮವರ ಬುದ್ಧಿ, ನಮ್ಮವರ ಕರ್ತವ್ಯ ಇವುಗಳಿಂದ ನಮ್ಮ ಒಕ್ಕಲುತನಕ್ಕೆ ಬೇಕಾಗುವ ಗೊಬ್ಬರ, ಸುಧಾರಿಸಿದ ಬೀಜ ಹೀಗೆ ಎಲ್ಲವನ್ನೂ ನಮ್ಮಲ್ಲಿಯೇ ತಯಾರಿಸಬೇಕು ಎಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್, ಫುಡ್ ಡಿಪಾರ್ಟ್‌ಮೆಂಟ್, ಮತ್ತು ಸಪ್ಲಾಯ ಡಿಪಾರ್ಟ್‌ಮೆಂಟ್ ಇವು ಮೂರು ಒಟ್ಟಿಗೆ ಕೆಲಸ ಮಾಡಿದರೆ ಮಾತ್ರ ನಮ್ಮ ಉದ್ಧಾರವಾಗುತ್ತದೆ. ಇಲ್ಲದಿದ್ದರೆ ಇಲ್ಲ ಎಂದು ಹೇಳಿ ಅಧ್ಯಕ್ಷರು ಇದೇ ರೀತಿ ನನಗೆ ಐದು ನಿಮಿಷದ ಅವಕಾಶವನ್ನು ಕೊಡುತ್ತಿರಬೇಕು ಎಂದು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಹಾಂತಸ್ವಾಮಿ ವಿರೂಪಾಕ್ಷಯ್ಯ (ಷೋರಾಪುರ).—ಸ್ವಾಮಿ, ಅಧ್ಯಕ್ಷರೇ ಇಂದು ಅಧಿಕ ಆಹಾರ ಬೆಳೆಯಿರಿ ಮತ್ತು ಕೊರತೆಯನ್ನು ತೊಡೆದುಹಾಕಿರಿ ಎನ್ನುವ ತತ್ವವನ್ನು ಯಶಸ್ವಿ ಮಾಡಬೇಕಾದರೆ ಕೇವಲ ಮೂಲಭೂತವಾದ ಒಂದೆರಡು ಪದ್ಧತಿಗಳನ್ನು ನಾನು ಸರ್ಕಾರದ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಈ ತತ್ವವನ್ನು ನೂರಕ್ಕೆ ನೂರುಪಾಲು ಯಶಸ್ವಿ ಮಾಡಬೇಕಾದರೆ ಮೊಟ್ಟ ಮೊಲು ಭೂಮಿ, ಆಮೇಲೆ ಆ ಭೂಮಿಗೆ ಬೇಕಾದ ಉತ್ಕೃಷ್ಟವಾದ ಉತ್ತಮ ಬೀಜಗಳು ಇವೆರಡೇ ಈ ತತ್ವಕ್ಕೆ ಮೂಲಭೂತ ವಸ್ತುಗಳು. ಇವೆರಡರಲ್ಲಿ ಭೂಮಿಯನ್ನು ಒಳ್ಳೆಯ ಪದ್ಧತಿ ಪ್ರಕಾರ ಹದ ಮಾಡಬೇಕಾದರೆ, ಯಾವುದಾದರೂ 19 ಜಿಲ್ಲೆಗೆ ಅನುಸರಿಸತಕ್ಕ ಪದ್ಧತಿ ಎಂದು ಹೇಳುವುದಿಲ್ಲ, ಜೋಳ ಬೆಳೆಯುತಕ್ಕ ಒಂದೆರಡು ಜಿಲ್ಲೆಗಳು, ಭತ್ತ ಬೆಳೆಯುತಕ್ಕ ಭಾಗದಲ್ಲಿ ಒಂದೆರಡು ಜಿಲ್ಲೆಗಳು ಮತ್ತು ಗೋಧಿ ಬೆಳೆಯುತಕ್ಕ ಭಾಗದಲ್ಲಿ ಒಂದು ಜಿಲ್ಲೆ ಹೀಗೆ ತೆಗೆದುಕೊಂಡು ಒಂದು ಜಿಲ್ಲೆಯಲ್ಲಿ ಹೋಬಳಿ ಮಟ್ಟದ ಮೇಲೆ ಒಂದೊಂದು ಟ್ರಾಕ್ಟರ್ ಇಟ್ಟುಕೊಂಡು ಸುಧಾರಿಸಿದ ಬೇಸಾಯಕ್ಕೆ ಜನರ ಮನಸ್ಸನ್ನು ಒಲಿಸಲು ಸುಧಾರಿಸಿದ ಪದ್ಧತಿ ಮೇಲೆ ಬೇಸಾಯ ಮಾಡಿಸಿ ಅವರಿಗೆ

ಪದ್ಧತಿ ಪೂರ್ವಕವಾಗಿ ಬೇಸಾಯ ಮಾಡಲು ಮನಸ್ಸು ಹತ್ತುವಂತೆ ಮಾಡುವುದು ಮೊದಲನೆಯದು. ಇದನ್ನು ಸುಧಾರಿಸಿದ ಬೇಸಾಯ ಎಂದು ಕರೆದರೂ ಅಡ್ಡಿಯಿಲ್ಲ. ಈ ಭವನದ ಮುಂದೆ ಇರತಕ್ಕ ಪ್ರಶ್ನೆ ಒಳ್ಳೆಯ ರೀತಿಯಿಂದ ನೀಗಬೇಕಾದರೆ, ಮೊಟ್ಟಮೊದಲು ಭೂಮಿಯನ್ನು ಸುಧಾರಿಸಿದ ಪದ್ಧತಿ ಮೇಲೆ ಬೇಸಾಯಮಾಡಬೇಕು. ನಮ್ಮ ಮಿತ್ರರು ಹೇಳಿದ ಹಾಗೆ ರೈತರಿಗೆ ಬೇಕಾಗಿರತಕ್ಕಂಥ ಸುಧಾರಿಸಿದ ಬೀಜಗಳನ್ನು ಕೊಡಲು, ರಿಜಿಸ್ಟರ್ಡ್ ಸೀಡ್ ಗ್ರೋಯರ್ಸ್ ಸಾಕಷ್ಟು ಭೂಮಿಯಲ್ಲಿ ಬೀಜವನ್ನು ಉತ್ಪಾದನೆ ಮಾಡುತ್ತಾ ಇದ್ದಾರೆಯೇ? ಎಂದು ನೋಡಬೇಕು. ಮಾನ್ಯ ಸದಸ್ಯರು ಹೈಬ್ರೀಡ್ ಬೀಜಗಳನ್ನು ತರಿಸಿ ಸಪ್ಲೈ ಮಾಡಬೇಕು ಎಂದು. ಪರದೇಶದಿಂದ ಅದನ್ನು ತರಿಸುವುದು ಅಸಾಧ್ಯ. ಇನ್ನು ಜೋಳ ಬೆಳೆಯತಕ್ಕ ಭಾಗದಲ್ಲಿ ಒಂದು ಜಿಲ್ಲೆ ಆರಿಸಿಕೊಂಡು ಆ ಜಿಲ್ಲೆಯಲ್ಲಿ ಚಿಕ್ಕ ಚಿಕ್ಕ ಹೈಬ್ರೀಡ್ ಬೀಜ ಬೆಳೆಯತಕ್ಕ ಕೇಂದ್ರಗಳನ್ನು ಆರಿಸಿ ಸುಧಾರಿಸಿದ ಬೀಜಗಳನ್ನು ಭೂಮಿಯಲ್ಲಿ ಹಾಕಿ ಉತ್ಕೃಷ್ಟ ಹೈಬ್ರೀಡ್ ಬೀಜದ ಬೆಳೆ ಹೇಗೆ ಬೆಳೆಯುವುದು ಎಂಬುದನ್ನು ರೈತರಿಗೆ ತೋರಿಸಿದರೆ, ಅದರಿಂದ ರೈತರಿಗೆ ಅನುಕೂಲವಾಗುತ್ತದೆ. ಹಿಂದೆ ಮುಂಬಯಿ ಪ್ರಾಂತಕ್ಕೆ ಪ್ರಸಿದ್ಧವಾದ ಬಿಜಾಪುರ ಜಿಲ್ಲೆಯಲ್ಲಿ ನೂರು ಮೈಲು ಹರಿಯುವ ದೋಣಿಯ ಬೆಳೆ ಇಡೀ ಪ್ರಾಂತಕ್ಕೆ ಸಾಕಾಗುವಷ್ಟು ಗೋಧಿ ಬೆಳೆಯುವ ಸಂಪ್ರದಾಯ ಇತ್ತು. ಹೈಬ್ರೀಡ್ ಗೋಧಿ ಬೆಳೆಯತಕ್ಕ ಕೇಂದ್ರವನ್ನು ಸ್ಥಾಪಿಸಿ ಉತ್ತಮವಾದ ಬೀಜವನ್ನು ನೂರು ಮೈಲುದ್ದದಲ್ಲಿದ್ದು ವ್ಯವಸಾಯ ಮಾಡುವ ರೈತರಿಗೆ ಒಪ್ಪಿಸಿದ್ದೇ ಆದರೆ ಕರ್ನಾಟಕಕ್ಕೆ ಸಾಕಾಗುವ ಗೋಧಿಯನ್ನು ಅಲ್ಲಿ ಬೆಳೆದು ನಮಗೆಲ್ಲರಿಗೂ ಕೊಡಬಹುದು. ಹೀಗೆ ಭತ್ತ ಬೆಳೆಯುವ ಪ್ರದೇಶವನ್ನು ಒಂದೇ ಒಂದು ಜಿಲ್ಲೆ ಆರಿಸಿಕೊಂಡಲ್ಲಿ 4-5 ತಾಲ್ಲೂಕುಗಳಲ್ಲಿ ಹೈಬ್ರೀಡ್ ಬೆಳೆಯತಕ್ಕ ಕೇಂದ್ರಗಳನ್ನು ಸ್ಥಾಪಿಸಿ ಬೇಸಾಯಗಾರರಿಗೆ ಸುಧಾರಿಸಿದ ಬೀಜಗಳನ್ನು ಒದಗಿಸಿದ್ದೇ ಆದರೆ ಈಗ ಬೆಳೆಯುವ ಪ್ರಮಾಣಕ್ಕಿಂತಲೂ ಸುಮಾರು 4-6 ಪಟ್ಟು ಹೆಚ್ಚು ಬೆಳೆದು ಕರ್ನಾಟಕಕ್ಕೆ ಈ ಆಹಾರದ ಅಭಾವ ಮತ್ತು ಕೊರತೆ ಮಟ್ಟವನ್ನು ಇಳಿಸಬಹುದು. ಹೇಗೆಂದರೆ ನನ್ನ ತಾಲ್ಲೂಕಿನಲ್ಲಿ ಹನ್ನೆರಡು ತಿಂಗಳು ನೀರು ಹರಿಯುವ 35 ಮೈಲು ಉದ್ದದ ಒಂದು ಹಳ್ಳ ಇದೆ. ಅಲ್ಲಿ ದಂಡೆಯ ಮೇಲೆ 25-30 ಗ್ರಾಮಗಳವರು ವಾಸಮಾಡುತ್ತಿದ್ದಾರೆ. ಅಲ್ಲಿ ಕೇವಲ ಮೂರು ಗ್ರಾಮವಾಸಿಗಳು ಅಣೆಕಟ್ಟು ಹಾಕಿ 35-40 ಎಕರೆ ನೀರಾವರಿಯಾಗತಕ್ಕ ಸನ್ನಿವೇಶ ಇದೆ. ನಮ್ಮ ತಾಲ್ಲೂಕಿನಲ್ಲಿ ಇದುವರೆಗೆ ವಿದ್ಯುತ್ ಇರಲಿಲ್ಲ. ಈಗ ವಿದ್ಯುತ್ ಬಂದಿದೆ. ತಮಗೆ ಅಣೆಕಟ್ಟು ಕೊಡಲಿಕ್ಕೆ ಹಣ ಇರಲಿಕ್ಕಿಲ್ಲ. ಈ ಗಂಡಾಂತರ ಪರಿಸ್ಥಿತಿಯಲ್ಲಿ ಅಲ್ಲಿ ವಿದ್ಯುತ್ ಲೈನನ್ನು ಎಳೆದು ವಿಶೇಷ ಯೋಜನೆಯನ್ನು ಹಾಕಿಕೊಂಡು ವಿದ್ಯುತ್ ಮತ್ತು ಪಂಪು ಸೆಟ್ಟುಗಳನ್ನು ಕೊಟ್ಟರೆ ಅಲ್ಲಿ 50 ರಿಂದ 100 ಎಕರೆಯವರೆಗೆ ನೀರಾವರಿಯಾಗಿ 30-35 ಹಳ್ಳಿಗಳಲ್ಲಿ ಸುಮಾರು ಸಾವಿರಾರು ಚೀಲ ಆಹಾರ ಧಾನ್ಯಗಳನ್ನು ಬೆಳೆಯಬಹುದು. ಆದ್ದರಿಂದ ಈ 30-35 ಹಳ್ಳಿಗಳನ್ನು ವಿಶೇಷವಾದ ಯೋಜನೆಗೆ ಒಳಪಡಿಸಿ ಅಲ್ಲಿ ಉತ್ತಮವಾದ ಬೇಸಾಯಕ್ಕೆ ಬೇಕಾದಂಥ ಸಲಕರಣೆಗಳನ್ನು ಮತ್ತು ವಿದ್ಯುತ್ ಪಂಪುಸೆಟ್ಟುಗಳನ್ನು ಉತ್ತಮವಾದಂಥ ಗೊಬ್ಬರವನ್ನು ಅವರಿಗೆ ಕೊಟ್ಟರೆ ಈ ತಾಲ್ಲೂಕು ಏಕೆ, ಒಂದು ಜಿಲ್ಲೆಯ ಆಹಾರ ಅಭಾವವನ್ನು ಹೋಗಲಾಡಿಸಬಹುದು. ಅದನ್ನು ಮಾಡಿಸಿಕೊಡಬೇಕೆಂದು ಎಷ್ಟೋ ಸಲ ಚಿಕ್ಕ ನೀರಾವರಿ ಉಪಮಂತ್ರಿಗಳಿಗೆ ಪ್ರಾರ್ಥಿಸಿಕೊಂಡೆ. ನಮ್ಮ ತಾಲ್ಲೂಕಿನಲ್ಲಿ ಚಿಂಚೋಳಿ ಗ್ರಾಮದಲ್ಲಿ ಹಾಲಿ ಒಡ್ಡು ಹಾಕಿಕೊಂಡ ಸುಮಾರು 180 ಎಕರೆಗೆ ನೀರು ಬಿಡಿಸಿಕೊಂಡಿದ್ದಾರೆ. ಇದನ್ನು ಒಂದು ಯೋಜನೆಯಲ್ಲಿ ಒಳಪಡಿಸಿ ಅಣೆಕಟ್ಟು ಹಾಕಿ ಉತ್ತಮಪಡಿಸಿದರೆ ಸಾವಿರಾರು ಚೀಲ ಉತ್ತಮವಾದ ಗೋಧಿಯ ಜೋಳದ ಬೆಳೆಯನ್ನು ಬೆಳೆಯಬಹುದು ಎಂದು ಪ್ರಾರ್ಥಿಸಿಕೊಂಡೆ. ಆದರೆ ಈ ಪ್ರಾರ್ಥನೆ ಗಾಳಿ ಗೋಪುರವಾಗಿರಬಹುದು. ಸದ್ಯಕ್ಕೆ ಉಪಮಂತ್ರಿಗಳು ತಲೆ ಅಲ್ಲಾಡಿಸುತ್ತ ಇದ್ದಾರೆ. ಅದನ್ನೇ ಕಾರ್ಯರೂಪಕ್ಕೆ ತಂದು, ಅಣೆಕಟ್ಟನ್ನು ಹಾಕಿ 300 ಎಕರೆ ಸಾಗುವಳಿ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥಿಸಿ ಅಧ್ಯಕ್ಷರಿಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸಭಾಪತಿಯವರೇ, ಆಹಾರದ ಬೆಳವಣಿಗೆ ವಿಚಾರದಲ್ಲಿ ಶ್ರೀಮಾನ್ ಸಿದ್ದಯ್ಯನವರು ಮಂಡಿಸಿರತಕ್ಕಂಥ ನಿರ್ಣಯವನ್ನು ಸ್ವಾಗತಮಾಡಿ ಕೆಲವು ಸಲಹೆಗಳನ್ನು ನಾನು ಕೊಡುತ್ತೇನೆ. ಅನೇಕ ಸದಸ್ಯರು ನಿನ್ನೆಯಿಂದ ಆಹಾರ ಧಾನ್ಯಗಳನ್ನು ಹೆಚ್ಚಿಗೆ ಬೆಳೆಯುವುದರ ಬಗ್ಗೆ ಎಷ್ಟರಮಟ್ಟಿಗೆ ರೈತರಿಗೆ ಸರ್ಕಾರದಿಂದ ಸಹಾಯ ಸಿಗಬೇಕು ಈಗ ಏನೂ ಸಿಕ್ಕುತ್ತಾ ಇಲ್ಲ, ಏನು ತೊಂದರೆಯಾಗುತ್ತಿದೆ ಎನ್ನುವುದನ್ನು ಪ್ರತಿಯೊಬ್ಬರೂ ಕೂಡ ಒಂದೊಂದು ಸ್ವರೂಪದಲ್ಲಿರತಕ್ಕ ವಿಚಾರಗಳನ್ನೂ ಸತ್ಯಾಂಶವನ್ನೂ ಸಭೆಯ ಮುಂದೆ ತಿಳಿಸಿದ್ದಾರೆ. ನಾನು ಈ ಗೋಜಿಗೆ ಹೋಗದೆ ಆಹಾರ ಧಾನ್ಯ ಹೆಚ್ಚಿಗೆ ನಾವು ಈ ಒಂದು ಪರಿಸ್ಥಿತಿಯಲ್ಲಿ ಬೆಳೆಯಬೇಕಾದರೆ, ಏನು ಸರ್ಕಾರ ಹೊಸ ಸ್ವರೂಪವನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ನನಗೆ ತಿಳಿದ ಮಟ್ಟಿಗೆ ಸಲಹೆ ಕೊಡುತ್ತೇನೆ. ಈ ಒಂದು ವ್ಯವಸಾಯದ ಖಾತೆ ಹೊಸ ಸ್ವರೂಪವನ್ನು ತಾಳಬೇಕು. ಏನು

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಹೊಸ ಸ್ವರೂಪ ಎಂದರೆ ನಮ್ಮ ಶತ್ರುವಾಗಿರತಕ್ಕ ಪಾಕೀಸ್ಥಾನಕ್ಕೆ ನಮ್ಮ ಭಾರತೀಯರು ಯಾರಾದರೂ ಸಹಾಯ ಮಾಡತಕ್ಕವರು ಇದ್ದರೆ, ಅಂತಹವರನ್ನು ರಕ್ಷಣಾ ಕಾನೂನು ಪ್ರಕಾರ ಹೇಗೆ ಹಿಡಿದು ಜೈಲಿನಲ್ಲಿ ಕೂಡಿಸುತ್ತಾರೋ ಆ ರೀತಿ ಸ್ವರೂಪ ಇದು ತಾಳಬೇಕಾಗಿದೆ. ಇದು ತಾಳದೆ ಇದ್ದರೆ ನಿಜವಾಗಿ ಭಾಷಣ ಮಾಡತಕ್ಕಂಥಾದ್ದು ಭಾಷಣವಾಗಿ ಉಳಿಯುತ್ತದೆಯೇ ಹೊರತು ಆಹಾರ ಧಾನ್ಯದ ಬೆಳವಣಿಗೆಗೆ ಹೆಚ್ಚಿಗೆ ಅನುಕೂಲವಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಏತಕ್ಕೆಂದರೆ ವ್ಯವಸಾಯಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಅಧಿಕಾರಿಗಳು ಅವರ ಕ್ಷೇತ್ರದಲ್ಲಿ ರೈತನ ಮನೆ ಬಾಗಿಲಿಗೆ ಹೋಗಿ ಸಾಕಷ್ಟು ಮಟ್ಟಿಗೆ ಬೀಜ ಮತ್ತು ಗೊಬ್ಬರವನ್ನು ಕೊಡದಿದ್ದರೆ ಟಾರ್ಜೆಟ್ಟನ್ನು ಮುಟ್ಟುವುದಿಲ್ಲ ಎನ್ನುವುದನ್ನು ಪರ್ಯಾಲೋಚನೆ ಮಾಡಿ ಅಂತಹವರ ಮೇಲೆ ರಕ್ಷಣಾ ಕಾನೂನನ್ನು ಉಪಯೋಗ ಮಾಡಿ, ಅಂಥವರನ್ನು ಜೈಲಿಗೆ ಹಾಕಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸೊಸೈಟಿಗಳಿಂದಾಗಲೀ ಅಥವಾ ಖಾಸಗಿಯವರಿಂದಾಗಲೀ ರಾಸಾಯನಿಕ ಗೊಬ್ಬರವೇನಾದರೂ ಬಂದರೆ ಶ್ರೀಮಾನ್ ಅಗ್ನಿಹೋತ್ರಿಯವರು ಹೇಳಿದ ಹಾಗೆ ಅಧಿಕಾರಿಗಳು ಖಾಸಗಿಯವರು ಸೇರಿಕೊಂಡು ಬ್ಲಾಕ್ ಮಾರ್ಕೆಟ್ ಮಾಡುತ್ತಾರೆ. ಆದ್ದರಿಂದ ಅಂತಹವರನ್ನೂ ಕೂಡ ಕಾನೂನು ವ್ಯಾಪ್ತಿಗೊಳಪಡಿಸಿ ಜೈಲಿಗೆ ಹಾಕುವ ಕೆಲಸವನ್ನು ಯೋಚನೆ ಮಾಡದಿದ್ದರೆ ಆಹಾರ ಉತ್ಪತ್ತಿ ಖಂಡಿತವಾಗಿ ಅಭಿವೃದ್ಧಿಯಾಗುವುದಿಲ್ಲ. ಬೆಳೆ ಹೆಚ್ಚಾಗಿ ಬೆಳೆಯುವುದಕ್ಕಾಗುವುದಿಲ್ಲ. ಇದನ್ನು ನಿದಾರ್ಕ್ಷಿಣ್ಯವಾಗಿ ಯೋಚನೆ ಮಾಡಬೇಕು. ಇಲ್ಲದಿದ್ದರೆ ಯಾವುದಾದರೂ ಒಂದು ಕೇಸು ಹಾಕಿ ಕೋರ್ಟಿಗೆ ಹೋಗಿ ಒಂದು ತಡೆಯಾಜ್ಞೆಯನ್ನು ತೆಗೆದುಕೊಂಡು ಬರುತ್ತಾರೆ. ಆಹಾರಧಾನ್ಯಗಳನ್ನು ಬೆಳೆಯುವವರ ಮೇಲೆ ರಕ್ಷಣಾ ಕಾನೂನನ್ನು ಯೋಧರ ಬಗ್ಗೆ ಅದರಲ್ಲೂ ಯುದ್ಧಮಾಡುವವರ ಮೇಲೆ ಯಾವ ರೀತಿ ಅನುಸರಿಸುತ್ತೀರೋ ಆ ರೀತಿಯಲ್ಲಿ ಅನುಸರಿಸಬೇಕು. ಸಾಮಾನ್ಯವಾಗಿ ಯಾವ ರೀತಿಯಲ್ಲಿ ಯೋಧರು ಜೀವದ ಮೇಲೆ ಆಶೆ ಇಲ್ಲದೆ ಯುದ್ಧದಲ್ಲಿ ಪ್ರಾಣ ಕೊಡುತ್ತಾರೋ ಅಷ್ಟೇ ಆಶೆಯಿಂದ ರಕ್ಷಣಾ ಕಾನೂನನ್ನು ಈ ವ್ಯವಸಾಯ ಕ್ಷೇತ್ರದಲ್ಲಿ ತೆಗೆದುಕೊಳ್ಳದೇ ಹೋದರೆ ನಿಜವಾಗಿ ಆಹಾರ ಅಭಿವೃದ್ಧಿ ನಮ್ಮ ದೇಶದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಬರೀ ಅಧಿಕಾರಿಗಳು ನಾನಾ ಕಾರಣದಿಂದ ಕಾಲಹರಣ ಮಾಡಿ ಈ ಸಭೆಗೆ ಬಂದಾಗ್ಗೆ ಸರ್ಕಾರಕ್ಕೆ ಉತ್ತರಗಳನ್ನು ಕೊಡುತ್ತಾರೆ. ಅವರು ಇವರಿಗೆ ಒಂದು ಬೋಗಸ್ ಅಂಕಿ ಅಂಶಗಳನ್ನು ಕೊಡುವುದರಿಂದ ಇವರು ಇಲ್ಲಿ ಉತ್ತರ ಕೊಡುತ್ತಾರೆ. ಆದರಿಂದಲೇ ಇದೆಲ್ಲಾ ಬೋಗಸ್ಸಾಗಿಯೇ ಉಳಿದಿದೆ. ಯಾವ ತಾಲ್ಲೂಕಿನಿಂದ ಅಥವಾ ಯಾವ ಕ್ಷೇತ್ರದಿಂದ ಅಂಕಿ ಅಂಶಗಳು ಬಂತೋ ಎಂಬುದು ಇವರಿಗೆ ಸರಿಯಾಗಿ ಗೊತ್ತಾಗಿರುವುದಿಲ್ಲ. ಆಯಾ ಕ್ಷೇತ್ರಗಳಿಗೆ ಇವರು ಹೋಗಿರುವುದಿಲ್ಲ. ಆದ್ದರಿಂದ ಯಾರ್ಯಾರು ಸುಳ್ಳು ಲೆಕ್ಕಗಳನ್ನು ಕೊಟ್ಟಿರುತ್ತಾರೋ ಅಂತಹವರನ್ನು ಶಿಕ್ಷೆ ಮಾಡಬೇಕು. ರಕ್ಷಣಾ ಕಾನೂನಿಗನುಸರಿಸಿ ಅವರನ್ನು ಜೈಲಿಗೆ ಹಾಕಬೇಕು. ಇಂತಹ ಉಗ್ರ ಕ್ರಮವನ್ನು ವ್ಯವಸಾಯ ಇಲಾಖೆಯವರು ತೆಗೆದುಕೊಳ್ಳಬೇಕು. ಇತ್ತೀಚೆಗೆ ತೊಗರಿಬೇಳೆಯನ್ನು ಬಚ್ಚಿಟ್ಟಿದ್ದವರನ್ನು ಆಹಾರ ಸಚಿವರಾದ ಶ್ರೀಮಾನ್ ಜತ್ತಿಯವರೇ ಹಿಡಿದಿದ್ದಾರೆ. ಅವರು ಕೋರ್ಟಿಗೆ ಹೋಗಬಹುದು, ತಡೆಯಾಜ್ಞೆಯನ್ನೂ ಸಹ ತರಬಹುದು. ಆದರೂ ಜುಲ್ಮಾನೆಯನ್ನು ರಕ್ಷಣಾ ಕಾನೂನಿಗನುಸಾರವಾಗಿ ಅಂತಹವರನ್ನು ಜೈಲಿಗೆ ಹಾಕಬೇಕು. ಖಾಸಗಿಯವರಾಗಲೀ, ವ್ಯಾಪಾರಸ್ಥರಾಗಲೀ, ಅಧಿಕಾರಿಗಳಾಗಲೀ ತಪ್ಪಿತಸ್ಥರಾಗಿದ್ದರೆ ಅಂತಹವರ ಮೇಲೂ ನಿಷ್ಪಕ್ಷಪಾತವಾಗಿ ಈ ರಕ್ಷಣಾ ಕಾನೂನನ್ನು ಅನ್ವಯಿಸುವ ಒಂದು ಕಾಯಿದೆಯನ್ನು ತೆಗೆದುಕೊಂಡು ಬಂದರೆ ಇರತಕ್ಕದ್ದರಲ್ಲಿ ಸಮೃದ್ಧಿಯಾಗಿ ಸ್ವಲ್ಪಮಟ್ಟಿಗೆ ಅನ್ನವನ್ನು ಒದಗಿಸಿಕೊಳ್ಳಬಹುದು. ಇಂಥಾದ್ದನ್ನು ಮಾಡದಿದ್ದರೆ ಕಳ್ಳತನ ಮಾಡುವವರು ಮಾಡಿಯೇ ಮಾಡುತ್ತಾರೆ, ಸುಳ್ಳು ಹೇಳುವವರು ಹೇಳಿಯೇ ಹೇಳುತ್ತಾರೆ, ದ್ರೋಹ ಮಾಡುವವರು ಮಾಡಿಯೇ ಮಾಡುತ್ತಾರೆ. ದುಡ್ಡು ಹೊಡೆಯುವವರು ಹೊಡೆದೇ ಹೊಡೆಯುತ್ತಾರೆ. ಆದ್ದರಿಂದ ಇನ್ನು ಮುಂದೆ ಈ ವ್ಯವಸಾಯ ಇಲಾಖೆ ಒಂದು ಹೊಸ ಸ್ವರೂಪವನ್ನು ತಾಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ದನಗಳ ದೊಡ್ಡಿಯನ್ನು ಪ್ರತಿಯೊಂದು ಗ್ರಾಮಕ್ಕೂ ಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ದೊಡ್ಡಿ ಬಿಲ್ ಬಂದಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಬಿಲ್ ಬರುವುದಲ್ಲ. ಎಲ್ಲಾ ಪುಸ್ತಕದ ಬದನೇಕಾಯಿ ಆಗಬಾರದು. ಬದನೇಕಾಯಿ ಗದ್ದೆಗಳಲ್ಲಿ ಬೆಳೆದರೆ ಚೆನ್ನಾಗಿರುತ್ತದೆ.

ಇನ್ನು ಕಡ್ಡಾಯವಾಗಿ ನೀರಿನ ಸೌಕರ್ಯ ಪ್ರತಿಯೊಂದು ಗ್ರಾಮಕ್ಕೂ ಕೊಡಬೇಕು. ಈಗಿನ ನೀರಿನ ಸೌಕರ್ಯ ಏನೇನೂ ಸಾಲದು ಕೇವಲ ಒಂದೇ ಒಂದು ಫಸಲನ್ನು ಬೆಳೆಯುತ್ತಾರೆ. ಪ್ರತಿ

ಯೊಂದು ಗ್ರಾಮದಲ್ಲೂ ಬೇಸಿಗೆ ಫಸಲನ್ನು ಹಾಕಲೇಬೇಕು. ಅದೊಂದು ಕಾಯಿದೆ ತರಬೇಕು. ಆಹಾರ ಸಚಿವರು ರೈತ ಬೆಳೆದ ಆಹಾರ ಪದಾರ್ಥಗಳ ಬೆಲೆಯ ವಿಚಾರದಲ್ಲಿ ಕೇಂದ್ರದ ಬೆಲೆ ಏನು ಹೇಳುತ್ತಾರೋ ಅದನ್ನು ಹಾಕದೆ ರೈತರಿಗೆ ಉತ್ಸಾಹ ಉಂಟಾಗತಕ್ಕ ಬೆಲೆಯನ್ನು ನಿರ್ಧಾರ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಪಿ. ಫಾಯಿದೆ (ಅಂಕೋಲ).—ಮಾನ್ಯ ಸಭಾಪತಿಗಳೇ, ಇವತ್ತು ನಮ್ಮ ಮುಂದಿರುವ ಈ ನಿರ್ಣಯವನ್ನು ನಾನು ಅನುಮೋದಿಸುತ್ತಾ ನನ್ನ ಜಿಲ್ಲೆಯ ಬಗ್ಗೆ ಅನ್ವಯಿಸುವ ವಿಚಾರವನ್ನು ಸರ್ಕಾರದ ಮುಂದೆ ತರಲಿಕ್ಕೆ ತಮ್ಮ ಮೂಲಕ ಇಚ್ಛೆಪಡುತ್ತೇನೆ. ಈ ವಿಷಯದಲ್ಲಿ ಮಾನ್ಯ ಸಭೆಯ ಸದಸ್ಯರು ಅನೇಕರು ಕೆಲವು ಸ್ತುತ್ಯವಾದ ವಿಚಾರಗಳನ್ನು ನಮ್ಮ ಮುಂದಿಟ್ಟಿದ್ದಾರೆ.

ಸ್ವಾಮಿ, ಕಾರವಾರ ಜಿಲ್ಲೆ ಬರೀ ಅರಣ್ಯ ಜಿಲ್ಲೆಯಾಗಿದೆ ಅದರ ವಿಸ್ತೀರ್ಣ 3,965 ಚದುರ ಮೈಲಿಗಳಿದ್ದರೆ ಅದರಲ್ಲಿ 3,265 ಚದುರಮೈಲಿಗಳು ಬರೀ ಅರಣ್ಯ ಪ್ರದೇಶ. ಅಂದರೆ ಶೇಕಡ 82 ರಷ್ಟು ಅರಣ್ಯವಿದೆ. ಅದರಲ್ಲಿ ನನ್ನ ತಾಲ್ಲೂಕಿನಲ್ಲಿ ಅದು ಶೇಕಡ 92ರಷ್ಟಿದೆ. ಈಗ ಇಡೀ ದೇಶಕ್ಕೆ ಅರಣ್ಯ ಪ್ರದೇಶ ಶೇಕಡ 33ರಷ್ಟು ಬೇಕಿದ್ದರೂ ಈ ಭಾಗದಲ್ಲಿ ಫಾರೆಸ್ಟ್ ಹೆಚ್ಚಾಗಿರುವುದರಿಂದ ನಮ್ಮಲ್ಲಿ ಬೇಸಾಯಕ್ಕೆ ಬಹಳ ತೊಂದರೆಯಾಗಿದೆ. ಎರಡು ಶತಮಾನಗಳ ಹಿಂದೆ ನಮ್ಮಲ್ಲಿರತಕ್ಕ ಜಮೀನು ಬಹಳ ಫಲವತ್ತಾಗಿತ್ತು. ಈ ಕಾಲದಲ್ಲಿ ಆ ಎರಡು ನೂರು ವರ್ಷಗಳ ಹಿಂದಿನ ಮಟ್ಟಕ್ಕೆ ಬಂದಿಲ್ಲವೆಂದು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. 17ನೇ ಶತಮಾನದಲ್ಲಿ 22 ಸಾವಿರ ಎಕರೆ ಜಮೀನು ಅಡಿಕೆ, ಬಾಗಾಯತ ಇದ್ದುದು 16,500ಕ್ಕೆ ಬಂತು. ತೆಂಗು ಬೆಳೆ 14 ಸಾವಿರ ಇದ್ದುದು 11 ಸಾವಿರಕ್ಕೆ ಬಂದಿದೆ. ನಮ್ಮಲ್ಲಿ ಬೇಸಾಯಕ್ಕೆ ಯೋಗ್ಯವಾದ ಅರಣ್ಯ ಜಮೀನುಗಳಿವೆ. ಆದರೆ ಬೇಸಾಯಕ್ಕೆ ಬೇಕಾದಂಥ ಅಂತಹ ಜಮೀನುಗಳು ನಮಗೆ ಸಿಗುವುದಿಲ್ಲ. ಅದಕ್ಕೋಸ್ಕರ ಅರಣ್ಯ ಇಲಾಖೆಯವರು ಈ ವಿಚಾರದಲ್ಲಿ ಹೆಚ್ಚು ಗಮನವನ್ನು ಕೊಡಬೇಕು. ಆ ಖಾತೆಯವರು ಬರೀ ತಮ್ಮ ಸುಖವನ್ನೇ ಬಯಸುತ್ತಾರೆಯೇ ಹೊರತು ಜನತೆಯ ಸುಖವನ್ನು ಬಯಸುವುದಿಲ್ಲ. ಒಂದು ಉದಾಹರಣೆಯನ್ನು ನಾನು ಈ ಸಂದರ್ಭದಲ್ಲಿ ಕೊಡುತ್ತೇನೆ. ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಎರಡು ಡಿವಿಜನ್ ಆಫೀಸುಗಳು ಧಾರವಾಡದಲ್ಲಿವೆ. ಅವನ್ನು ನಮ್ಮ ಜಿಲ್ಲೆಯಲ್ಲಿ ಸ್ಥಾಪಿಸಬೇಕೆಂದು ಪ್ರಯತ್ನ ಮಾಡಿದ್ದರೂ ಆ ಒಂದು ಪ್ರಯತ್ನದಲ್ಲಿ ಇವರು ವಿಫಲರಾಗಿದ್ದಾರೆ. ಇವರು ತಮ್ಮ ನೌಕರರ ಸುಖ ಸೌಕರ್ಯಗಳಿಗೆ ಹೆಚ್ಚಿಗೆ ಲಕ್ಷ್ಯ ಪೂರೈಸಿದ್ದಾರೆಯೇ ಹೊರತು ಈ ನಮ್ಮ ಜಿಲ್ಲೆಯ ಜನರ ಸುಖ-ಸೌಕರ್ಯವನ್ನು ನೋಡುವುದಿಲ್ಲ. ನಮ್ಮ ಜಿಲ್ಲೆಯ ಬಗ್ಗೆ ಇಷ್ಟು ಅನಾದರಣೆಯ ರೀತಿಯಲ್ಲಿ ನೋಡುವುದು ಬಹಳ ಶೋಚನೀಯ. ಆದ್ದರಿಂದ ನಾನು ತಮ್ಮ ಮುಂದೆ ಒಂದು ವಿಚಾರವನ್ನು ಹೇಳುತ್ತೇನೆ. ನಮ್ಮ ಭಾಗವನ್ನು ಡೆವಲಪ್ ಮಾಡಿದರೆ ಬೇಕಾದಷ್ಟು ಸೌಕರ್ಯಗಳನ್ನು ಸರ್ಕಾರದವರು ದೊರಕಿಸಿಕೊಳ್ಳಬಹುದಾಗಿದೆ. ನಮ್ಮ ಭಾಗದ ಅರಣ್ಯ ಪ್ರದೇಶದಲ್ಲಿ ಫಲವತ್ತಾದ ಭೂಮಿ ಎಷ್ಟೋ ಇದೆ. ನನ್ನ ಜಿಲ್ಲೆಯಲ್ಲಿ 90ರಷ್ಟು ಬೇಚರಾಕ್ ಗ್ರಾಮಗಳಿವೆ. ಅಲ್ಲಿನ ಭೂಮಿಯೆಲ್ಲಾ ಈಗ ಸಾಗು ಮಾಡುವುದಕ್ಕೆ ಬರುತ್ತದೆ. ಅದನ್ನೆಲ್ಲಾ ಬಿಟ್ಟು ಕೊಡುವುವಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ ? ಇಂತಹ ಕಠಿಣ ಆಹಾರ ಪರಿಸ್ಥಿತಿಯಲ್ಲಿ ಅಂತಹ ಜಮೀನುಗಳನ್ನು ಬಿಟ್ಟುಕೊಡದೇ ಇದ್ದರೆ ಅಷ್ಟು ಸಮಂಜಸವಾಗಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಅರಣ್ಯ ಖಾತೆಗೆ ಸಾಗುವಳಿಗೆ ಸಾಧ್ಯವಾದಷ್ಟು ಜಮೀನುಗಳನ್ನು ಅಲ್ಲಿಂದ ಬಿಡುಗಡೆ ಮಾಡುವುವಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಇನ್ನು ನಾನು ಮೊದಲೇ ಹೇಳಿದ ಹಾಗೆ ನಮ್ಮ ಜಿಲ್ಲೆಯಲ್ಲಿ 29,531 ಕೆರೆಗಳಿವೆ. ಅದರ ಪೈಕಿ ಶೇಕಡ 2ರಷ್ಟು ಕೆರೆಗಳು ರಿಪೇರಿಯಾಗಿಲ್ಲ. ಆ ಕೆರೆಗಳಿಂದ ನೀರನ್ನು ಉಪಯೋಗಿಸಿಕೊಂಡು ಬೇಕಾದಷ್ಟು ಬತ್ತ ಮುಂತಾದ ಆಹಾರಧಾನ್ಯಗಳನ್ನು ಬೆಳೆಸುವುದಕ್ಕೆ ಅನುಕೂಲ ಮಾಡಬಹುದು. ಅದ್ದರಿಂದ ಸರ್ಕಾರದವರು ಈ ವಿಚಾರದ ಕಡೆಗೂ ಲಕ್ಷ್ಯ ಪೂರೈಸಬೇಕು.

ಇನ್ನು ಕೊನೆಯದಾಗಿ ಒಂದು ಮಾತು. ಈ ಸಭೆಯ ಮಾನ್ಯ ಸದಸ್ಯರನೇಕರು ಬೇಕಾದಷ್ಟು ಸೂಕ್ತ ಸಲಹೆಗಳನ್ನು ಮಾಡಿದ್ದಾರೆ. ನಮ್ಮ ಭಾಗದಲ್ಲಿ ಹಣ್ಣು ಹಂಪಲುಗಳನ್ನು ಯಥೇಚ್ಛವಾಗಿ ಬೆಳೆಯಬಹುದು. ಸರ್ಕಾರದವರು ಇದರ ಉಪಯೋಗ ಮಾಡಿಕೊಳ್ಳಲು ತಕ್ಕ ವ್ಯವಸ್ಥೆಯನ್ನು ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಒಂದು ಟ್ರಾಕ್ಟರು ಹೈರ್ ಪರಚೇಸ್ ಅನುಕೂಲತೆ ಮೇರೆಗೆ ತೆಗೆದುಕೊಳ್ಳುವುದಕ್ಕಾಗಿಲ್ಲ. ಅದಕ್ಕೂ ಸರ್ಕಾರದವರು ಲಕ್ಷ ಪೂರೈಸಬೇಕು. ಈ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಒಟ್ಟಿನಲ್ಲಿ ನಮ್ಮ ಭಾಗವನ್ನು ಸರ್ಕಾರದವರು ಡೆವಲಪ್ ಮಾಡಿಕೊಂಡರೆ ಅದು ಇಡೀ ದೇಶದಲ್ಲಿ ಒಂದು ಉತ್ತಮ ಭಾಗವಾಗಿ ಪರಿಗಣಿಸುತ್ತದೆಂದೂ ಮತ್ತು ಆ ಬಗ್ಗೆ ಸರ್ಕಾರದವರು ಹೆಚ್ಚಿಗೆ ಲಕ್ಷ್ಯ ಕೊಡಬೇಕೆಂದೂ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Sri Krishna Singh. Member not present.

Mr. SPEAKER.—Gureddi. Not present.

Mr. SPEAKER.—When Hon'ble Members send up names, they should make it a point to stay in the House. Otherwise, it imposes an unnecessary strain and it creates a sort of unhappiness.

(Mr. Speaker also called Sri Basanna, Sri Anjaneya Reddy, Sri R. S. Patil, Sri Shivalinge Gowda, Sri S. Siddiah, Sri K. P. Gadag).

(All the members were not present).

ಶ್ರೀ ಎಸ್. ಬಿ. ವಸ್ತ್ರದ (ಬಿಜಾಪುರ).—ಸನ್ಮಾನ್ಯ ಸಭಾಪತಿಗಳೇ, ಶ್ರೀಮಾನ್ ಸಿದ್ದಯ್ಯನವರು ಈ ಸಭೆಯಮುಂದೆ ತಂದಿರುವ ಗೊತ್ತುವಳಿಯಲ್ಲಿ ಆಹಾರೋತ್ಪಾದನೆಯನ್ನು ಹೆಚ್ಚಿಸಲು ಮತ್ತು ಯಾವುದೇ ರೀತಿಯ ಅಭಾವ ಪರಿಸ್ಥಿತಿಯನ್ನು ತಡೆಗಟ್ಟಲು ಸರ್ಕಾರದವರು ಎಲ್ಲಾ ಕ್ರಮಗಳನ್ನೂ ಕೈಗೊಳ್ಳಬೇಕೆಂದು ಇದೆ. ಈ ಗೊತ್ತುವಳಿಯನ್ನು ನಾನು ಸಂಪೂರ್ಣವಾಗಿ ಹಾರ್ದಿಕವಾಗಿ ಬೆಂಬಲಿಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಒಂದು ಪ್ರಾಮುಖ್ಯವಾದ ಸಂಗತಿ ಏನೆಂದರೆ ಅಲ್ಲಿ ದೋಣಿ ನದಿ ಎನ್ನುವ ಒಂದು ನದಿ ಇದೆ. ಆ ನದಿಯ ನೀರು ಉಪ್ಪು ಇರುವುದರಿಂದ ಆ ನದಿಯ ದಂಡೆಯಲ್ಲಿರತಕ್ಕ ಜಮೀನುಗಳನ್ನು ಅದು ಸೌಳು ಮಾಡಿ ಬೆಳೆಗಳು ಕೆಡುತ್ತಿವೆ. ಅದು ಹತ್ತು ಎಕರೆಯಲ್ಲ, ನೂರು ಎಕರೆಯಲ್ಲ, ಸಾವಿರ ಎಕರೆಯಲ್ಲ, ಸುಮಾರು 30 ಸಾವಿರ ಎಕರೆ ಭೂಮಿಯನ್ನು ಸೌಳು ಮಾಡಿ ಅಲ್ಲಿ ಬೆಳೆಗಳು ಕೆಡುತ್ತಿವೆ. ಆ ಭೂಮಿಯನ್ನು ಉತ್ತಮವಾದ ಬೆಳೆಯುಳ್ಳ ಪ್ರದೇಶವಾಗಿ ಮಾಡಬೇಕೆಂದು ನಾನು ಬಡ್ಜೆಟ್ ಅಧಿವೇಶನದಲ್ಲಿ ಸೂಚನೆ ಮಾಡಿದಾಗ ಅದರ ಬಗ್ಗೆ ಒಂದು ಯೋಜನೆ ಸಿದ್ಧವಾಗಿದೆ, ಮತ್ತು ಅದಕ್ಕೆ ಮಂಜೂರಾತಿ ಕೂಡ ದೊರೆತಿದೆ. ಅದು ಶೀಘ್ರದಲ್ಲಿಯೇ ಕಾರ್ಯರೂಪಕ್ಕೆ ಬರುತ್ತದೆ ಎಂದು ಸರ್ಕಾರದ ಕಡೆಯಿಂದ ಉತ್ತರ ಬಂದಿತ್ತು. ಆ ಯೋಜನೆ ಮಂಜೂರಾಗಿ ಎರಡು ವರ್ಷಗಳಾದರೂ ಕೂಡ ಅದು ಪ್ರತ್ಯಕ್ಷವಾಗಿ ಕಾರ್ಯರೂಪಕ್ಕೆ ಬಂದಿಲ್ಲ. ಇದು ಶೋಚನೀಯವಾದ ಸಂಗತಿ. ಬಿಜಾಪುರ ಜಿಲ್ಲೆಯ ವಿಷಯ ಎಲ್ಲರಿಗೂ ಗೊತ್ತಿದೆ. ಅಲ್ಲಿ ಒಳ್ಳೆಯ ಉತ್ತಮವಾದ ಎರೆಯ ನೆಲ ಇದೆ. ಆದ್ದರಿಂದ ಈ ದೋಣಿ ನದಿಯ ದಂಡೆಯಲ್ಲಿರತಕ್ಕ ಜಮೀನಿನಲ್ಲಿ ಬೆಳೆಯನ್ನು ಬೆಳೆಯುವಂತೆ ಮಾಡಿದರೆ, 30 ಸಾವಿರ ಎಕರೆಯಲ್ಲಿಯೂ ಒಂದೊಂದು ಎಕರೆಗೆ ಒಂದೊಂದು ಪಲ್ಲದಂತೆ ಜೋಳವನ್ನು ಬೆಳೆದರೆ 30 ಸಾವಿರ ಚೀಲ ಜೋಳವನ್ನು ಬೆಳೆಯಬಹುದು. ಒಂದು ಪಲ್ಲ ಜೋಳಕ್ಕೆ 52 ರೂಪಾಯಿನಂತೆ ಲೆಕ್ಕವನ್ನು ಹಾಕಿದರೆ ಸುಮಾರು 15–16 ಲಕ್ಷ ರೂಪಾಯಿ ಆಗುತ್ತದೆ. ಆದ್ದರಿಂದ ಆ ಸೌಳು ಭೂಮಿಯನ್ನು ಉತ್ತಮವಾದ ಬೆಳೆಯುಳ್ಳ ಪ್ರದೇಶವಾಗಿ ಮಾಡತಕ್ಕಂಥ ಯೋಜನೆಯನ್ನು ಆದಷ್ಟು ತೀವ್ರಗತಿಯಿಂದ ಅಮಲಿನಲ್ಲಿ ತಂದು ಅದು ಕಾರ್ಯರೂಪಕ್ಕೆ ಬರುವಂತೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ.

ಇನ್ನು ರೈತರಿಗೆ ಪಂಪುಸೆಟ್ಟುಗಳನ್ನು ಒದಗಿಸತಕ್ಕ ಬಗ್ಗೆ ಸರ್ಕಾರದವರು ಒಂದು ನಿರ್ದಿಷ್ಟವಾದ ನಿಯಮ ಅಥವಾ ತತ್ವವನ್ನು ಇಟ್ಟುಕೊಂಡ ಹಾಗೆ ಕಾಣುವುದಿಲ್ಲ. ಈ ಪಂಪು ಸೆಟ್ಟುಗಳನ್ನು ಕೊಡುವುದಕ್ಕಾಗಿ ಸರ್ಕಾರದವರು ಒಂದು ಅಪ್ರೂವ್ಡ್ ಲಿಸ್ಟ್ ಮಾಡಿದ್ದಾರೆ. ಆ ಲಿಸ್ಟಿನಲ್ಲಿ ಅನೇಕ ಹೆಸರುಗಳು ಇದೆ. ಮತ್ತು ಈ ಲಿಸ್ಟಿನಲ್ಲಿ ಕಂಪೆನಿಗಳ ಹೆಸರೂ ಬಂದಿವೆ. ಆ ಅಪ್ರೂವ್ಡ್ ಲಿಸ್ಟನ್ನು ಯಾವ ರೀತಿ ತಯಾರು ಮಾಡಿದ್ದಾರೋ ಅದು ನನಗೆ ಅರ್ಥವಾಗುವುದಿಲ್ಲ. ನಾವು ಯಾವ ಅರ್ಜಿಯನ್ನು ಕಳುಹಿಸಿದರೂ ಕೂಡ ಅದನ್ನು ಇಂಜಿನಿಯರಿಗೆ ರವಾನೆ ಮಾಡುತ್ತಾರೆ. ಅಲ್ಲಿ ಅಪ್ರೂವ್ಡ್ ಲಿಸ್ಟಿನಲ್ಲಿ ಯಾವ ದೃಷ್ಟಿಯನ್ನಿಟ್ಟುಕೊಂಡು ಪಂಪುಸೆಟ್ಟುಗಳನ್ನು ಕೊಡುವುದಕ್ಕೆ ಹೆಸರುಗಳನ್ನು ಕೊಡುತ್ತಾರೆಯೋ ಸೇರಿಸುತ್ತಾರೆಯೋ ಗೊತ್ತಿಲ್ಲ. ಅಂತೂ ಈ ಅಪ್ರೂವ್ಡ್ ಲಿಸ್ಟನ್ನು ತಯಾರು ಮಾಡುವಾಗ ಒಂದು ನಿರ್ದಿಷ್ಟವಾದ ನೀತಿ ನಿಯಮವನ್ನು ಹಾಕಿಕೊಂಡಹಾಗೆ ಕಾಣುವುದಿಲ್ಲ. ಇದೇ ಒಂದು ಕಾರಣದಿಂದ ಗುಜರಾತ್ ಸರ್ಕಾರದವರು ಅಪ್ರೂವ್ಡ್ ಲಿಸ್ಟ್ ತಯಾರು ಮಾಡುವುದನ್ನು ತೆಗೆದುಹಾಕಿದ್ದಾರೆ. ರೈತರಿಗೆ ಬೇಕಾದಂತಹ ಸೌಲಭ್ಯಗಳನ್ನು ಒದಗಿಸಿ ಕೊಡುವಾಗ ಒಂದು ಅಪ್ರೂವ್ಡ್ ಲಿಸ್ಟನ್ನು ತಯಾರು ಮಾಡಬೇಕೆಂದು ಏನೊಂದು ನಿರ್ಬಂಧನೆಯನ್ನು ಅಲ್ಲಿ ಹಾಕಿಕೊಂಡಿದ್ದಾರೋ ಅದನ್ನು ಅಲ್ಲಿ ತೆಗೆದುಹಾಕಿದ್ದಾರೆ. ಅದೇ ರೀತಿ ಇಲ್ಲಿಯೂ ಕೂಡ ಅಪ್ರೂವ್ಡ್ ಲಿಸ್ಟ್ ತಯಾರು ಮಾಡುವುದನ್ನು ತೆಗೆದುಹಾಕಬೇಕು. ಇಲ್ಲದಿದ್ದರೆ ಯಾವುದಾದರೂ ಒಂದು ನೀತಿ ನಿಯಮವನ್ನು ಹಾಕಿಕೊಂಡು ಅಪ್ರೂವ್ಡ್ ಲಿಸ್ಟನ್ನು ತಯಾರು ಮಾಡಬೇಕು.

ಇನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಯಾವ ಯಾವ ಜಮೀನಿಗೆ ಯಾವ ಯಾವ ಬೀಜ, ಯಾವ ಯಾವ ಗೊಬ್ಬರವನ್ನು ಉಪಯೋಗ ಮಾಡಬೇಕೆಂಬುದನ್ನು ಸರ್ಕಾರದವರು ಪ್ರಚಾರ ಮಾಡ

ಬೇಕು. ಈಗ ನನಗೆ ತಿಳಿದ ಹಾಗೆ ಧಾರವಾಡ ಜಿಲ್ಲೆಯಲ್ಲಿ ಬಾಳಪ್ಪ ಹುಕ್ಕೇರಿ ಎನ್ನುವವರು ಒಬ್ಬರು ಇದ್ದಾರೆ. ಅವರು ವಕ್ಕಲುತನದ ಪ್ರಚಾರ ಕಾರ್ಯ ಮಾಡುತ್ತಿದೆ. ಅಂಥವರನ್ನು ಪ್ರಚಾರ ಕಾರ್ಯ ಮಾಡುವುದಕ್ಕೆ ಸರ್ಕಾರದವರು ಗೊತ್ತು ಮಾಡಬೇಕು. ರೈತರು ಆಲಸ್ಯದಿಂದ ಇರುತ್ತಾರೆ. ಅವರ ಆಲಸ್ಯವನ್ನು ಹೋಗಲಾಡಿಸುವುದಕ್ಕೆ ಸಾಕಷ್ಟು ಪ್ರಚಾರ ಕಾರ್ಯವನ್ನು ಮಾಡಬೇಕು. ಆ ರೀತಿ ಮಾಡುವುದಾದರೆ ರೈತ ಹೆಚ್ಚು ಧಾನ್ಯವನ್ನು ಬೆಳೆಯುವುದಕ್ಕೆ ಹೆಚ್ಚು ಸಮಯವನ್ನು ಉಪಯೋಗಿಸುವುದಕ್ಕೆ ಸಹಾಯವಾಗುತ್ತದೆ. ಆಹಾರ ಧಾನ್ಯವನ್ನು ಬೆಳೆಯುವುದು ಪ್ರಾಮುಖ್ಯವಾದ ವಿಷಯ. ಅದಕ್ಕೆ ಗಮನವನ್ನು ಕೊಡದಿದ್ದರೆ ಜನತೆಗೆ ಬೇಕಾದ ಆಹಾರವನ್ನು ಎಲ್ಲಿಂದ ತಂದುಕೊಡುವುದು ? ಮನುಷ್ಯನಿಗೆ ಸರಿಯಾಗಿ ಆಹಾರ ಇಲ್ಲದೇ ಇದ್ದರೆ ಆರೋಗ್ಯ ಕೆಡುತ್ತದೆ. ಶಿಕ್ಷಣಕ್ಕೆ ತೊಂದರೆ ಉಂಟಾಗುತ್ತದೆ. ಈ ರೀತಿ ಒಂದಕ್ಕೊಂದು ಅನ್ಯೋನ್ಯ ಸಂಬಂಧ ಇದೆ. ಆದ್ದರಿಂದ ಆಹಾರೋತ್ಪಾದನೆಯನ್ನು ಮಾಡುವುದು ಬಹಳ ಪ್ರಾಮುಖ್ಯವಾದ ವಿಷಯ. ಈ ದೃಷ್ಟಿಯಿಂದ ಸರ್ಕಾರದವರು ತೀವ್ರಗತಿಯಿಂದ ಈ ವಿಚಾರದಲ್ಲಿ ದಕ್ಷತೆ ವಹಿಸಿ ಕೆಲಸ ಮಾಡಬೇಕು. ಈ ವಕ್ಕಲುತನದ ಇಲಾಖೆ ಏನಿದೆ ಇದು ಅನೇಕ ಜನರ ಅಭಿಪ್ರಾಯದ ಪ್ರಕಾರ ನಿರ್ಜೀವವಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದ್ದರಿಂದ ಸರ್ಕಾರದವರು ಈ ಇಲಾಖೆಯ ಕಡೆ ಗಮನಕೊಟ್ಟು ನಿರ್ಜೀವವಾಗಿರತಕ್ಕದ್ದನ್ನು ಸಜೀವವಾಗುವಂತೆ ಮಾಡಬೇಕು. ದಕ್ಷತೆಯಿಂದ ತೀವ್ರಗತಿಯಿಂದ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು. ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ರೈತರಿಗೆ ಬೇಕಾದ ಸೌಕರ್ಯವನ್ನು ಒದಗಿಸಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri J. P. SARWESH (Serum).—Sir, supporting the Resolution before the House, I only wish to make a few suggestions as directed by the Speaker, as to how we can produce more food.

Sir, the first point is, there are hundreds of thousands of breached tanks in the State. These breached tanks......

Mr. SPEAKER.—That has been already suggested. Hon'ble Member may give new points. What is the use of repeating ?

Sri J. P. SARWESH.—These tank-beds should be auctioned for cultivation and they should be thrown open for early cultivation.

Mr. SPEAKER.—So the point is that breached tanks need not be repaired and they should be auctioned for cultivation annually ?

Sri J. P. SARWESH.—Because of lack of finances, we are unable to restore all of them. That is why I say that.

Then, in each village, 10 per cent of the land is reserved for grazing purposes. Specially when these grazing lands are situated in the remote corners where cattle cannot go for grazing, these lands may be given for cultivation. That will increase the food production.

Mr. SPEAKER.—That is a good idea.

Sri J. P. SARWESH.—In forest areas, there are several acres of lnad which do not contain a single plant worth the name. In my own area there are such lands lying fallow for years together. My suggestion is that such lands should be given for cultivation so that it may be utilised for producing more food crops.

In some of the areas where there are rivers, cultivation is possible on the river bunds. I suggest that those lands also may be thrown open for cultivation, in order to step up food production.

With these remarks, I close.

12-30 P.M.

† ಶ್ರೀ ಜಿ. ಎನ್. ದೇಸಾಯಿ (ಹಾನಗಲ್).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಡಿ. ಎಂ. ಸಿದ್ಧಯ್ಯನವರು ಮಂಡಿಸಿರುವ ಆಹಾರ ಉತ್ಪನ್ನದ ಠರಾವನ್ನು ಸ್ವಾಗತಿಸುತ್ತಾ ಒಂದೆರಡು ಸೂಚನೆಗಳನ್ನು ಇಲ್ಲಿ ಮಾಡಬಯಸುತ್ತೇನೆ. ಈಗಿನ ತುರ್ತು ಪರಿಸ್ಥಿತಿಯಲ್ಲಿ ಪರದೇಶಗಳ ಮೇಲೆ ಆಹಾರ ಪದಾರ್ಥಗಳಿಗಾಗಿ ಅವಲಂಬನೆ ಮಾಡುತ್ತಿರುವುದು ನಿಲ್ಲಬೇಕಾಗಿದೆ. ಆದರೆ ಈಗ ನನಗೆ ಮಾನ್ಯ ಅಧ್ಯಕ್ಷರು ಕೊಟ್ಟಿರುವ ಕಾಲಾವಕಾಶವು ಬಹಳ ಕಡಿಮೆ ಇರುವುದರಿಂದ ಕೆಲವೇ ಸೂಚನೆಗಳನ್ನು ಮಾತ್ರ ಇಲ್ಲಿ ಕೊಡಲು ಇಷ್ಟಪಡುತ್ತೇನೆ.

ನಮಗೆ ಇಂಟೆನ್‌ಸೀವ್ ಕಲ್ಟಿವೇಷನ್ ಬಹು ಮುಖ್ಯ. ಇಂಟೆನ್‌ಸೀವ್ ಕಲ್ಟಿವೇಷನ್ನು ಮಾಡಿ ನಾವು ಹೆಚ್ಚು ಆಹಾರವನ್ನು ಬೆಳೆಯಬೇಕಾಗಿದೆ. ಇದಕ್ಕೆ ನೀರು ಹಾಗೂ ಗೊಬ್ಬರ ಇವೆರಡೂ ಬಹಳ ಮುಖ್ಯವಾಗಿ ಬೇಕು. ಮುಖ್ಯವಾಗಿ ನೀರು ಕೊಡುವುದಕ್ಕೆ ಮೂರು ವಿಭಾಗಗಳಿವೆ. ಒಂದು ಮೇಜರು ಇರಿಗೇಷನ್ನು, ಎರಡನೇದು ಮೈನರು ಇರಿಗೇಷನ್ನು ಮತ್ತು ಎಲೆಕ್ಟ್ರಿಸಿಟಿಯ ಮೂಲಕ ಆಗುವ ಲಿಫ್ಟ್ ಇರಿಗೇಷನ್ನು. ಇವು ಮೂರು ವಿಧಾನಗಳಲ್ಲಿ ಮೊದಲಿಗೆ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಲು ಸರಕಾರ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಇದಕ್ಕಿಂತ ಮೊದಲಿಗೆ ಮೈನರು ಇರಿಗೇಷನ್ನು ಹಾಗೂ ಲಿಫ್ಟ್ ಇರಿಗೇಷನ್ನು ಇಂತಹ ಯೋಜನೆಗಳನ್ನು ತೆಗೆದುಕೊಂಡರೆ ಸ್ವಲ್ಪ ವೇಳೆಯಲ್ಲಿ ಅದರ ಪ್ರತಿಫಲ ದೊರಕುತ್ತದೆ, ಅದರಿಂದ ಜನಕ್ಕೆ ಅನುಕೂಲವಾಗುತ್ತದೆ. ದೊಡ್ಡ ಯೋಜನೆ ಮಾಡುವುದಕ್ಕೆ ಹೋದರೆ ತತ್ಕಾಲಕ್ಕೆ ಫಲ ಸಿಗುವುದಿಲ್ಲ. ಆ ಕಾರಣ ಮೈನರು ಇರಿಗೇಷನ್ನು ಬಗ್ಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು ಅದನ್ನು ಬೇಗನೆ ಪೂರೈಸಿದರೆ ಅದರಿಂದ ಸ್ವಲ್ಪವೇ ಕಾಲದಲ್ಲಿ ಅದರ ಫಲ ಸಿಗುತ್ತೆ. ಇದರ ಕಡೆಗೆ ದೃಷ್ಟಿ ಕೊಡಬೇಕೆಂದು ನನ್ನ ವಿನಂತಿ.

ಇದರ ಜೊತೆಗೆ ಇರುವ ಕೆರೆ ಹಾಗೂ ಕಟ್ಟೆಗಳನ್ನು ವಾರ್ ಫುಟಿಂಗ್ ಮೇಲೆ ಒಂದು ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡಬೇಕು. ನಮ್ಮ ಹಾನಗಲ್ ತಾಲ್ಲೂಕಿನ ಉದಾಹರಣೆಯನ್ನೇ ತೆಗೆದುಕೊಂಡರೆ, ಇಲ್ಲಿ ಸುಮಾರು 1,300 ಕೆರೆಗಳಿವೆ. ಇವುಗಳಲ್ಲಿ 300 ರಿಂದ 400 ಕೆರೆಗಳು ನಾದುರಸ್ತಾಗಿವೆ. ಕೆಲವು ಕೆರೆಗಳಿಗೆ ತೂಬುಗಳಿಲ್ಲ. ಕೆಲವು ಒಡೆದು ಹೋಗಿವೆ. ಇವನ್ನೆಲ್ಲಾ ದುರಸ್ತು ಪಡಿಸದ್ದಿದರೆ ಹೆಚ್ಚು ಆಹಾರದ ಬೆಳೆ ಬೆಳೆಯಬಹುದಾಗಿತ್ತು. ಆದುದರಿಂದ ನಮ್ಮ ಸರಕಾರದವರು ಇಲ್ಲಿರುವ ಇಲಾಖಾ ಇಂಜನೀಯರುಗಳಿಗೆ ಹೊಸ ಕೆರೆಗಳ ಕೆಲಸ ಮಾಡುವುದನ್ನು ನಿಲ್ಲಿಸಿ ನಾದುರಸ್ತಾಗಿರುವ ಕೆರೆಗಳನ್ನು ಮೊದಲಿಗೆ ತೆಗೆದುಕೊಂಡು ದುರಸ್ತಿ ಮಾಡಿದರೆ ಅದರಿಂದ ಜನ ಹೆಚ್ಚು ಬೆಳೆ ಬೆಳೆಯಲು ಅನುಕೂಲ ಮಾಡಿದಂತಾಗುತ್ತದೆ. ಆದರೆ ಸರಕಾರದವರು ಈಚೆಗೆ ಇಂತಹ ಹಳೆ ಕೆರೆಗಳನ್ನು ದುರಸ್ತಿ ಮಾಡುವಾಗ ಹಳ್ಳಿಯವರೇ ಅರ್ತ್‌ವರ್ಕ್ ಮಾಡಬೇಕು; ಅನಂತರ ಸರಕಾರದವರು ದುರಸ್ತಿ ಮಾಡುತ್ತಾರೆ ಎಂದು ಇಲಾಖೆಯವರು ಹೇಳುತ್ತಾರೆ. ಹೀಗಾಗಿ ಹಳ್ಳಿಯವರು ಅರ್ತ್‌ವರ್ಕ್ ಮಾಡುತ್ತಿಲ್ಲ, ಇರುವ ಹಳೆಯ ಕೆರೆಗಳೂ ದುರಸ್ತಿಯಾಗುತ್ತಿಲ್ಲ. ಹೀಗಾಗಿ ಯಾವ ಕೆರೆ ಕೆಲಸಗಳೂ ಆಗುತ್ತಿಲ್ಲ. ನಾನು ಇದರ ಬಗ್ಗೆ ಸರಕಾರಕ್ಕೆ ವಿನಂತಿ ಮಾಡುವುದು ಈಗ ನಾದುರಸ್ತು ಆಗಿರುವ ಕೆರೆಗಳನ್ನು ಸರಕಾರದವರೇ ನೇರವಾಗಿ ದುರಸ್ತು ಮಾಡಿಸಿ ನೀರು ಬರುವಂತೆ ಅನುಕೂಲ ಮಾಡಿಕೊಟ್ಟರೆ ಮುಂದೆ ಅಲ್ಲಿರುವ ಜನರಿಂದ ಕಾಯಿದೆಗನುಸಾರವಾಗಿ ವಾಟರು ರೇಟು ಹಾಗೂ ಪ್ರತಿಯೊಂದು ಎಕರೆಗೂ ಇಷ್ಟು ಸೆಸ್ಸು ಎಂದು ವಸೂಲು ಮಾಡಿಕೊಳ್ಳಲು ಅವಕಾಶವಿದೆ. ಅದರಂತೆ ಜನರೂ ಸಂತೋಷದಿಂದ ಕೊಡಲೂ ಮುಂದೆ ಬರುತ್ತಾರೆ. ಇದರ ಬಗ್ಗೆ ಸರಕಾರ ಲಕ್ಷ್ಯ ಕೊಟ್ಟು ನಾದುರಸ್ತು ಕೆರೆಗಳನ್ನು ಬೇಗನೆ ದುರಸ್ತು ಮಾಡಿಕೊಡಬೇಕು ಎಂದು ನನ್ನ ವಿನಂತಿ. ಹೀಗೆ ಮಾಡಿದರೆ ಹೆಚ್ಚು ಬೆಳೆ ಬರುವುದರಲ್ಲಿ ಸಂದೇಹವಿಲ್ಲ.

ಎರಡನೆಯದು, ದೊಡ್ಡ ನೀರಾವರಿ ಯೋಜನೆಯ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಹೊಸದಾಗಿ ತೆಗೆದುಕೊಂಡಿರುವ ಯೋಜನೆಗಳನ್ನೂ ಅದಷ್ಟು ತೀವ್ರವಾಗಿ ಮಾಡಲು ಅಲ್ಲಿರುವ ನೀರನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಕೆಲವು ಕಡೆ ಪೂರ್ತಿ ನೀರು ಉಪಯೋಗವಾಗದಂತಾಗಿದೆ. ಏಕೆಂದರೆ ಅದಕ್ಕೆ ದೊಡ್ಡ ಕಾಲುವೆಗಳನ್ನು ತೆಗೆಯುವ ಕೆಲಸ ಸರಿಯಾಗಿ ಮಾಡಿರುವುದಿಲ್ಲ. ಇದರಿಂದ ಅಲ್ಲಿ ಡೆವಲಪ್‌ಮೆಂಟ್ ಆಗುವುದು ಕಷ್ಟವಾಗುತ್ತದೆ. ಹಾಗೆ ನಮ್ಮ ಭಾಗದಲ್ಲಿರುವ ಎಂದರೆ ಹಾನಗಲ್ ತಾಲ್ಲೂಕಿನ ಬಳಿ ಇರುವ ಧರ್ಮಾ ಜಲಾಶಯದ ಯೋಜನೆ ಸುಮಾರು ಒಂದು ಕೋಟಿಯಷ್ಟು ವೆಚ್ಚದಲ್ಲಿ ಮಾಡಿದ್ದು ಹೋದ ವರ್ಷದಲ್ಲಿ ಪೂರೈಸಲಾಗಿದೆ. ಆದರೆ ಅದರಿಂದ ನೀರು ಕೊಡಲು ಕಾಲುವೆಗಳನ್ನು ತೋಡುವುದರಲ್ಲಿ ಸ್ವಲ್ಪ ಅಡ್ಡಿ ಬಂದುದರಿಂದ ತುದಿಯಲ್ಲಿರುವ ಜಮೀನುಗಳಿಗೆ ಎಂದರೆ ಸುಮಾರು ನಾಲ್ಕು ಸಾವಿರದಷ್ಟು ಎಕರೆ ಪ್ರದೇಶಕ್ಕೆ ನೀರು ಸಿಗದೆ ಬಹಳ ತೊಂದರೆಯಾಯಿತು. ಕಾಲುವೆಯನ್ನು ಸರಿಯಾಗಿ ಮಾಡಿದ್ದರೆ ಎಲ್ಲ ಭಾಗಗಳಿಗೂ ನೀರು ಸಿಗುತ್ತಿತ್ತು. ಇದರಿಂದ ಕೆಲವು ಕಡೆ ಕಾಲುವೆಗಳು ಒಡೆದು

ನೀರು ಸರಿಯಾಗಿ ಸಿಗಲಿಲ್ಲ. ಆದುದರಿಂದ ಕಾಲುವೆಗಳನ್ನು ಸರಿಯಾಗಿ ಅಗಲವಾಗಿ, ಲೀಕ್ ಪ್ರೂಫ್ ಆಗಿ ನೀರು ಸಿಗುವಂತೆ ಮಾಡಿ ಇಲ್ಲಿರುವ ನಾಲ್ಕು ಸಾವಿರ ಎಕರೆಗಳಷ್ಟು ಪ್ರದೇಶಕ್ಕೆ ನೀರನ್ನು ಒದಗಿಸಿಕೊಡಲು ಸರಕಾರ ಸಹಾಯ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಹೇಳುವುದೇ ಇಷ್ಟೇ. ಇಲ್ಲಿ ಇದಕ್ಕಾಗಿ ಮಾಡಿರುವ ರೀ ಮಾಡೆಲ್ ಚಾನಲ್ ಸ್ಕೀಂನ್ನು ತೀವ್ರವಾಗಿ ಕೈಗೊಂಡು ಇಲ್ಲಿ ಲೀಕ್ ಬರಲು ಸಹಾಯ ಮಾಡಿಕೊಡಬೇಕು. ಒಟ್ಟು 14,000 ಎಕರೆಗಳಷ್ಟು ಪ್ರದೇಶದಲ್ಲಿ 10,000 ಎಕರೆಗಳಷ್ಟು ಪ್ರದೇಶಕ್ಕೆ ಮಾತ್ರ ಈಗ ನೀರು ಸಿಗುತ್ತಿದೆ. ಉಳಿಕೆಯಾದ 4,000 ಎಕರೆಗಳಿಗೆ ನೀರು ಸಿಗುತ್ತಿಲ್ಲ. ಇದಕ್ಕೆ ಮಾಡಿರುವ ಸ್ಕೀಮನ್ನು ತೀವ್ರವಾಗಿ ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ. ಈಗ ಒಂದು ವರ್ಷದ ಹಿಂದೆಯೇ ಇದನ್ನು ಮಾಡಿದ್ದರೆ ನಮಗೆ ಹೆಚ್ಚು ಆಹಾರ ದವಸ ಬೆಳೆಯಲು ಅನುಕೂಲವಾಗುತ್ತಿತು. ಈಗಲಾದರೂ ಬೇಗನೆ ಮಾಡಬೇಕೆಂದು ನಾನು ಸೂಚನೆ ಕೊಡುತ್ತಿದ್ದೇನೆ.

ಎಲೆಕ್ಟ್ರಿಸಿಟಿ ಬಗ್ಗೆ ನನ್ನದೊಂದು ಸೂಚನೆ ಇದೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು ನೂರು ಪಂಪು ಸೆಟ್ಟುಗಳಿಗಾಗಿ ಅರ್ಜಿ ಕೊಟ್ಟಾಗ ಅದಕ್ಕೆ ತಕ್ಕಂತೆ ಬಾವಿಗಳನ್ನು ತೆಗೆಸಬಹುದಾಗಿತ್ತು. ಆದರೆ ಇಲ್ಲಿ ಒಂದು ಹೆಚ್. ಪಿ. ಪವರು ತೆಗೆದುಕೊಳ್ಳಬೇಕಾದರೆ 600 ರೂಪಾಯಿಗಳಷ್ಟು ಖರ್ಚು ಬರತ್ತೆ ಎಂದು ಇದನ್ನು ಮಾಡಬಾರದು ಎಂದು ಇಲ್ಲಿನ ಇಲಾಖೆಯವರು ಹೇಳುತ್ತಿದ್ದಾರೆ. ಇದರ ಪರಿಣಾಮವಾಗಿ ಇಲ್ಲಿ ಜನಕ್ಕೆ ಪವರು ಸಿಗುತ್ತಿಲ್ಲ. ಇದಕ್ಕೆ ನನ್ನ ಸೂಚನೆ ಒಂದು ಇದೆ. ನಮ್ಮ ಹಾನಗಲ್ ತಾಲ್ಲೂಕಿನಲ್ಲಿ ವರದಾ ನದಿ ಇದೆ. ಇದರ ಮೂಲಕ ಒಂದು ಮೇನ್ ಲೈನ್ ಎಳೆದರೆ ನಮ್ಮ ಭಾಗದ ಜನರಿಗೆ ಪಂಪು ಸೆಟ್ಟುಗಳು ತೆಗೆಯಲು ಅನುಕೂಲವಾಗುತ್ತದೆ ; ಆಗ ಖರ್ಚೂ ಕೂಡ ಕಡಿಮೆ ಬರುತ್ತದೆ. 600 ರೂಪಾಯಿಗಳಷ್ಟು ಬೀಳುವುದಿಲ್ಲ. ಇದನ್ನು ಸರಕಾರದವರು ಪರಿಶೀಲಿಸಿ ಬೇಗನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಲೆವಿ ಆರ್ಡರು ಬಗ್ಗೆ ಒಂದು ಸೂಚನೆ ಇದೆ. ಸರ್ಕಾರದವರು ಈಗ ಮಾಡಿರುವುದು ಯೋಗ್ಯವಾಗಿದೆ. ಇಂತಹ ಗಂಡಾಂತರ ಪರಿಸ್ಥಿತಿಯಲ್ಲಿ ಸರಕಾರಕ್ಕೆ ಆಹಾರ ಧಾನ್ಯ ಕೊಡಬೇಕಾದುದು ಯೋಗ್ಯ. ಅದರೆ ಈಗ ಮಾಡಿರುವುದರಲ್ಲಿ ಎರಡೇ ಎರಡು ಕ್ಯಾಟಗರಿಗಳು ಎಂದು ಮಾಡಿದ್ದಾರೆ ಎಂದರೆ ಮೇಜರು ಇರಿಗೇಷನ್ನು, ಮೈನರು ಇರಿಗೇಷನ್ನು ಎಂದು. ಇದರ ಜೊತೆಗೆ ಮಧ್ಯಮ ವರ್ಗದ ಒಂದು ತರಗತಿಯೂ ಇದ್ದರೆ ವಾಸಿ. ಈ ಮೂರು ಕ್ಯಾಟಗರಿಗಳೂ ಇದ್ದರೆ ಸಣ್ಣ ಸಣ್ಣ ಕೆರೆಗಳ ಮೂಲಕ ಸಾಗು ಮಾಡುವವರಿಂದಲೂ ಧಾನ್ಯ ವಸೂಲಿ ಮಾಡಲು ಒಂದು ಪ್ರಾವಿಷನ್ ಇರುವುದು ಯುಕ್ತವಾಗಿ ಕಾಣುತ್ತದೆ. ಎಲ್ಲಿ ಬೆಳೆಯಾಗುವುದಿಲ್ಲವೋ ಅಲ್ಲಿಯೂ ವಸೂಲಿ ಹೇಗೆ ಮಾಡುವುದು ಎನ್ನುವುದಕ್ಕೆ ಇದರಲ್ಲಿ ಏನೂ ಇಲ್ಲ.

ಶ್ರೀ ಬಿ. ಡಿ. ಜತ್ತಿ.—ಬೆಳೆ ಬೆಳೆಯದಿದ್ದರೆ ಅಲ್ಲಿ ತೆಗೆದುಕೊಳ್ಳುವ ಪ್ರಮೇಯ ಬರುವುದಿಲ್ಲ.

ಶ್ರೀ ಜಿ. ಎನ್. ದೇಸಾಯಿ.—ಇದರ ಬಗ್ಗೆ ಅಧಿಕಾರಿಗಳಿಗೆ ಸರಿಯಾದ ನೀತಿಯನ್ನು ಹಾಕಿಕೊಡಬೇಕು. ಅಲ್ಲದೆ ಧಾರಣೆ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಈಗಿರುವ ಧಾರಣೆ ಯೇನೋ ಯೋಗ್ಯವಾಗಿದೆ, ಇದನ್ನು ಕಡಿಮೆ ಮಾಡಿದರೆ ಒಕ್ಕಲು ಮಾಡುವ ಜನರಿಗೆ ಅವರಿಗೆ ಬೇಕಾಗುವ ಸಾಮಾನುಗಳೂ ಸರಿಯಾದ ಧಾರಣೆಯಲ್ಲಿ ಸಿಗುವಂತೆ ಸರಕಾರ ಏರ್ಪಾಡು ಮಾಡಬೇಕು. ಈ ಧಾರಣೆಯನ್ನು ಹೇಗೆ ಪುನರ್ವಿಮರ್ಶೆ ಮಾಡಬಹುದು ಎನ್ನುವುದನ್ನು ಸರಕಾರ ಯೋಚಿಸಬೇಕು ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri K. S. SURYANARAYANA RAO (Mysore City).—Sir, I do not wish to go to the details but only give a few hints. I will commence from the reverse order. Production and distribution is the order but I go from the distribution to production order. Sir, it is a good thing that the Food Corporation of India has come into existence and it is only from that organisation that we should channalise all the foodgrains. Unless that is done, I am afraid even another two plans will not solve this food problem. After 18 years of planning, we are still to believe that there is something like 8 to 10 per cent of shortage. It is good that the war and the emergency have woke us up. I only suggest that the Food Corporation should handle if not 100 per cent of the trade, at least 75 per cent of the trade. To-day, we have several intermediaries. These must be removed *i.e.*, the District Whole-sale Co-operative Societies must be removed. They are superfluous so far as foodgrain distribution is concerned. Most of these wholesale co-operative societies, though not

(SRI K. S. SURYANARAYANA RAO)

all, have become centres of rackets ; I must use that word. I know one of the societies have gone on issuing things beyond their normal limits of trade. which means beyond the permit. I know instances where foodgrains have been issued in excess of the allotments made. I know instances where sugar has been issued beyond the permits, running up to several thousands of quintals. That is the position. Therefore, we must minimise the distribution agencies if we want to minimise the corruption.

Then, Sir, when we talk of the Food Corporation to take up 75 per cent of the foodgrains for distribution, the levy is the only means. Levy should be in such a way that it should not cause hardship to the grower. So, price fixation must be done much before the season and the Corporation should receive all the grain from the proper channel and storage facility must be there. If this is done, there will be incentive to the growers to grow more. That is how I look at it from the distribution point of view. Then, this would also ensure the avoidance of speculation. So far as foodgrain is concerned, speculation should be minimum. In a mixed economy and developing economy in our country, the prices are very likely to go up from year to year and from season to season and that should be curbed. The difficulty of the consumer should also be considered.

From the point of view of more production, I suggest that in addition to enlargement of acreage under food crop, as an immediate measure, there should be intensive cultivation. We have not susccessfully tried in our country the wet *cum* dry system. In Tungabhadra area wherever this is done, it is not properly implemented or planned. That is how there is a large clamour for doing away with this system. In Indian agriculture, large percentage of land depend on rainfall for dry crop. The other way is the lift irrigation or well irrigation. That is a very small portion and largest portion of our agriculture still depends upon rainfall. However much we may provide irrigation facilities, it will not solve our problem unless we balance our production with the commercial crop and with the dry crop. So, as an experimental measure, in minor irrigation and major irrigation areas, 25 per cent of additional foodgrains must be got. For every person holding 5 acres, one acre should be reserved for raising dry crop in that area. That dry crop does not require much water because there will be wetness alround. In some villages the whole area is reserved for wet crop and some villages reserve the whole land for dry crop. Therefore, there is a clamour for water. If the holding is taken as a unit and reserve 25 per cent of the unit for raising dry crop by compulsion, then, we would have extended the irrigation facility by 25 per cent. This would help to raise the required quantity of foodgrains. This is the short term programme that I would suggest.

One word about the Department. The department has been so far only a department of officers and not of guides and advisors. It should be so oriented as to make them not police officers from the top to bottom

but become advisors of the agricultural class. It is only by educating the agricultural class that we expect to grow more within the limited facility at our disposal. Therefore, there is much scope for re-thinking about the reorganisation of the department in making it more dynamic and more helpful to the cultivators.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ನಾನು ಒಂದೇ ಒಂದು ಅತಿ ಮುಖ್ಯವಾದ ಅಂಶವನ್ನು ಮಾನ್ಯ ಸಭೆಯ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ. ಇಲ್ಲಿಯತನಕ ಮಾನ್ಯ ಸದಸ್ಯರು ಗೊಬ್ಬರದ ವಿಷಯವನ್ನು ಹೇಳಿದವರು ಯಾರೊಬ್ಬರೂ ಕೂಡ ಮನುಷ್ಯರು ವಿಸರ್ಜಿಸತಕ್ಕ ಗೊಬ್ಬರದ ವಿಷಯ ಯೋಚನೆ ಮಾಡಿದಹಾಗೆ ಕಾಣಲಿಲ್ಲ. ಮನುಷ್ಯ ಪ್ರತಿಯೊಬ್ಬನೂ ಕೂಡ ಪ್ರತಿದಿವಸ 5—6 ತೊಲೆಯಷ್ಟು ಗೊಬ್ಬರವನ್ನು ಉತ್ಪನ್ನ ಮಾಡುತ್ತಾ ಇದ್ದಾನೆ. ಹಳ್ಳಿಗಳ ಕಡೆ ಮನುಷ್ಯನ ಮಲಮೂತ್ರವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸತಕ್ಕ ಮಾರ್ಗವನ್ನು ಅನುಸರಿಸುತ್ತಾ ಇಲ್ಲ. ಮುನಿಸಿಪಾಲಿಟಿಯವರಾಗಲಿ, ಪೋಲೀಸ್ ಇಲಾಖೆಯವರಾಗಲಿ, ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯವರಾಗಲಿ ಯಾರೂ ಕೂಡ ಈ ವಿಷಯದಲ್ಲಿ ಜನಗಳಿಗೆ ಸರಿಯಾದ ತಿಳುವಳಿಕೆಯನ್ನು ಕೊಡುತ್ತಾ ಇಲ್ಲ. ಹಳ್ಳಿಗಳ ಕಡೆ ಜನರು ತಮ್ಮ ಮಲವನ್ನು ಮೂತ್ರವನ್ನು ಸಿಕ್ಕ ಸಿಕ್ಕ ಕಡೆ ಸಿಕ್ಕಾಪಟ್ಟೆ ಕಳೆಯುತ್ತಾ ಇದ್ದಾರೆ. ಆದ್ದರಿಂದ ತಾವು ಮುನಿಸಿಪಾಲಿಟಿಯವರಿಗೆ, ಪಂಚಾಯ್ತಿಯವರಿಗೆ ಹೇಳಿ ಅಲ್ಲ ಸರಿಯಾದ ಕಕ್ಕಸ್ಸುಗಳನ್ನು ಕಟ್ಟಿಸಿ ಪ್ರತಿಯೊಬ್ಬರೂ ಅಲ್ಲಿಯೇ ಮಲ ಮೂತ್ರಗಳನ್ನು ವಿಸರ್ಜಿಸಬೇಕೆಂದು ತಿಳವಳಿಕೆಕೊಟ್ಟು ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಲು ಪ್ರಯತ್ನ ಮಾಡಬೇಕೆಂದು ಹೇಳಿ ಈ ನನ್ನ ಒಂದು ಹೊಸ ಸಲಹೆಯನ್ನು ಸರ್ಕಾರದವರಿಗೆ ಕೊಡಲು ಅಪೇಕ್ಷೆಪಡುತ್ತೇನೆ.

MR. SPEAKER.—The House will now rise and reassemble at 9 A.M. on Monday, the 18th October 1965.

The House adjourned at Fifty-two Minutes past Twelve of the Clock to meet again at Nine of the Clock on Monday, the 18th October 1965.